




ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ರಜತಸಿರಿ

ರಜತಮಹೋತ್ಸವ ೧೯೭೯-೨೦೦೪



• ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್
ಪ್ರೊ. ನಾ. ಗೀತಾಚಾರ್ಯ



ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ರಜತಮಹೋತ್ಸವ ೧೯೭೯-೨೦೦೪

ರಜತಸಿರಿ

(ಬೆಳ್ಳಿಹಬ್ಬದ ಸವಿಸಂಚಿಕೆ)

ಸಂಪಾದಕರು

ಎಸ್.ವಿ. ಶ್ರೀನಿವಾಸರಾವ್

ಪ್ರೊ. ನಾ. ಗೀತಾಚಾರ್ಯ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ. ಕಲಾಭವನ

೩-೪ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು -೫೬೦೦೧೯, ದೂರವಾಣಿ : ೨೬೬೧೫೪೭೭

"**RAJATASIRI**" a Souvenir
Published by B.M.Sri. Smaraka Pratishtana,
3, 4th Main, Narasimharaja Colony,
Bangalore - 19. ✆ : 26625877

Year of Publication : 2004

Cover Page Design : U.T. Suresh

Printed at
ILA Mudrana
No. 36, 40 Ft. Road
Raghavanagar, New Timberyard Layout
Bangalore - 560 026
✆ : 26757159 / 30615773

ಸಂಪಾದಕೀಯ

ಒಂದು ಸಂಸ್ಥೆಯನ್ನು ಕಟ್ಟುವುದು ಸುಲಭ. ಒಬ್ಬ ಕ್ರಿಯಾಶೀಲ ವ್ಯಕ್ತಿ ತನ್ನ ಚುಂಬಕ ವ್ಯಕ್ತಿತ್ವ ಹಾಗೂ ಸ್ಫೂರ್ತಿದಾಯಕ ಮಾತುಗಾರಿಕೆಯಿಂದ ಒಂದು ಸಂಸ್ಥೆಯ ಅಸ್ತಿತ್ವಕ್ಕೆ ಬುನಾದಿ ಹಾಕಬಹುದು. ಆದರೆ ಅದರ ಮೇಲೆ ಚಿರಕಾಲ ಉಳಿಯುವ ಸುಭದ್ರ ಸೌಧವನ್ನು ನಿರ್ಮಿಸಿ ನಿರಂತರ ನಡೆಸಿಕೊಂಡು ಹೋಗುವಂತಹ ಚಾಲನೆಯನ್ನು ಕೊಡಬೇಕಾದರೆ ನಿಸ್ಪೃಹ ಕ್ರಿಯಾಶೀಲತೆ, ದಕ್ಷತೆ, ಮುನ್ನೆಚ್ಚರಿಕೆಯ ಮುಂದಾಲೋಚನೆ, ಮುನ್ನಡೆಸುವ ಕೆಚ್ಚೆದೆ, ಯೋಜನೆ ನಿರ್ಮಿಸುವ ಕುಶಲತೆ, ಪ್ರಜ್ಞಾವಂತ ವಿಚಾರಧಾರೆ ಇವೆಲ್ಲವುಗಳ ಜೊತೆಯಲ್ಲಿ ನಿಷ್ಕಾಮ ಕಾರ್ಯಕ್ಷಮತೆಯ ಆವಶ್ಯಕತೆಯೂ ಇರುತ್ತದೆ. ಸಂಸ್ಥೆಯನ್ನು ನಿರಂತರ ಮುನ್ನಡೆಸುವ ಸಾಮರ್ಥ್ಯವುಳ್ಳ ಮುಂದಾಳುಗಳು ಒಬ್ಬರಾದ ನಂತರ ಇನ್ನೊಬ್ಬರು ಈ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಿರಬೇಕಾಗುತ್ತದೆ. ಅಲ್ಲದೆ ಇವರುಗಳು ಆ ಸಂಸ್ಥೆಯ ಧ್ಯೇಯ ಧೋರಣೆಗಳ ನೀತಿ ನಿಯಮಗಳು, ಆಸೆ ಆಕಾಂಕ್ಷೆಗಳನ್ನು ಚೆನ್ನಾಗಿ ಅರಿತವರಾಗಿರಬೇಕು. ಈ ಸಂಸ್ಥೆ ರೂಪಿಸುವ ಜನಪರ, ಜನಹಿತ, ಸಾಹಿತ್ಯಿಕ, ಸಾಂಸ್ಕೃತಿಕ ಯೋಜನೆಗಳು ಜನಮೆಚ್ಚುಗೆ ಗಳಿಸುವಂತಿರಬೇಕು ಹಾಗೂ ಆಕರ್ಷಕವಾಗಿರಬೇಕು. ಆಗಲೇ ಆ ಸಂಸ್ಥೆ ತನ್ನ ಇವನ್ನು ಜಗಜ್ಜಾಹಿರುಗೊಳಿಸಿ ತನ್ನ ಅಸ್ತಿತ್ವ ಸುಗಂಧವನ್ನು ಸುತ್ತಲ್ಲೂ ಹರಿಸಲು ಸಾಧ್ಯ.

ಈ ಸುವರ್ಣ ಹಿನ್ನೆಲೆಯಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಕಟ್ಟಿದ ಈ ಸಂಸ್ಥೆ ಅವರೆಲ್ಲ ಆಶೋತ್ತರ ಗಳನ್ನು ಈಡೇರಿಸುತ್ತಾ ಬಂದಿದ್ದು, ಇದೀಗ ಬೆಳ್ಳಿಹಬ್ಬವನ್ನು ಆಚರಿಸಲು ಸಿದ್ಧವಾಗಿದೆ. ಇದು ನಿಜಕ್ಕೂ ಸ್ತುತ್ಯರ್ಹ ಬೆಳವಣಿಗೆ.

ಈ ಸಂಸ್ಥೆ ಬೆಳೆಯುವಲ್ಲಿ ಶ್ರಮಿಸಿದವರು ಹಲವರು. ಅವರೆಲ್ಲರನ್ನು ನೆನೆದು ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಈ ದಿಸೆಯಲ್ಲಿ ಶ್ರೀ ನಿಟ್ಟೂರು ಶ್ರೀನಿವಾಸರಾಯರ ಸರ್ವತೋಮುಖಿ ನೆರವು, ಸಲಹೆ, ಸೂಚನೆ ಹಾಗೂ ನಿಷ್ಕಲ್ಮಷ ಸೇವೆಯನ್ನು ನಾವು ಮರೆಯುವಂತೆಯೇ ಇಲ್ಲ. ಅವರಿಗೆ ನಾವೆಲ್ಲರೂ ತುಂಬಾ ಆಭಾರಿಯಾಗಿರುತ್ತೇವೆ. ಶ್ರೀನಿಟ್ಟೂರು ಅವರಿಗೆ ತಾನು ಬೆಳೆಸಿದ ಈ ಸಂಸ್ಥೆಯ ಬೆಳ್ಳಿಹಬ್ಬವನ್ನು ನೋಡುವ ಆಸೆಯಿತ್ತು. ಆದರೆ ದುರ್ವಿಧಿ ಇದನ್ನು ಆಗಗೊಡಲಿಲ್ಲ. ಕೇವಲ ಒಂದು ತಿಂಗಳ ಮುಂಚೆ ಇವರು ನಮ್ಮೆಲ್ಲರನ್ನು ಆಗಲಿ ಹೋದುದು ಅತ್ಯಂತ ದುಃಖದ ಸಂಗತಿ. ಇದಕ್ಕೆ ವಿಷಾದ ವ್ಯಕ್ತಪಡಿಸುತ್ತ ಅವರ ದಿವ್ಯ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಲಿ ಎಂದು ಭಗವಂತನಲ್ಲಿ ಕೋರುತ್ತೇನೆ.

ಈ ಸಂಸ್ಥೆಯು ನಡೆದು ಬಂದ ದಾರಿಯನ್ನು ಅವಲೋಕಿಸಿದರೆ ಸನ್ಮಾನ್ಯರುಗಳಾದ ಪ್ರೊ.ಎಲ್.ಎಸ್. ಶೇಷಗಿರಿರಾವ್, ಶ್ರೀಎನ್. ಬಸವಾರಾಧ್ಯ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಯವರು ಅಧ್ಯಕ್ಷರಾಗಿ ಈ ಸಂಸ್ಥೆಯನ್ನು ಬೆಳೆಸುವಲ್ಲಿ , ಸುಸಜ್ಜಿತಗೊಳಿಸುವಲ್ಲಿ, ಚಟುವಟಿಕೆಗಳಿಂದ ಜನಾದರಗಳಿಸುವಲ್ಲಿ ಯಶಸ್ವಿ ಯಾಗಿರುತ್ತಾರೆ. ಈ ಸಂಸ್ಥೆಯ ನಿರ್ಮಾಣ ಹಾಗೂ ನಿರ್ವಹಣೆಯ ಎಲ್ಲ ಹಂತದಲ್ಲೂ ಆಶೀರ್ವದಿಸಿ ಪೂರ್ಣ ಸಹಕಾರ ಮತ್ತು ಸಹಾಯ ನೀಡುತ್ತಿರುವ ಪೂಜ್ಯರಾದ ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಡಾ. ವೀರೇಂದ್ರ ಹೆಗ್ಗಡೆಯವರಿಗೆ ಗೌರವಪೂರ್ವಕವಾಗಿ ಅಭಿವಂದಿಸುತ್ತಿದ್ದೇವೆ. ಬೆಂಗಳೂರು ಹಾಗೂ ಬೆಳ್ಳೂರಿನ

ಬಿ.ಎಂ.ಶ್ರೀ. ಭವನದ ನಿರ್ಮಾಣಕ್ಕೆ ಉದಾರ ಆರ್ಥಿಕ ನೆರವು ನೀಡಿರುವ ಕೇಂದ್ರದ ಮಾಜಿ ಮಂತ್ರಿಗಳಾದ ಶ್ರೀ ಅನಂತಕುಮಾರ್, ದಿವಂಗತ ರಾಮಕೃಷ್ಣಹೆಗಡೆ, ಡಾ. ವೀರೇಂದ್ರ ಹೆಗ್ಗಡೆ, ಪ್ರೊ. ಎಂ.ಆರ್. ದೊರೆಸ್ವಾಮಿ, ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ ಮತು ಮಕ್ಕಳು, ಶ್ರೀಮತಿ ರತ್ನ ಎನ್. ರಾವ್, ಬೆಳಗೆರೆ ಕೃಷ್ಣಶಾಸ್ತ್ರಿ, ಎಸ್.ಟಿ. ರಾಧಾಕೃಷ್ಣ, ಬೆಳ್ಳೂರಿನ ಶ್ರೀ ಸಿಂಗಾರಿಗೌಡ, ಎಸ್. ಕೃಷ್ಣಮೂರ್ತಿ, ಶ್ರೀ ಸೋಮಶೇಖರ್ ಮುಂತಾದವರುಗಳಲ್ಲದೆ ಸಹಾಯಹಸ್ತ ನೀಡಿದ ಎಲ್ಲಾ ಬಿ.ಎಂ.ಶ್ರೀ ಅಭಿಮಾನಿವರ್ಗಕ್ಕೆ ನಾವು ಆಭಾರಿಗಳಾಗಿದ್ದೇವೆ.

ಇಂತಹ ಭಾರಿ ಕಾರ್ಯಕ್ರಮಗಳನ್ನು ಯೋಜಿಸಿ, ನಿರ್ವಹಿಸಬೇಕಾದರೆ ಆರ್ಥಿಕ ಹೊಣೆ ಬಹಳವಾಗಿರುತ್ತದೆ. ಸಾಮಾನ್ಯವಾಗಿ ಜಾಹೀರಾತು ಸಂಗ್ರಹಣೆ ಈ ದಿಸೆಯಲ್ಲಿ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಇದರಲ್ಲಿ ಪೂರ್ಣ ಸಹಕಾರವಿತ್ತು ಸಹಕರಿಸುತ್ತಿರುವ ಕೆ.ಎನ್. ಸುಬ್ಬಾರೆಡ್ಡಿ, ಸನ್ಮಾನ್ಯರುಗಳಾದ ಶ್ರೀ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, ಎನ್.ಎಸ್. ಕೃಷ್ಣಸ್ವಾಮಿ, ಪ್ರೊ. ಬಿ.ಕೆ. ಹನುಮಂತಯ್ಯ, ಶ್ರೀ ಸಿ.ಕೆ. ರಾಮೇಗೌಡ, ಶ್ರೀ ಬಿ. ನಾಗೇಶ್, ಶ್ರೀ ಎ. ಮರಿಯಪ್ಪ, ಪ್ರೊ.ಎಂ.ಆರ್ ದೊರೆಸ್ವಾಮಿ, ಡಾ. ಲಲಿತಮ್ಮ, ರಮಾದೇವಿ ವಿಶ್ವೇಶ್ವರಯ್ಯ, ಕೃಷ್ಣಮೂರ್ತಿ, ಪಾರ್ಥಸಾರಥಿ, ಜಯಾ ಪಾರ್ಥಸಾರಧಿ, ಮನೋಹರಿ ಪಾರ್ಥಸಾರಥಿ ಮುಂತಾದವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆ ಸಲ್ಲುತ್ತವೆ.

'ರಜತ ಸಿರಿ' ಈ ಸಂಚಿಕೆಯು ಸುಂದರವಾಗಿ ಬರಲು ಸಹಕರಿಸುತ್ತಿರುವ ಅಧ್ಯಕ್ಷರಾದ ಪ್ರೊ. ಎಂ.ಆರ್. ದೊರೆಸ್ವಾಮಿ ಮತ್ತು ಸಲಹಾ ಸಮಿತಿಯ ಎಲ್ಲಾ ಸದಸ್ಯರುಗಳಿಗೂ ನಮ್ಮ ವಂದನೆ ಸಲ್ಲುತ್ತವೆ. ಕಾರ್ಯಕ್ರಮ ಯಶಸ್ವಿಯಾಗಲು ಪೂರ್ಣ ಸಹಕಾರ ನೀಡುತ್ತಿರುವ ಮಹಾಪೋಷಕರು, ಸ್ವಾಗತ ಸಮಿತಿಯ ಸದಸ್ಯರು, ಕಾರ್ಯಕಾರಿ ಸಮಿತಿ ಸದಸ್ಯರು, ಸಾಂಸ್ಕೃತಿಕ ಸಮಿತಿ, 'ಸಿರಿಕಂಟ' ವಿಶೇಷ ಸಂಪುಟದ ಸಂಪಾದಕರುಗಳು ಹಾಗೂ ಹಿಂದೆ ನಿಂತು ಸಹಕಾರ ಸಹಾಯ ಮಾಡುತ್ತಿರುವ ಅಪಾರ ಮಿತ್ರವರ್ಗಕ್ಕೆ ಚಿರ ಋಣಿಯಾಗಿರುತ್ತೇವೆ.

ಈ ರಜತೋತ್ಸವ ಸಮಾರಂಭದ ನಿರ್ವಹಣೆಗೆ ಸಹಯೋಗ ನೀಡುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಿಗೆ, ನಗರ ಪಾಲಿಕೆಯ ಎಲ್ಲಾ ಮಾನ್ಯ ಸದಸ್ಯರು ಹಾಗೂ ಅಧಿಕಾರ ವರ್ಗಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಸಹಯೋಗ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೆ, ನೆನಪಿನ ಕಾಣಿಕೆಗಳನ್ನು ನೀಡಲು ಮುಂದೆ ಬಂದಿರುವ ಅತ್ತಿಮಬ್ಬೆ ಪ್ರತಿಷ್ಠಾನದ ಶ್ರೀಮತಿ ಮನೋಹರಿ ಪಾರ್ಥಸಾರಥಿಯವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆ ಸಲ್ಲುತ್ತದೆ. ಇದೇ ರೀತಿ ಸಹಕಾರ, ಸಹಾಯ, ಸದಾ ಈ ಪ್ರತಿಷ್ಠಾನಕ್ಕೆ ದೊರೆಯುತ್ತಿರಲಿ ಎಂದು ಆಶಿಸುತ್ತೇವೆ.

'ರಜತಸಿರಿ'ಯನ್ನು ಸುಂದರವಾಗಿ ಅತ್ಯಲ್ಪ ಕಾಲದಲ್ಲಿ ಮುದ್ರಿಸಿ ನೀಡುತ್ತಿರುವ ಇಳಾ ಮುದ್ರಣಾಲಯದ ಶ್ರೀ ಗುರುಮೂರ್ತಿ ಮತ್ತು ಮುದ್ರಣಾಲಯದ ಎಲ್ಲಾ ಮಿತ್ರರಿಗೆ, ಜಾಹೀರಾತುಗಳನ್ನು ನೀಡಿರುವ ಸಹೃದಯಿ ಅಭಿಮಾನಿಗಳಿಗೆ, ಕಾರ್ಯಕ್ರಮ ಯಶಸ್ವಿಯಾಗಲು ಹಗಲಿರುಳು ಶ್ರಮಿಸುತ್ತಿರುವ ಮಿತ್ರವರ್ಗಕ್ಕೆ ಆಭಾರಿಗಳಾಗಿದ್ದೇವೆ.

ವಂದನೆಗಳೊಂದಿಗೆ,

ಎಸ್.ವಿ. ಶ್ರೀನಿವಾಸರಾವ್

ನಾ. ಗೀತಾಚಾರ್ಯ

ಸಂಪಾದಕರು

GOVERNOR
KARNATAKA

RAJ BHAVAN
BANGALORE

Gs / 188 / MSG / 04

ಸೆಪ್ಟೆಂಬರ್ 6, 2004

ಸಂದೇಶ

ಸುಪ್ರಸಿದ್ಧ ಹಿರಿಯ ಸಾಹಿತಿ, ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ ಹೆಸರಿನಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಇದೇ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ರಜತ ಮಹೋತ್ಸವ ಆಚರಿಸುತ್ತಿರುವ ವಿಷಯ ನನಗೆ ಹರ್ಷ ಉಂಟುಮಾಡಿದೆ.

ಕನ್ನಡ ಸಾಹಿತ್ಯಕ್ಕೆ ಬಿ.ಎಂ.ಶ್ರೀ. ಅವರು ನೀಡಿರುವ ಕೊಡುಗೆ ಗಾತ್ರದಲ್ಲಿ ಕಿರಿದಾಗಿದ್ದರೂ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಮೂವತ್ತು-ನಲವತ್ತರ ದಶಕದಲ್ಲಿ ಅವರು ಕನ್ನಡ ಭಾಷೆಯ ಪ್ರಸಾರಕ್ಕಾಗಿ ವಹಿಸಿದ ಶ್ರಮವೂ ಇಂದು ನಾವು ಕನ್ನಡವನ್ನು ಒಂದು ರಾಷ್ಟ್ರಭಾಷೆಯ ಮಟ್ಟಕ್ಕೆ ಕೊಂಡೊಯ್ಯಲು ಸಹಾಯಕಾರಿಯಾಗಿದೆ. ಒಟ್ಟಾರೆ ಶಿಕ್ಷಣ ಕ್ಷೇತ್ರಕ್ಕೆ ಬಿ.ಎಂ.ಶ್ರೀ. ಅವರ ಕೊಡುಗೆ ಅವಿಸ್ಮರಣೀಯವಾಗಿದೆ. ಅವರ ನೆನಪಿನಲ್ಲಿ ಹಮ್ಮಿಕೊಳ್ಳಲಾಗಿರುವ ಈ ಕಾರ್ಯಕ್ರಮ ತುಂಬ ಪ್ರಾಸಂಗಿಕ ಹಾಗೂ ಅವಶ್ಯಕ. ಬಿ.ಎಂ.ಶ್ರೀ. ಅವರ ಹೆಸರು ಅಂದು ಹೇಗೆ ಮನೆ ಮಾತಾಗಿತ್ತೋ, ಇಂದೂ ಅವರ ಕೊಡುಗೆಯನ್ನು ನೆನಪಿಗೆ ತಂದುಕೊಳ್ಳಬೇಕಾಗಿದೆ.

ಸಮಾರಂಭದ ಯಶಸ್ಸಿಗಾಗಿ ನಾನು ಹೃತ್ಪೂರ್ವಕವಾಗಿ ಶುಭ ಹಾರೈಸುತ್ತೇನೆ.

T. N. Chaturvedi
(ಟಿ.ಎನ್. ಚತುರ್ವೇದಿ)

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-560 018
ಅಂಚೆ ಪೆಟ್ಟಿಗೆ ಸಂಖ್ಯೆ : 1836
ಕಛೇರಿ : 26612991, 26623584

ಕ್ರಮಸಂಖ್ಯೆ : ಕಸಾಪ/ದಾಖಲೆ/2004-04/2235

ದಿನಾಂಕ : 30-8-2004

ಶುಭ ಸಂದೇಶ

ಪ್ರೊ. ಎಂ.ವಿ. ಸೀತಾರಾಮಯ್ಯ ಅವರು ಸ್ಥಾಪಿಸಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ತನ್ನ 25 ವರ್ಷಗಳ ಯಶಸ್ವಿ ಸೇವೆಯನ್ನು ಪೂರೈಸಿ ಇದೀಗ ರಜತ ಮಹೋತ್ಸವದ ಹೊಸ್ತಿಲಲ್ಲಿರುವುದು ನನಗೆ ಸಂತಸವುಂಟುಮಾಡಿದೆ. ಬಿ.ಎಂ.ಶ್ರೀಕಂಠಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೂ ಪೂಜ್ಯರು. ಅವರ ಕನ್ನಡ ಸೇವೆ ಅನುಕರಣೀಯವಾದುದು. ಅವರ ಹೆಸರಿನಲ್ಲಿ ಸ್ಥಾಪನೆಯಾಗಿರುವ ಪ್ರತಿಷ್ಠಾನವೂ ಕನ್ನಡದ ಕೈಂಕರ್ಯವನ್ನು ಅರ್ಥಪೂರ್ಣವಾಗಿ ಕೈಗೊಳ್ಳುತ್ತಿರುವ ವಿಚಾರ ಸಾಹಿತ್ಯಾಸಕ್ತರ, ಸಹೃದಯರ, ವಿದ್ವಜ್ಜನರ ಪ್ರಶಂಸೆಗೆ ಪಾತ್ರವಾಗಿದೆ.

ಬಿ.ಎಂ.ಶ್ರೀ. ಪ್ರತಿಷ್ಠಾನ ನಡೆದುಬಂದ ದಾರಿ, ಸಾಧನೆ ಇತ್ಯಾದಿ ವಿಚಾರಗಳ ಲೇಖನಗಳೊಂದಿಗೆ ಮುಂದೆ ಪ್ರತಿಷ್ಠಾನವು ಕೈಗೊಳ್ಳುವ ಯೋಜನೆಗಳ ಬಗ್ಗೆಯೂ ಅರ್ಥಪೂರ್ಣ ವಿವರಗಳೊಂದಿಗೆ ಸಂಚಿಕೆ ಪ್ರಕಟವಾಗಲಿ. ಇಂತಹ ಇನ್ನೂ ಅನೇಕ ಸಂಸ್ಥೆಗಳು ಕೈಗೊಳ್ಳುವ ಕಾರ್ಯಕ್ರಮಗಳಿಗೆ ಪ್ರತಿಷ್ಠಾನವು ಮಾದರಿಯಾಗಲಿ ಎಂದು ಆಶಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,
ಧರ್ಮದರ್ಶಿ ಹರಿಕೃಷ್ಣ ಪುನರೂರು

ಡಿ. ವೀರೇಂದ್ರ ಹೆಗ್ಗಡೆಯವರು

ಶ್ರೀಧರ್ಮಸ್ಥಳ - 574216
ದಕ್ಷಿಣ ಕನ್ನಡ, ಕರ್ನಾಟಕ
ದೂರವಾಣಿ ಕಛೇರಿ : (08256) 317121
E-Mali : dvheggade @hotmail.com

ದಿನಾಂಕ : 27-8-2004

ಸಂದೇಶ

ಬೆಂಗಳೂರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು 25 ವರ್ಷಗಳಿಂದ ಸಾರ್ಥಕ ಸಾಹಿತ್ಯಿಕ ಹಾಗೂ ಶೈಕ್ಷಣಿಕ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದು ಸಂಸ್ಥೆಯ ರಜತ ಮಹೋತ್ಸವವನ್ನು ಆಚರಿಸಲಿರುವ ವಿಚಾರ ತಿಳಿದು ಸಂತೋಷವಾಯಿತು.

ಸಂಸ್ಥೆಯ ಪ್ರಗತಿಗಾಗಿ ಶ್ರಮಿಸಿರುವ ಎಲ್ಲ ಸಕ್ರಿಯ ಸದಸ್ಯರನ್ನು ಅಭಿನಂದಿಸುತ್ತಾ, ಮುಂದೆಯೂ ಕೂಡಾ ಈ ಸಂಸ್ಥೆಯು ಉತ್ತರೋತ್ತರ ಪ್ರಗತಿಯನ್ನು ಸಾಧಿಸಲೆಂದು ಆಶಿಸುತ್ತೇನೆ.

ರಜತ ಮಹೋತ್ಸವದ ಈ ಶುಭ ಸಂದರ್ಭ ಸವಿನೆನಪಿಗಾಗಿ "ರಜತಸಿರಿ" ಎಂಬ ಸ್ಮರಣ ಸಂಚಿಕೆಯೊಂದನ್ನು ಹೊರತರಲಿರುವುದು ಸ್ತುತ್ಯಾರ್ಹವಾಗಿದೆ. ಪ್ರತಿಷ್ಠಾನದ ಕಾರ್ಯಚಟುವಟಿಕೆ ಹಾಗೂ ಪ್ರಗತಿ-ಸಾಧನೆಯನ್ನು ಪ್ರತಿಬಿಂಬಿಸಬಲ್ಲ ವಿವಿಧ ವೈಚಾರಿಕ ಲೇಖನಗಳಿಂದೊಡಗೂಡಿ ಸಂಚಿಕೆ ಆಕರ್ಷಕವಾಗಿ ಪ್ರಕಟವಾಗಲೆಂದು ಹಾರೈಸುತ್ತೇನೆ.

ಈ ದಿಸೆಯಲ್ಲಿ ನಿಮ್ಮೆಲ್ಲ ಪ್ರಯತ್ನ-ಪರಿಶ್ರಮ ಸಫಲವಾಗುವಂತೆ ಶ್ರೀಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಡಿ. ವೀರೇಂದ್ರ ಹೆಗ್ಗಡೆ

(ಡಿ. ವೀರೇಂದ್ರ ಹೆಗ್ಗಡೆ)

ರಜತಸಿರಿ

Telephone: Off: 22255023
22092426

GOVERNMENT OF KARNATAKA

Officer on Special duty to the
Minister for Higher Education

Room No. 344, Vidhana Soudha
Bangalore - 560 001

Dated 1-09-2004

ಸಂದೇಶ

ಇದೇ ಸೆಪ್ಟೆಂಬರ್ 10, 11 ರಂದು ಬೆಂಗಳೂರಿನ ಬಿ.ಎಂ.ಶ್ರೀ. ಕಲಾಭವನದಲ್ಲಿ ನಡೆಯಲಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ - ರಜತಮಹೋತ್ಸವ ಸಮಾರಂಭದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಅತಿಥಿಯಾಗಿ ಪಾಲ್ಗೊಳ್ಳುವಂತೆ ಆಹ್ವಾನಿಸಿರುವುದು ಸರಿಯಷ್ಟೆ. ಅಂದು ಮಾನ್ಯ ಸಚಿವರು ಪೂರ್ವನಿಯೋಜಿತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿರುವುದರಿಂದ ತಮ್ಮ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ ವೆಂಬುದನ್ನು ತಮ್ಮ ಗಮನಕ್ಕೆ ತರಲು ಮಾನ್ಯ ಸಚಿವರಿಂದ ನಿರ್ದೇಶಿತನಾಗಿದ್ದೇನೆ.

ಕಾರ್ಯಕ್ರಮ ಯಶಸ್ವಿಯಾಗಲೆಂದು ಮಾನ್ಯ ಸಚಿವರು ಹಾರೈಸಿರುತ್ತಾರೆ.

ತಮ್ಮ ನಂಬುಗೆಯ,

(ಬಿ.ಎಸ್. ಮೃತ್ಯುಂಜಯ)
ವಿಶೇಷಾಧಿಕಾರಿ



ಆಚಾರ್ಯ ಬಿ.ಎಂ. ಶ್ರೀಕಂಠಯ್ಯ

೩-೧-೧೮೮೪ – ೫-೧-೧೯೪೬

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಕಾರ್ಯಕಾರಿ ಸಮಿತಿ


ನಿಟ್ಟೂರು ಶ್ರೀನಿವಾಸರಾವ್


ಟಿ.ವಿ. ವೆಂಕಟಾಚಲ ಶಾಸ್ತ್ರೀ


ನಾ. ಗೀತಾಚಾರ್ಯ


ಡಿ. ಲಿಂಗಯ್ಯ


ಎಲ್.ಎಸ್. ಶೇಷಗಿರಿರಾವ್


ಎನ್. ಬಸವಾರಾಧ್ಯ


ಅ.ರಾ. ಮಿತ್ರ


ಜಿ. ಅಶ್ವತ್ಥನಾರಾಯಣ





ನ. ಸುಬ್ರಹ್ಮಣ್ಯ


ಎಸ್.ಟಿ. ರಾಧಾಕೃಷ್ಣ


ಎಂ.ಎಲ್. ಲಲಿತಮ್ಮ


ಎಂ.ಎಚ್. ಕೃಷ್ಣಯ್ಯ


ಎಚ್.ಆರ್. ದಾಸೇಗೌಡ



ಎಂ. ಚಿದಾನಂದ ಮೂರ್ತಿ


ಎನ್.ಎಸ್.
ರಾಮಾಸ್ವಾಮಿ ಅಯ್ಯರ್


ತಿ.ಶ್ರೀ ನಾಗಭೂಷಣ


ಕೆ.ಆರ್. ಗಣೇಶ್


ಮೋಹನದಾಸ್
ಧಾವಸ್ಕರ್



ಪ್ರೊ. ಎಂ.ವಿ. ಸೀತಾರಾಮಯ್ಯ

(ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕರು)

೯-೯-೧೯೧೦ – ೧೨-೩-೧೯೯೦

ರಜತೋತ್ಸವ ಸಮಿತಿ



ಕುಳಿತಿರುವವರು (ಎಡದಿಂದ) : ಡಾ. ಎಂ.ಎಲ್. ಲಲಿತಮ್ಮ, ರಮಾದೇವಿ ವಿಶ್ವೇಶ್ವರಯ್ಯ, ಪ್ರೊ. ಡಿ. ಲಿಂಗಯ್ಯ, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಪ್ರೊ. ಎಂ.ಆರ್. ದೊರೆಸ್ವಾಮಿ, ಎಸ್.ವಿ. ಶ್ರೀನಿವಾಸರಾವ್, ಎ. ಮರಿಯಪ್ಪ,
ನಿಂತಿರುವವರು (ಎಡದಿಂದ) : ಎಸ್.ಜಿ. ವಾಸುದೇವ ರಾವ್, ಎಂ.ವಿ. ಸತ್ಯನಾರಾಯಣ, ಪ್ರೊ. ಬಿ.ಕೆ. ಹನುಮಂತಯ್ಯ, ಎನ್.ಎಸ್. ಕೃಷ್ಣಸ್ವಾಮಿ, ಸಿ.ಕೆ. ರಾಮೇಗೌಡ, ಹುಚ್ಚಯ್ಯ, ನಾ. ಗೀತಾಚಾರ್ಯ



ಶ್ರೀ ನಿಟ್ಟೂರು ಶ್ರೀನಿವಾಸರಾವ್

ಪ್ರತಿಷ್ಠಾನದ ಗೌರವಾಧ್ಯಕ್ಷರು

೮-೧೦-೧೯೮೬ – ೧೨-೮-೨೦೦೪

ರಜತಸಿರಿ

ಸಂಪಾದಕರ ಮಂಡಳಿ



ಪ್ರೊ. ಎಂ.ಆರ್. ದೊರೆಸ್ವಾಮಿ
ಅಧ್ಯಕ್ಷರು



ಎಸ್.ವಿ. ಶ್ರೀನಿವಾಸರಾವ್
ಸಂಪಾದಕ



ನಾ. ಗೀತಾಚಾರ್ಯ
ಸಂಪಾದಕ

ಸದಸ್ಯರು

ಶ್ರೀ ರಾ.ನಂ. ಚಂದ್ರಶೇಖರ

ಪ್ರೊ. ಟಿ. ಶ್ರೀನಿವಾಸರಾಜು

ಡಾ. ಆರ್. ಶೇಷಶಾಸ್ತ್ರಿ

ಡಾ. ದೇವರಕೊಂಡಾರೆಡ್ಡಿ

ಡಾ. ಎಚ್.ಎಸ್. ಗೋಪಾಲರಾವ್

ಶ್ರೀ ಎಸ್. ಶಿವಲಿಂಗಯ್ಯ

ಶ್ರೀ ಮುಕುಂದ ಪುರೋಹಿತ್

ಶ್ರೀ ಸುರೇಶ್ ಮೂನ

ಪ್ರೊ. ದೊಡ್ಡರಂಗೇಗೌಡ

ಪ್ರೊ. ಎಂ.ವಿ. ಸತ್ಯನಾರಾಯಣ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಇಂದಿನ ಅಧ್ಯಕ್ಷರು



ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ



ಎಂ. ವೀರಪ್ಪ ಮೊಯಿಲಿ

ಮಾಜಿ ಮುಖ್ಯಮಂತ್ರಿಗಳು

ಬಿ.ಎಂ.ಶ್ರೀ. ಪ್ರತಿಷ್ಠಾನದ ಸ್ಥಾಪನೆಯಲ್ಲಿ ಸಹಕರಿಸಿದವರು





ಬಿ.ಎಂ.ಶ್ರೀ. ಕಲಾಭವನ

ಬೆಂಗಳೂರು

ಶಂಕುಸ್ಥಾಪನೆ : ೨೪-೧೦-೧೯೯೭

ಒಟ್ಟು ವೆಚ್ಚ : ಸು. ೨೫ ಲಕ್ಷಗಳು

ಆಚಾರ್ಯ ಬಿ.ಎಂ.ಶ್ರೀ. ಶತಮಾನೋತ್ಸವ ಭವನ, ಬೆಳ್ಳೂರು

ಶಂಕುಸ್ಥಾಪನೆ ೩-೧೧-೧೯೮೪, ಉದ್ಘಾಟನೆ : ೧೩-೬-೧೯೯೪

ಒಟ್ಟು ವೆಚ್ಚ : ಸು. ೬ ಲಕ್ಷಗಳು



ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಬೆಳ್ಳೂರು ಶಾಖೆಯ
ಮಹಾಪೋಷಕರು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ರಜತೋತ್ಸವ

ಪದಾಧಿಕಾರಿಗಳು



ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ
ಅಧ್ಯಕ್ಷರು



ಕೆ.ಎನ್. ಸುಬ್ಬಾರೆಡ್ಡಿ
ಸ್ವಾಗತ ಸಮಿತಿ ಅಧ್ಯಕ್ಷರು



ಪ್ರೊ. ನಾ. ಗೀತಾಚಾರ್ಯ
ಗೌ॥ ಕಾರ್ಯದರ್ಶಿ



ಪ್ರೊ. ಡಿ. ಲಿಂಗಯ್ಯ
ಕೋಶಾಧಿಕಾರಿ




ಎಸ್.ವಿ. ಶ್ರೀನಿವಾಸರಾವ್
ಸಂಚಾಲಕರು




ಡಾ.ಎಂ.ಎಲ್. ಲಲಿತಮ್ಮ
ಸಂಚಾಲಕರು



ಎನ್.ಎಸ್. ಕೃಷ್ಣಸ್ವಾಮಿ
ಸಂಚಾಲಕರು - ಸ್ವಾಗತ ಸಮಿತಿ



ಜಿ. ನಾರಾಯಣ
ಗೌ॥ ಸಲಹೆಗಾರರು



ವಿ.ಎಸ್. ಕೃಷ್ಣ ಅಯ್ಯರ್
ಗೌ॥ ಸಲಹೆಗಾರರು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ. ಕಲಾಭವನ

ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦ ೦೧೯



ಅನಂತಕುಮಾರ್

ಸಂಸದರು, ಬೆಂಗಳೂರು ದಕ್ಷಿಣ



ಕೆ. ಚಂದ್ರಶೇಖರ್

ಶಾಸಕರು, ಬಸವನಗುಡಿ ಕ್ಷೇತ್ರ



ಬಿ.ಎಸ್. ಸತ್ಯನಾರಾಯಣ

ಮಹಾನಗರ ಪಾಲಿಕೆ ಸದಸ್ಯರು

ನರಸಿಂಹರಾಜ ಕಾಲೋನಿ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ರಜತೋತ್ಸವ

ಸಾಂಸ್ಕೃತಿಕ ಸಮಿತಿಯ ಸಂಚಾಲಕರು



ಜಯಾ ಪಾರ್ಥಸಾರಥಿ



ಜಯಮ್ಮ ಕರಿಯಣ್ಣ



ಲಕ್ಷ್ಮೀ ಮೂರ್ತಿ



ರಮಾದೇವಿ ವಿಶ್ವೇಶ್ವರಯ್ಯ



ರಾಮಮೂರ್ತಿ

ಬಿ.ಎಂ.ಶ್ರೀ. ಕಲಾಭವನ, ಬೆಂಗಳೂರು

ಶಂಕುಸ್ಥಾಪನೆ – ಉದ್ಘಾಟನೆ



ರಜತ ಮಹೋತ್ಸವ ಕಾರ್ಯಕ್ರಮ


ರಜತ ಮಹೋತ್ಸವ ಕಾರ್ಯಕ್ರಮ


ಸಿದ್ಧವಾಗಿರುವ ಕಲಾಭವನದ ಪೂರ್ವಭಾಗ.
ಎಂ.ವಿ.ಸೀ. ಸಭಾಂಗಣ ಮತ್ತು ರಜತ ಸಭಾಂಗಣ


ರಜತ ಮಹೋತ್ಸವ ಸಭಾಂಗಣ ಉದ್ಘಾಟನೆ





ರಜತ ಮಹೋತ್ಸವ ವರ್ಷ

ಹಸ್ತಪ್ರತಿ ಶಾಸ್ತ್ರ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ











ಶಂಬಾ ಜೋಶಿ ಸಂಸ್ಮರಣೆ





'ಸಾಹಿತ್ಯೋಪಾಸಕರು' ಕಾರ್ಯಕ್ರಮ







ಬಿ.ಎಂ.ಶ್ರೀ. ಕಲಾಭವನ, ಬೆಂಗಳೂರು

ಶಂಕುಸ್ಥಾಪನೆ – ಉದ್ಘಾಟನೆ



ಶ್ರೀಭವನ ಶಂಕುಸ್ಥಾಪನಾ ಸಮಾರಂಭ



ಶ್ರೀಭವನದ ಗುದ್ದಲಿ ಪೂಜೆ





ಕಟ್ಟಡ ನಿರ್ಮಾಣ ೩ನೇ ಹಂತ



ಬಿ.ಎಂ.ಶ್ರೀ. ಕಲಾಭವನದ ನೆಲಮಹಡಿ ಉದ್ಘಾಟನೆ



ಕಲಾಭವನದ ೧ನೇ ಮಹಡಿಯ ಉದ್ಘಾಟನೆ



ಚಳ್ಳಕೆರೆಯಲ್ಲಿ ಟಿ.ಎಸ್. ವೆಂಕಣ್ಣಯ್ಯ
ಜನ್ಮಶತಾಬ್ದಿ ಕಾರ್ಯಕ್ರಮ



ಬಿ.ಎಂ.ಶ್ರೀ. ಕಲಾಭವನ ಶಂಕುಸ್ಥಾಪನೆ ಸಂದರ್ಭದಲ್ಲಿ



ದ್ವಿಶತಮಾನೋತ್ಸವ ಸಮಾರಂಭ - ೨೦೦೦








ಶತಮಾನದ ಹಿರಿಯರು



೮-೧೦-೧೯೯೬ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಶತಮಾನದ ಹಿರಿಯರು - ಒಂದು ಸಂವಾದದಲ್ಲಿ ಡಾ. ವೆಂಕಟಲಕ್ಷ್ಮಮ್ಮ





೮-೧೦-೧೯೯೬ರಲ್ಲಿ ಈ ಶತಮಾನದ ಹಿರಿಯರು - ಒಂದು ಸಂವಾದದಲ್ಲಿ ಶ್ರೀ ಕೃಷ್ಣಯ್ಯಂಗಾರ್



ಶತಮಾನೋತ್ಸವ ಸಮಾರಂಭಗಳು









ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
'ಬೆಳ್ಳೂರು ಭವನ'
ಸಮಾರಂಭಗಳು







ಎಂ.ವಿ.ಸೀ. ಸಂಸ್ಮರಣೆ ಕಾರ್ಯಕ್ರಮ













ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ (ರಿ)

ಬೆಂಗಳೂರು - ೫೬೦ ೦೧೯

ಸ್ವಾಗತ ಸಮಿತಿ

ಅಧ್ಯಕ್ಷರು : ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಶಾಸಕರು)

ಉಪಾಧ್ಯಕ್ಷರು : ಶ್ರೀ ಹೆಚ್.ಎಸ್. ದೊರೆಸ್ವಾಮಿ
ಪ್ರೊ. ಎಲ್.ಎಸ್. ಶೇಷಗಿರಿರಾವ್
ಡಾ. ಎಂ. ಚಿದಾನಂದಮೂರ್ತಿ
ಶ್ರೀ ಬಿ.ಎಸ್. ಸತ್ಯನಾರಾಯಣ (ಕೌನ್ಸಿಲರ್)

ಸದಸ್ಯರುಗಳು

ಶ್ರೀ ಪುಂಡಲೀಕ ಹಾಲಂಬಿ	ಶ್ರೀಮತಿ ಇಂದಿರಾ ಹೆಗ್ಗಡೆ,
ಡಾ. ಪಿ.ವಿ. ನಾರಾಯಣ	ಶ್ರೀ ಎಸ್. ಕೃಷ್ಣಮೂರ್ತಿ
ಶ್ರೀ ಬಿ.ಕೆ. ಹನುಮಂತಯ್ಯ	ಶ್ರೀ ಎಸ್.ಜಿ. ವಾಸುದೇವರಾವ್
ಶ್ರೀಮತಿ ಮತ್ತು ಶ್ರೀ ವಿಕ್ರಂ	ಶ್ರೀ ವೈ.ಕೆ. ಮೋಹನ್
ಶ್ರೀ ಕೃಷ್ಣಯ್ಯಶೆಟ್ಟಿ	ಶ್ರೀಮತಿ ಆರ್ಯಾಂಬಾ ಪಟ್ಟಾಭಿ
ಶ್ರೀ ಶ್ರೀರಾಮೇಗೌಡ	ಶ್ರೀ ಸಿ.ಕೆ. ರಾಮೇಗೌಡ
ಶ್ರೀ ಟಿ. ನಾಗರಾಜು	ಪ್ರೊ. ಧ್ರುವನಾರಾಯಣ
ಶ್ರೀ ಜಿ. ವಿಠ್ಠಲರಾವ್	ಡಾ|| ವಿಜಯಾ
ಶ್ರೀ ಜಿ. ಚೆನ್ನವೀರಸ್ವಾಮಿ	ಶ್ರೀ ಎಂ. ನರಸಿಂಹ
ಶ್ರೀಮತಿ ಎಚ್.ಎಸ್. ಪಾರ್ವತಿ	ಶ್ರೀಮತಿ ಉಷಾ ಪಿ. ರೈ
ಶ್ರೀ ಎಸ್.ಆರ್.ಆರ್.ಕೆ. ಶರ್ಮ	ಶ್ರೀ ಎಂ.ಎಸ್. ರಾಮಪ್ರಸಾದ್
ಶ್ರೀ ಎಂ.ಎಸ್. ಭಾಸ್ಕರ್	ಶ್ರೀ ಎಸ್.ಟಿ. ರಾಧಾಕೃಷ್ಣ
ಶ್ರೀ ಎಂ.ಎಸ್. ಶೇಷಾದ್ರಿನಾಥ್	ಶ್ರೀ ನಂ. ನಂಜಪ್ಪ
ಶ್ರೀ ಜಿ.ಕೆ. ಗುಂಡುರಾವ್	ಶ್ರೀ ವಣ್ಣೂರ್
ಶ್ರೀ ಬೆ.ರಾ. ರಂಗರಾಜು	ಶ್ರೀ ಜಿ.ಕೆ. ಅನಂತ್
ಶ್ರೀ ಚಂದ್ರಪ್ಪ	ಶ್ರೀ ಸಿದ್ದಯ್ಯ
ಶ್ರೀ ಎಲ್. ಗಂಗಾಧರ	ಶ್ರೀ ಮು.ಅ. ವೆಂಕಟೇಶ್
ಶ್ರೀ ತಿರುಮಲೆ ಶ್ರೀರಂಗಾಚಾರ್	ಶ್ರೀ ಕೋ.ವೆಂ. ರಾಮಕೃಷ್ಣೇಗೌಡ
ಶ್ರೀ ಎಂ. ಶ್ರೀ ರಾಮಯ್ಯ	ಶ್ರೀ ಎಂ. ಗೋವಿಂದರಾಜು
ಶ್ರೀ ಕೃಷ್ಣಯ್ಯ	ಶ್ರೀ ಜಿ. ಶಂಭಣ್ಣ
ಶ್ರೀ ಓ.ಇ. ಸೋಮಯ್ಯ	ಶ್ರೀ ಟಿ. ಶಶಿಧರ್
ಶ್ರೀ ಕುಮಾರ್	ಶ್ರೀ ವರದರಾಜು

ಸಂಚಾಲಕರು : ಶ್ರೀ ಎನ್.ಎಸ್. ಕೃಷ್ಣಸ್ವಾಮಿ
ಡಾ|| ಜಗದೀಶ್
ಪ್ರೊ. ಕೆ. ಆರ್. ಇಕ್ಬಾಲ್ ಅಹಮದ್

ಕಾರ್ಯಕಾರಿ ಸಮಿತಿ

ಗೌರವಾಧ್ಯಕ್ಷರು :
ಶ್ರೀ ನಿಟ್ಟೂರು ಶ್ರೀನಿವಾಸರಾವ್

ಅಧ್ಯಕ್ಷರು :
ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

ಗೌ. ಕಾರ್ಯದರ್ಶಿ :
ಪ್ರೊ. ನಾ. ಗೀತಾಚಾರ್ಯ

ಕೋಶಾಧ್ಯಕ್ಷರು :
ಪ್ರೊ. ಡಿ. ಲಿಂಗಯ್ಯ

ಸದಸ್ಯರು :
ಪ್ರೊ. ಎಲ್.ಎಸ್. ಶೇಷಗಿರಿರಾವ್
ಪ್ರೊ. ಎಸ್. ಬಸವಾರಾಧ್ಯ
ಡಾ. ಚಿದಾನಂದಮೂರ್ತಿ
ಪ್ರೊ. ಅ.ರಾ. ಮಿತ್ರ
ಪ್ರೊ. ಎಂ.ಎಚ್. ಕೃಷ್ಣಯ್ಯ
ಪ್ರೊ. ಜಿ. ಅಶ್ವತ್ಥನಾರಾಯಣ
ಡಾ. ಎಂ.ಎಲ್. ಲಲಿತಮ್ಮ
ಪ್ರೊ. ವಸಂತ ಕುಷ್ಟಗಿ
ಪ್ರೊ. ತೀ.ಶ್ರೀ ನಾಗಭೂಷಣ
ಡಾ. ಸ. ಸುಬ್ರಹ್ಮಣ್ಯಂ
ಪ್ರೊ. ಕೆ.ಆರ್. ಗಣೇಶ್
ಶ್ರೀ ಎಸ್.ಟಿ. ರಾಧಾಕೃಷ್ಣ
ಎಸ್.ಎಸ್. ರಾಮಸ್ವಾಮಿ ಅಯ್ಯರ್
ಪ್ರೊ. ಹೆಚ್.ಆರ್. ದಾಸೇಗೌಡ
ಶ್ರೀ ಮೋಹನದಾಸ್ ದಾವಸ್ಕರ್

ವಿಶೇಷ ಸಂಪುಟ ಸಂಪಾದಕರು

ಶ್ರೀ ಎಸ್. ಬಸವರಾಧ್ಯ
ಪ್ರೊ. ಡಿ. ಲಿಂಗಯ್ಯ
ಪ್ರೊ. ಜಿ. ಅಶ್ವತ್ಥನಾರಾಯಣ
ಪ್ರೊ. ನಾ. ಗೀತಾಚಾರ್ಯ

ಸಾಂಸ್ಕೃತಿಕ ಸಮಿತಿ

ಸಂಚಾಲಕರು :
ಶ್ರೀಮತಿ ಜಯಾ ಪಾರ್ಥಸಾರಥಿ
ಶ್ರೀಮತಿ ಜಯಮ್ಮ ಕರಿಯಣ್ಣ
ಶ್ರೀ ರಾಮಮೂರ್ತಿ
ಶ್ರೀಮತಿ ಲಕ್ಷ್ಮೀ ಮೂರ್ತಿ
ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ

ಸಿರಿಕಂಟ ಸಮಿತಿ

ಸಂಚಾಲಕರು :
ಶ್ರೀ ಜಿ.ಎಸ್.ಎಸ್.ರಾವ್
ಶ್ರೀಮತಿ ಸಂಧ್ಯಾ ರಾಮಚಂದ್ರ
ಶ್ರೀ ಧೀರೇಂದ್ರ ವಿ. ಜಾಗೀರ್‌ದಾರ್
ಶ್ರೀ ಮನೋಜ್
ಶ್ರೀ ಸತ್ಯನಾರಾಯಣ
ಶ್ರೀಮತಿ ಶ್ಯಾಮಲಾ ರತ್ನಕುಮಾರಿ
ಶ್ರೀಮತಿ ಭಾರತಿ

ಪ್ರತಿಷ್ಠಾನದ ಗೌರವ ಸದಸ್ಯರು

ಡಾ|| ಜಿ.ಎಸ್. ದೀಕ್ಷಿತ್	ಪ್ರೊ|| ಜಿ. ವೆಂಕಟಸುಬ್ಬಯ್ಯ
ವಿದ್ವಾನ್ ಎಸ್. ರಂಗನಾಥಶರ್ಮ	ಡಾ|| ಎನ್.ಕೆ. ಕುಲಕರ್ಣಿ
ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ	ಡಾ|| ದೇ. ಜವರೇಗೌಡ
ಶ್ರೀಮತಿ ಶಾಂತಾದೇವಿ ಮಾಳವಾಡ	ಶ್ರೀ ಜಿ.ನಾರಾಯಣ
ಶ್ರೀ ಕಯ್ಯಾರ ಕಿಞ್ಞಣ್ಣ ರೈ	ಡಾ|| ಜಿ.ಎಸ್. ಶಿವರುದ್ರಪ್ಪ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ (ರಿ)

ಬೆಂಗಳೂರು - ೫೬೦ ೦೧೯

ರಜತಮಹೋತ್ಸವ ಸಮಿತಿ

ಮಹಾಪೋಷಕರು	:	ಶ್ರೀಶ್ರೀಶ್ರೀ ವಿಶ್ವೇಶತೀರ್ಥ ಸ್ವಾಮೀಜಿ
		ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿ
		ಶ್ರೀಶ್ರೀಶ್ರೀ ಸುತ್ತೂರು ಶಿವರಾತ್ರೀಶ್ವರ ಸ್ವಾಮೀಜಿ
		ಪದ್ಮಭೂಷಣ ಡಾ. ವೀರೇಂದ್ರ ಹೆಗಡೆ
		ಶ್ರೀ ಅನಂತಕುಮಾರ್ (ಲೋಕಸಭಾ ಸದಸ್ಯರು)
		ಶ್ರೀ ಎಂ. ವೀರಪ್ಪ ಮೊಯಿಲಿ
ಗೌರವಾಧ್ಯಕ್ಷರು	:	ಶ್ರೀ ನಿಟ್ಟೂರು ಶ್ರೀನಿವಾಸರಾವ್
ಪೋಷಕರು	:	ಶ್ರೀ ಚೆನ್ನವೀರ ಕಣವಿ
		ಡಾ. ಎಚ್. ನರಸಿಂಹಯ್ಯ
		ಶ್ರೀ ವಿಜಯ ಸಂಕೇಶ್ವರ
		ಶ್ರೀ ಹರಿಕೃಷ್ಣ ಪುನರೂರು
		ಡಾ. ಶರಣಬಸಪ್ಪ ಅಪ್ಪ
		ಪ್ರೊ. ಎ.ಎಚ್. ರಾಮರಾವ್
		ಡಾ. ಎಂ.ಎಂ. ಕಲಬುರ್ಗಿ
		ಶ್ರೀ ಎಂ.ಕೆ. ಪಾಂಡುರಂಗಶೆಟ್ಟಿ
		ಡಾ. ಎಚ್.ಜೆ. ಲಕ್ಕಪ್ಪಗೌಡ
		ಪ್ರೊ. ಕೆ. ಚಿದಾನಂದಗೌಡ
		ಶ್ರೀ ವಾಮದೇವ ದೀಕ್ಷಿತ
		ಶ್ರೀ ಬೆಳಗೆರೆ ಕೃಷ್ಣಶಾಸ್ತ್ರೀ
		ಶ್ರೀ ವಿ. ಲಕ್ಷ್ಮೀನಾರಾಯಣ್
		ಶ್ರೀ ವಿ. ಕೃಷ್ಣಮೂರ್ತಿ
		ಶ್ರೀಮತಿ ಮನೋಹರಿ ಪಾರ್ಥಸಾರಥಿ
		ಶ್ರೀ ರವೀಂದ್ರ
ಗೌರವ ಸಲಹೆಗಾರರು	:	ಶ್ರೀ ಜಿ. ನಾರಾಯಣ
		ಶ್ರೀ ವಿ.ಎಸ್. ಕೃಷ್ಣ ಅಯ್ಯರ್
ಅಧ್ಯಕ್ಷರು	:	ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ
ಗೌರವ ಕಾರ್ಯದರ್ಶಿ	:	ಪ್ರೊ. ನಾ. ಗೀತಾಚಾರ್ಯ
ಕೋಶಾಧಿಕಾರಿ	:	ಪ್ರೊ. ಡಿ. ಲಿಂಗಯ್ಯ
ಸಂಚಾಲಕರು	:	ಎಸ್.ವಿ. ಶ್ರೀನಿವಾಸರಾವ್
		ಡಾ॥ ಎಂ.ಎಲ್. ಲಲಿತಮ್ಮ

ಸ್ಥಾಪನೆ : ೬-೫-೧೯೭೯ ರಜತ ಮಹೋತ್ಸವ ೨೦೦೪

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ. ಕಲಾಭವನ, ೪ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦ ೦೧೯
ದೂ: ೨೬೬೧೫೮೭೭

ಆಹ್ವಾನ ಪತ್ರಿಕೆ

ರಜತಮಹೋತ್ಸವ ಸಮಾರಂಭ

(ಬೆಂಗಳೂರು ಮಹಾನಗರಪಾಲಿಕೆಯ ಸಹಯೋಗದೊಂದಿಗೆ)
ದಿನಾಂಕ ೧೦-೧೪, ಸೆಪ್ಟೆಂಬರ್ ೨೦೦೪

ಸರ್ವರಿಗೂ ಸುಸ್ವಾಗತ

ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ
ಅಧ್ಯಕ್ಷರು, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ
ಅಧ್ಯಕ್ಷರು, ಸ್ವಾಗತ ಸಮಿತಿ

ಪ್ರೊ. ನಾ. ಗೀತಾಚಾರ್ಯ
ಗೌರವ ಕಾರ್ಯದರ್ಶಿಗಳು

ಪ್ರೊ. ಎಂ.ಆರ್. ದೊರೆಸ್ವಾಮಿ
ಅಧ್ಯಕ್ಷರು, ರಜತಸಿರಿ ಸಂಚಿಕೆ

ಪ್ರೊ. ಡಿ. ಲಿಂಗಯ್ಯ
ಕೋಶಾಧಿಕಾರಿಗಳು

ಶ್ರೀ ಎಸ್.ವಿ. ಶ್ರೀನಿವಾಸ ರಾವ್
ಸಂಚಾಲಕರು, ರಜತೋತ್ಸವ ಸಮಿತಿ

ಶ್ರೀ ಎನ್.ಎಸ್. ಕೃಷ್ಣವಾಮಿ
ಸಂಚಾಲಕರು, ಸ್ವಾಗತ ಸಮಿತಿ

ಶ್ರೀ ಡಾ.ಎಂ.ಎಲ್. ಲಲಿತಮ್ಮ
ಸಂಚಾಲಕರು, ರಜತೋತ್ಸವ ಸಮಿತಿ

ದಿನಾಂಕ :೧೦-೯-೨೦೦೪, ಶುಕ್ರವಾರ ಬೆಳಗ್ಗೆ ೧೦-೩೦

ಉದ್ಘಾಟನಾ ಸಮಾರಂಭ

ಸಾನ್ನಿಧ್ಯ
ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ
ಆದಿಚುಂಚನಗಿರಿ ಶ್ರೀಕ್ಷೇತ್ರ

ಸ್ವಾಗತ
ಶ್ರೀ ಕೆ.ಎಸ್. ಸುಬ್ಬಾರೆಡ್ಡಿ
ಅಧ್ಯಕ್ಷರು, ಸ್ವಾಗತ ಸಮಿತಿ

ಪ್ರಾಸ್ತಾವಿಕ
ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ
ಅಧ್ಯಕ್ಷರು, ಬಿ.ಎಂ.ಶ್ರೀ. ಪ್ರತಿಷ್ಠಾನ

ಅಧ್ಯಕ್ಷತೆ
ಪ್ರೊ. ಎಲ್.ಎಸ್. ಶೇಷಗಿರಿ ರಾವ್
ಹಿರಿಯ ಸಾಹಿತಿಗಳು

ಉದ್ಘಾಟನೆ
ಶ್ರೀ ವಿ.ಆರ್. ಸುದರ್ಶನ್
ಸನ್ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನಪರಿಷತ್ತು

ಬಿ.ಎಂ.ಶ್ರೀ. ಪ್ರತಿಮೆಯ ಅನಾವರಣ
ಶ್ರೀ ಪಿ.ಜಿ.ಆರ್. ಸಿಂಧ್ಯ
ಸನ್ಮಾನ್ಯ ಕೈಗಾರಿಕಾ ಸಚಿವರು, ಕರ್ನಾಟಕ ಸರ್ಕಾರ

ಎಂ.ವಿ.ಸೀ. ಪ್ರತಿಮೆಯ ಅನಾವರಣ
ಶ್ರೀ. ಪಿ.ಆರ್. ರಮೇಶ್
ಸನ್ಮಾನ್ಯ ಮಹಾಪೌರರು, ಬೆಂಗಳೂರು ಮಹಾನಗರಪಾಲಿಕೆ

ಹಸ್ತಪ್ರತಿ -ವಸ್ತುಪ್ರದರ್ಶನ ಉದ್ಘಾಟನೆ
ಶ್ರೀ ಅನಂತಕುಮಾರ್
ಸನ್ಮಾನ್ಯ ಸಂಸದರು, ಮಾಜಿ ಕೇಂದ್ರ ಸಚಿವರು

'ರಜತ ಸಿರಿ' ಸವಿಸಂಚಿಕೆ ಬಿಡುಗಡೆ
ಶ್ರೀ ಎಂ. ವೀರಪ್ಪ ಮೊಯಿಲಿ
ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು

ರಜತೋತ್ಸವಮಾಲೆಯ ಪುಸ್ತಕಗಳ ಬಿಡುಗಡೆ
ಪ್ರೊ. ಎಂ. ಎಂ. ಕಲಬುರ್ಗಿ
ಮಾಜಿ ಕುಲಪತಿಗಳು, ಕನ್ನಡ ವಿಶ್ವವಿದ್ಯಾನಿಲಯ

ಪ್ರೊ. ಬಿ. ರಾಮಸ್ವಾಮಿ ಅಧ್ಯಯನ ಕೊಠಡಿಯ ಉದ್ಘಾಟನೆ
ಪ್ರೊ. ಎಂ.ಆರ್. ದೊರೆಸ್ವಾಮಿ
ಸಂಸ್ಥಾಪಕರು, ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳು

ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ
ಶ್ರೀ ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಮುಖ್ಯ ಅತಿಥಿಗಳು
ಶ್ರೀ ಜಮೀಲುಲ್ಲಾ
ಅಧ್ಯಕ್ಷರು, ತೆರಿಗೆ ಮತ್ತು ಆಡಳಿತ ಸ್ಥಾಯಿ ಸಮಿತಿ, ಬೆಂ.ಮ.ನ.ಪಾ.
ಶ್ರೀ ಬಿ.ಎಸ್. ಸತ್ಯನಾರಾಯಣ, ಸದಸ್ಯರು, ಬೆ.ಮ.ನ.ಪಾ.
ಶ್ರೀ ಜಿ. ನಾರಾಯಣ, ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು
ಶ್ರೀ ವಿ.ಎಸ್. ಕೃಷ್ಣಯ್ಯರ್, ಸನ್ಮಾನ್ಯ ಮಾಜಿ ಸಂಸದರು
ಶ್ರೀಮತಿ ಆರ್ಯಾಂಬ ಪಟ್ಟಾಭಿ, ಹಿರಿಯ ಸಾಹಿತಿಗಳು

ಭೋಜನ ವಿರಾಮ

ದಿನಾಂಕ : ೧೦-೯-೨೦೦೪ ಶುಕ್ರವಾರ ಮಧ್ಯಾಹ್ನ ೩-೦೦

ಗೋಷ್ಠಿ-೧ - ಬಿ.ಎಂ.ಶ್ರೀಕಂಠಯ್ಯ ಮತ್ತು ಕನ್ನಡ

ಅಧ್ಯಕ್ಷತೆ
ಶ್ರೀ ಎನ್. ಬಸವಾರಾಧ್ಯ

ಬಿ.ಎಂ.ಶ್ರೀ. ಮತ್ತು ಕನ್ನಡ ಸಾಹಿತ್ಯ - ಒಂದು ಮುನ್ನೋಟ
ಪ್ರೊ. ಎಂ.ಎಚ್. ಕೃಷ್ಣಯ್ಯ

ಶಾಸ್ತ್ರೀಯ ಭಾಷೆಯಾಗಿ ಕನ್ನಡ - ಒಂದು ಸಮರ್ಥನೆ
ಪ್ರೊ. ಎಂ. ಚಿದಾನಂದಮೂರ್ತಿ

ಚಹ ವಿರಾಮ

ಸಾಂಸ್ಕೃತಿಕ ಕಾರ್ಯಕ್ರಮ - ಸಂಜೆ ೬.೦೦ ಗಂಟೆ
(ಸಹಯೋಗ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ)
ಸಿರಿ ಸಂಗೀತ : ತಿಂಗಳ ಸಂಗೀತ ಕಾರ್ಯಕ್ರಮ

ದಿನಾಂಕ : ೧೧-೯-೨೦೦೪ ಶನಿವಾರ ಬೆಳಗ್ಗೆ ೧೦-೦೦

ಬಿ.ಎಂ.ಶ್ರೀ. ಕಲಾಭವನ ಲೋಕಾರ್ಪಣೆ

ಉದ್ಘಾಟನೆ
ಶ್ರೀ ಎನ್. ಧರ್ಮಸಿಂಗ್
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿ
ಶ್ರೀ ಕೆ. ಚಂದ್ರಶೇಖರ್
ಸನ್ಮಾನ್ಯ ಶಾಸಕರು, ಬಸವನಗುಡಿ ಕ್ಷೇತ್ರ

ಸ್ವಾಗತ
ಶ್ರೀ ಜಿ. ನಾರಾಯಣ
ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಅಧ್ಯಕ್ಷತೆ
ಡಾ|| ಟಿ.ವಿ. ವೆಂಕಟಾಚಲಶಾಸ್ತ್ರೀ

ಬೆಳಗ್ಗೆ ೧೧-೩೦

ಗೋಷ್ಠಿ-೨ - ಮಹಿಳಾ ಸಾಹಿತ್ಯ

(ಸಹಯೋಗ: ಕರ್ನಾಟಕ ಲೇಖಕಿಯರ ಸಂಘ)

ಅಧ್ಯಕ್ಷತೆ
ಡಾ|| ವಿಜಯಾ

ಲೇಖಕಿಯರು ಮತ್ತು ಕನ್ನಡ ಸಂಶೋಧನೆ
ಡಾ|| ಪಿ.ಎಸ್. ಗೀತಾ

ಲೇಖಕಿಯರು ಮತ್ತು ಕನ್ನಡ ಸಾಹಿತ್ಯ
ಶ್ರೀಮತಿ ಶಾಂತಾ ನಾಗರಾಜ್

ಭೋಜನ ವಿರಾಮ

ಮಧ್ಯಾಹ್ನ ೨-೦೦

ಗೋಷ್ಠಿ - ೩

ಎಂ.ವಿ. ಸೀತಾರಾಮಯ್ಯ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನ

ಅಧ್ಯಕ್ಷತೆ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಬಿ.ಎಂ.ಶ್ರೀ. ಪ್ರತಿಷ್ಠಾನದ ಸಾಧನೆಗಳು
ಡಾ|| ಪಿ.ವಿ. ನಾರಾಯಣ

ಎಂ.ವಿ.ಸೀ. ಅವರ ಸಾಹಿತ್ಯ
ಡಾ|| ನರಹಳ್ಳಿ ಬಾಲಸುಬ್ರಹ್ಮಣ್ಯ

ಸಂಜೆ ೩-೩೦

ಕನ್ನಡ ಭಾವಗೀತೆಗಳು

ಜಯಾ ಪಾರ್ಥಸಾರಥಿ, ನಾರಾಯಣರಾವ್ ಮಾನೆ
ರಮಾದೇವಿ ವಿಶ್ವೇಶ್ವರಯ್ಯ, ಗರ್ತಿಕೆರೆ ರಾಘಣ್ಣ, ಲಕ್ಷ್ಮೀಮೂರ್ತಿ

ಚಹವಿರಾಮ

ದಿನಾಂಕ : ೧೧-೯-೨೦೦೪, ಶನಿವಾರ ಸಂಜೆ ೪-೦೦

ಕವಿಗೋಷ್ಠಿ

ಅಧ್ಯಕ್ಷರು
ಡಾ|| ಬಿ.ಸಿ. ರಾಮಚಂದ್ರ ಶರ್ಮ

ಕವಿಗಳು
ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ
ಪ್ರೊ. ಕೆ. ಎಸ್. ನಿಸಾರ್ ಅಹಮದ್
ಪ್ರೊ. ಚಂದ್ರಶೇಖರ ಪಾಟೀಲ
ಪ್ರೊ. ಸಮತೀಂದ್ರ ನಾಡಿಗ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಎಚ್.ಎಸ್. ವೆಂಕಟೇಶಮೂರ್ತಿ
ಡಾ॥ ಸಿದ್ದಲಿಂಗಯ್ಯ
ಡಾ॥ ಕೆ. ಆರ್. ಸಂಧ್ಯಾರೆಡ್ಡಿ
ಡಾ॥ ಎಲ್. ಹನುಮಂತಯ್ಯ
ಶ್ರೀಮತಿ ಎಂ.ಆರ್. ಕಮಲ

ದಿನಾಂಕ : ೧೧-೯-೨೦೦೪, ಶನಿವಾರ ಸಂಜೆ ೫-೩೦

ಸಮಾರೋಪ ಸಮಾರಂಭ

(ಸಹಯೋಗ ಅತ್ತಿಮಬ್ಬೆ ಪ್ರತಿಷ್ಠಾನ, ಬೆಂಗಳೂರು)

ಅಧ್ಯಕ್ಷತೆ
ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ
ಅಧ್ಯಕ್ಷರು, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಸಮಾರೋಪ ಭಾಷಣ
ಡಾ॥ ಜಿ.ಎಸ್. ಶಿವರುದ್ರಪ್ಪ
ಹಿರಿಯ ಸಾಹಿತಿಗಳು

ದಾನಿಗಳಿಗೆ ಮತ್ತು ಹಿಂದಿನ ಪದಾಧಿಕಾರಿಗಳಿಗೆ ಸನ್ಮಾನ

ಸನ್ಮಾನಿಸುವವರು
ಶ್ರೀ ಎಂ.ವಿ. ರಾಜಶೇಖರನ್
ಸನ್ಮಾನ್ಯ ಕೇಂದ್ರ ಯೋಜನಾ ಸಚಿವರು, ಭಾರತ ಸರ್ಕಾರ

ಮುಖ್ಯ ಅತಿಥಿಗಳು
ಶ್ರೀ ಚೆಲುವರಾಯಸ್ವಾಮಿ
ಶಾಸಕರು, ನಾಗಮಂಗಲ

ಶ್ರೀ ಎಚ್.ಎಸ್. ದೊರೆಸ್ವಾಮಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು

ಪ್ರೊ. ಎಸ್.ಆರ್. ಮಳಗಿ
ಹಿರಿಯ ಸಾಹಿತಿಗಳು

ಶ್ರೀಮತಿ ಮನೋಹರಿ ಪಾರ್ಥಸಾರಥಿ
ಸಂಸ್ಥಾಪಕರು, ಅತ್ತಿಮಬ್ಬೆ ಪ್ರತಿಷ್ಠಾನ

ಸಾಂಸ್ಕೃತಿಕ ಕಾರ್ಯಕ್ರಮ

(ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗ)

ವಿ.ಸೂ. : ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ವಸ್ತುಪ್ರದರ್ಶನ ದಿನಾಂಕ ೧೦ ರಿಂದ ೧೫ರವರೆಗೆ ಇರುತ್ತವೆ.

ವಸ್ತು ಪ್ರದರ್ಶನದ ಸಮಯ
ಬೆಳಗ್ಗೆ ೧೦-೩೦ ರಿಂದ ಸಂಜೆ ೬-೦೦ ಗಂಟೆ

ರಜತಮಹೋತ್ಸವ ಸಮಾರಂಭದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು

ಸಹಯೋಗ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಪ್ರತಿದಿನ ಸಂಜೆ ೬-೩೦ಕ್ಕೆ
ಸ್ಥಳ : ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ

೧೦-೯-೨೦೦೪, ಶುಕ್ರವಾರ
ಶ್ರೀ ಶಿವಮೊಗ್ಗ ಸುಬ್ಬಣ್ಣ ಮತ್ತು ತಂಡ
ಸುಗಮ ಸಂಗೀತ ಕಾರ್ಯಕ್ರಮ

೧೧-೯-೨೦೦೪, ಶನಿವಾರ
ಶ್ರೀ ಕಮಲ್‌ಕುಮಾರ್ ಮತ್ತು ತಂಡ
ಹರಿದಾಸರ ಕೀರ್ತನೆಗಳು

೧೨-೯-೨೦೦೪, ಭಾನುವಾರ
ಶ್ರೀ ಜಿ. ವಿಠಲ್‌ರಾವ್ ಮತ್ತು ತಂಡ
ಶ್ರೀ ಕೃಷ್ಣಲೀಲಾ ಗಾನಂ - ಗಾಯನ

೧೩-೯-೨೦೦೪, ಸೋಮವಾರ
ಶ್ರೀ ಪ್ರಸನ್ನ ಮತ್ತು ತಂಡ
ವಚನ ಗಾಯನ

ಭಾವಗೀತೆ ತರಗತಿಯ ಮುಕ್ತಾಯ ಸಮಾರಂಭ
ವಿದ್ಯಾರ್ಥಿಗಳಿಂದ ಸುಗಮ ಸಂಗೀತ

೧೪-೯-೨೦೦೪, ಮಂಗಳವಾರ
ಶ್ರೀ ಗರ್ತಿಕೆರೆ ರಾಘಣ್ಣ ಮತ್ತು ತಂಡ
ಸುಗಮ ಸಂಗೀತ

೧೫-೯-೨೦೦೪, ಬುಧವಾರ
ಶ್ರೀಮತಿ ಲಕ್ಷ್ಮಿ ಮೂರ್ತಿ ಮತ್ತು ತಂಡ
ನೃತ್ಯ ಪ್ರದರ್ಶನ

ಸರ್ವರಿಗೂ ಸುಸ್ವಾಗತ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಕಟ್ಟಡ ನಿರ್ಮಾಣಕ್ಕೆ ದಾನ ನೀಡಿರುವವರು

ಶ್ರೀ ಅನಂತಕುಮಾರ್, ಸಂಸದರ ನಿಧಿಯಿಂದ	೧೦,೦೦,೦೦೦-೦೦
ದಿ॥ ರಾಮಕೃಷ್ಣ ಹೆಗ್ಗಡೆ, ಸಂಸದರ ನಿಧಿಯಿಂದ	೨,೦೦,೦೦೦-೦೦
ಶ್ರೀಮತಿ ರತ್ನ ಎನ್.ರಾವ್	೧,೦೦,೦೦೦-೦೦
ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ	
ಮತ್ತು ಕುಟುಂಬದವರು	೧,೦೦,೦೦೦-೦೦
ಮಾನ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆ	೧,೦೦,೦೦೦-೦೦
ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿ	೧,೦೦,೦೦೦-೦೦
(ಶ್ರೀ ಮುಜುಮ್‌ದಾರ್ ಮತ್ತು ಶಾರದಾ ವಿದ್ಯಾ ಮಂದಿರಗಳ ಮೂಲಕ)	
ಇಂಡಸ್ಟ್ರೀಸ್ ವಾಚ್ ಟ್ರಸ್ಟ್	೭೫,೦೦೦-೦೦
ಪ್ರೊ. ಎಂ.ಆರ್. ದೊರೆಸ್ವಾಮಿ	೫೦,೦೦೦-೦೦
ಶ್ರೀ ಎಸ್.ಟಿ. ರಾಧಾಕೃಷ್ಣ	೨೫,೦೦೦-೦೦
ಬಳ್ಳಾರಿ ಸ್ಟೀಲ್ ಅಲ್ಯುಮಿನಿಯಂ	೨೫,೦೦೦-೦೦
ಪ್ರೊ. ಎಂ.ಎಚ್. ರಾಮರಾವ್	೨೫,೦೦೦-೦೦
ಶ್ರೀಮತಿ ಕೆ.ವಿ. ಲಲಿತಾಂಬ	೨೫,೦೦೦-೦೦
ದಿ॥ ಡಾ. ಶಿವರಾಮಕಾರಂತ	೨೦,೦೦೦-೦೦
ಶ್ರೀ ಎಚ್.ಎನ್. ನಂಜೇಗೌಡ	೨೦,೦೦೦-೦೦
ಶ್ರೀ ಸೋಮಶೇಖರ್ ಸಿ.	೧೦,೦೦೦-೦೦
ನಾಗಾರ್ಜುನ ಫರ್ಟಿಲೈಸರ್ಸ್	೧೦,೦೦೦-೦೦
ಮಂಗಳೂರು ರಿಫೈನರಿ	೧೦,೦೦೦-೦೦
ಹೋಟೆಲ್ ಉದ್ಯಮದಾರರ ಸಹಕಾರ ಬ್ಯಾಂಕ್	೧೦,೦೦೦-೦೦
ಅಶೋಕ ಕುಮಾರ್, ಲಕ್ಷ್ಮೀ ಪ್ರಿಂಟರ್ಸ್	೧೦,೦೦೦-೦೦
ಶ್ರೀ ಮತಿ ಎಸ್. ಜಯಲಕ್ಷ್ಮಮ್ಮ	೫,೦೦೦-೦೦
ಶ್ರೀ ಎಸ್.ಆರ್.ಆರ್.ಕೆ. ಶರ್ಮ	೫,೦೦೦-೦೦
ಶ್ರೀ ಬಿ. ಆನಂದ	೫,೦೦೦-೦೦
ಶ್ರೀಮತಿ ಎ.ಎನ್. ಜಯಮ್ಮ	೫,೦೦೦-೦೦
ಡಾ. ಎ. ಜಗದೀಶ್	೫,೦೦೦-೦೦
ಸಪ್ನ ಬುಕ್ ಸ್ಟಾಲ್	೩,೦೦೦-೦೦
ಶ್ರೀ ಮೋಹನ್‌ದಾಸ್ ದಾವಸ್ಕರ್	೨,೦೦೦-೦೦
ಪ್ರೊ. ಬಿ.ಸಿ. ರಾಮಚಂದ್ರಶರ್ಮ	೨,೫೦೦-೦೦
ಶ್ರೀಮತಿ ರತ್ನಾಮೂರ್ತಿ	೧,೫೭೩-೦೦
ಶ್ರೀ ನಾ. ಗೀತಾಚಾರ್ಯ	೧,೫೦೦-೦೦
ಪ್ರೊ. ಎಲ್.ಎಸ್. ಶೇಷಗಿರಿರಾವ್	೧,೦೦೦-೦೦
ಶ್ರೀ ಎಂ.ಜಿ. ನಾಗರಾಜ್	೧,೦೦೦-೦೦
ಶ್ರೀ ಎಸ್.ವಿ. ಶ್ರೀನಿವಾಸರಾವ್	೧,೦೦೦-೦೦
ಪ್ರೊ. ಡಿ. ಲಿಂಗಯ್ಯ	೧,೦೦೦-೦೦
ಪ್ರೊ. ಅ.ರಾ. ಮಿತ್ರ	೧,೦೦೦-೦೦
ಶ್ರೀಮತಿ ಜಯಮ್ಮ ಕರಿಯಣ್ಣ	೧,೦೦೧-೦೦
ಗಿರೀಶ್	೧,೦೦೦-೦೦
ಡಾ. ಲಲಿತಮ್ಮ ಚಂದ್ರಶೇಖರ್	೧,೦೦೦-೦೦
ಶ್ರೀಮತಿ ವೈ.ಸಿ. ಭಾನುಮತಿ	೧,೦೦೦-೦೦
ಪ್ರೊ. ಬಿ. ವೀರಭದ್ರಯ್ಯ	೧,೦೦೦-೦೦
ಪ್ರೊ. ಎಂ.ಎಚ್.ಕೃಷ್ಣಯ್ಯ	೧,೦೦೦-೦೦
ಶ್ರೀಮತಿ ಉಷಾ ಪಿ. ರೈ	೧,೦೦೦-೦೦
ಶ್ರೀಮತಿ ಎಂ.ಎಸ್. ಪ್ರಭಾವತಿ	೧,೦೦೦-೦೦
ಶ್ರೀಮತಿ ಬೆಂ.ಶಾ. ಶ್ಯಾಮಲಾರತ್ನಕುಮಾರಿ	೧,೦೦೦-೦೦
ಶ್ರೀ ಜಿ. ವಿಠಲ್‌ರಾವ್	೧,೦೦೦-೦೦
ಶ್ರೀ ಎನ್.ಎಸ್. ಶ್ರೀಕಂಠೇಶ್ವರ	೧,೫೦೦-೦೦
ಶ್ರೀ ಎಚ್.ಕೆ. ಸೀತಾರಾಮ್	೧,೦೦೦-೦೦
ಶ್ರೀ ಎಚ್.ಎಸ್.ಎಲ್. ಮೂರ್ತಿ	೧,೦೦೧-೦೦
ಶ್ರೀ ಎಸ್. ಸಚ್ಚಿದಾನಂದ	೧,೦೦೦-೦೦
ಶ್ರೀಮತಿ ಉಷಾ ಆನಂದ	೧,೦೦೧-೦೦
ಎ.ಎಚ್. ಪಾಂಡುರಂಗ	೧,೦೦೦-೦೦
ಶ್ರೀಮತಿ ಸುಶೀಲಮ್ಮ	೧,೦೦೦-೦೦
ಶ್ರೀಮತಿ ಲಲಿತಮ್ಮ	೧,೦೦೦-೦೦
ಕೆ.ಎಂ. ಸೀತಾರಾಮಯ್ಯ	೧,೦೦೦-೦೦
ಶ್ರೀ ಕೆ.ವಿ. ಸುಬ್ಬರಾಯ,	
ಶ್ರೀಮತಿ ಎಂ.ಕೆ. ರಮಾದೇವಿ	೫೦೧-೦೦
ಶ್ರೀ ಬಿ.ಆನಂದ	೫೦೦-೦೦
ಡಾ. ಎಂ.ಎಲ್. ಲಲಿತಮ್ಮ	೩೦೦-೦೦
ಡಾ. ಆರ್. ಶೇಷಶಾಸ್ತ್ರಿ	೨೦೦-೦೦
ಶ್ರೀ ಜಿ.ಶ್ರೀನಿವಾಸರಾಜು	೨೫೦-೦೦
ಶ್ರೀ ಶಾಂಪುರ್ ಗುರು	೪೦೦-೦೦

ಹಣವಂತ ತಾಸಗಾಂವಕರ್	೫೦೧-೦೦
ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್	೩೫೦-೦೦
ಶ್ರೀ ಎಸ್.ಆರ್.ಆರ್.ಕೆ. ಶರ್ಮ	೭೦೦-೦೦
ಶ್ರೀ ಎಸ್.ಜಿ. ವಾಸುದೇವರಾವ್	೧೦೦-೦೦
ಶ್ರೀಮತಿ ಜಿ.ಡಿ. ಊರ್ಮಿಳಾ	೫೦೦-೦೦
ಶ್ರೀ ನಾಗರಾಜಯ್ಯ	೩೦೦-೦೦
ಶ್ರೀ ವಿಷ್ಣುಪ್ರಭಾಕರ್	೫೦೦-೦೦
ಶ್ರೀ ಎಚ್.ಪಿ. ಸೂರ್ಯನಾರಾಯಣ	೫೦೧-೦೦
ಕುಮಾರಿ ಲೀನಾ	೫೦೦-೦೦
ಶ್ರೀ ನಾ. ಜಗದೀಶ ಮುಳಬಾಗಿಲು	೩೬೨-೦೦
ಶ್ರೀ ಎಸ್.ಜಿ. ವಾಸುದೇವಮೂರ್ತಿ	೨೫೦-೦೦
ಶ್ರೀ ಎನ್.ಎಸ್. ಕೃಷ್ಣಸ್ವಾಮಿ	೫೦೦-೦೦
ಎಸ್.ಜಿ. ವಾಸುದೇವರಾವ್	೨೫೦-೦೦
ಶ್ರೀಮತಿ ಪಿ.ಜಿ. ಮಂಗಳ	೫೦೦-೦೦
ಶ್ರೀ ಎಸ್.ಜಿ. ವಾಸುದೇವರಾವ್	೨೫೦-೦೦
ಶ್ರೀ ಎಸ್.ಜಿ. ವಾಸುದೇವರಾವ್	೨೫೦-೦೦
ಶ್ರೀ ಅಚ್ಯುತ ಶಿವರಾಮ್ ಮತ್ತು ರಾಘವ ಕೆ.	೧೫೦ ಡಾಲರ್
ಶ್ರೀಮತಿ ಎನ್.ಎಸ್. ತುಂಗಮ್ಮ	೨೫೦-೦೦
ಜಾನ್ ಫ್ರೆಡರಿಕ್ಸ್	೨೦೦-೦೦
ಶ್ರೀಮತಿ ಎಸ್. ಪಾರ್ವತಮ್ಮ	೫೦೦-೦೦
ಶ್ರೀ ಎಸ್.ಜಿ. ವಾಸುದೇವರಾವ್	೨೫೦-೦೦
ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್	೧೦೦-೦೦
ಯೋಗೀಶ ಅಡಿಗ	೫೦-೦೦



'ಕನ್ನಡದ ಕಣ್ವ' ಬಿ.ಎಂ.ಶ್ರೀಕಂಠಯ್ಯ

● *ಎಸ್.ವಿ. ಶ್ರೀನಿವಾಸರಾವ್*

'**ಭಾ**ಷೆ ಬರೀ ಅಂಗಡಿಯಲ್ಲಿ ವ್ಯಾಪಾರ ಮಾಡುವುದಕ್ಕೆ ನೆರವಾಗುವ ಸಾಧನವಲ್ಲ. ಒಂದು ಇಡೀ ಸಮುದಾಯದ ಸಂಸಾರಕ್ಕೆ, ಮುನ್ನಡೆಗೆ ಅತ್ಯಗತ್ಯವಾದ ಸಾಧನ' ಎಂದು ನಂಬಿ, ಇದನ್ನೇ ಕನ್ನಡ ಜನತೆಗೆ ಸಾರಿ ಹೇಳಿ ಇದರ ಅಭ್ಯುದಯಕ್ಕೆ ಅಹರ್ನಿಶಿ ಶ್ರಮಿಸಿದ 'ಕನ್ನಡದ ಕಣ್ವ' 'ಶ್ರೀ' ಕಾವ್ಯನಾಮದ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ ಕನ್ನಡ ನಾಡಿನ ಸಾಹಿತ್ಯಿಕ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳ ಅಭಿಷಿಕ್ತ ನೇತರರಾಗಿ ವಿಜೃಂಭಿಸುತ್ತಿದ್ದಾರೆ.

'ಕನ್ನಡದ ಕಾವಲು ನಾಯಿ ನಾನು' ಎಂದು ಘೋಷಿಸಿ ಕೊಂಡು 'ನಮ್ಮ ಭಾಷೆ ಸಾವಿರ ವರ್ಷಗಳ ಸಾಹಿತ್ಯ ಇರುವ ಭಾಷೆ, ಶ್ರೇಷ್ಠ ಕವಿಗಳನ್ನು ಕೊಟ್ಟ ಭಾಷೆ ನಿಜ. ಆದರೆ ಉದಯಿಸ ಲಿರುವ ಯುಗಕ್ಕೆ ಅದನ್ನು ಅಣಿಗೊಳಿಸಬೇಡವೆ?' ಎಂಬ ನೈಜ ಕಳಕಳಿಯಿಂದ, ಇಂಗ್ಲಿಷ್ ಭಾಷೆಯಿಂದ ಕವನಗಳನ್ನು ಅನುಕರಿಸಿ 'ಇಂಗ್ಲಿಷ್ ಗೀತಗಳು' ಸಂಗ್ರಹದ ಮೂಲಕ ಆಧುನಿಕ ಭಾವಗೀತೆ ಯನ್ನು ಕನ್ನಡಕ್ಕೆ ದತ್ತು ತಂದ ಹೆಗ್ಗಳಿಕೆಗೆ ಪಾತ್ರರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಇವರು ಮಾಡಿದ ಸೇವೆ ಅನನ್ಯವಾದವುಗಳು.

ಕನ್ನಡ ನಾಡಿನಲ್ಲಿ ನಡೆಯುವ ಸಮಸ್ತ ಕನ್ನಡ ಚಟುವಟಿಕೆ ಗಳನ್ನು ನಿರೂಪಿಸುವ ಪತ್ರಿಕೆ 'ಕನ್ನಡ ನುಡಿ' ಯಾಗಬೇಕೆಂದು ಅದು ಕನ್ನಡದ ಗೆಜೆಟಿಯರ್ ಆಗಬೇಕು' ಎಂದು ಬಯಸಿ, ಸಾಹಿತ್ಯ ಲೋಕದಲ್ಲಿ ಖ್ಯಾತನಾಮರಾಗಿದ್ದ ಕಾದಂಬರಿ ಸಾಮ್ರಾಟ ಅ.ನ. ಕೃಷ್ಣರಾಯರ ಸಂಪಾದಕತ್ವದಲ್ಲಿ ಪ್ರಾರಂಭಿಸಿದ ಕೀರ್ತಿ ಅವರದು. 'ಕನ್ನಡ-ಬಾವುಟ'ದ ಪರಿಕಲ್ಪನೆ ಮೂಡಿದ್ದು ಬಿ.ಎಂ.ಶ್ರೀ. ಅವರ ಮನದಲ್ಲಿ. ಇದಕ್ಕೆ ಒಂದು ನಿರ್ದಿಷ್ಟ ರೂಪುಕೊಟ್ಟು ಅದನ್ನು ಪುಸ್ತಕ ರೂಪದಲ್ಲಿ ಹೊರತರುವ ಸಾಹಸ ಸಹ ಮಾಡಿದ್ದು ಬಿ.ಎಂ.ಶ್ರೀ. ಕನ್ನಡ ಸಾಹಿತ್ಯ ಪರಿಷತ್ತು ನಿರ್ವಹಿಸುತ್ತಿರುವ ಒಂದು ಮಹತ್ವದ ವ್ಯವಸ್ಥೆ 'ಕನ್ನಡ ಸಾಹಿತ್ಯ ಪರೀಕ್ಷೆ'ಗಳು, ಇದರ ರೂವಾರಿ ಸಹ ಬಿ.ಎಂ.ಶ್ರೀ. ಅವರೇ. ಪ್ರಾಚೀನ ಗ್ರಂಥ ಸಂಪಾದನೆ/ ಪ್ರಕಟಣೆಯಲ್ಲೂ ಇವರ ಕೈವಾಡ, ಕೊಡುಗೆ ಗಮನಾರ್ಹವಾದದ್ದು.

ಪರಿಷತ್ತಿನ ಪ್ರಕಟಣೆಗಳಿಗೆ ಒಂದು ಅಚ್ಚುಕೂಟದ ಅಗತ್ಯವಿದೆಯೆಂದು ಮನಗಂಡು ಇದರ ಸ್ಥಾಪನೆಗಾಗಿ ೬೦೦೦ ರೂ.ಗಳನ್ನು ದಾನವಾಗಿ ನೀಡಿದ್ದು ಅವರ ಕನ್ನಡ ನುಡಿಯ ಬಗ್ಗೆ ಇರಿಸಿಕೊಂಡಿದ್ದ ಅಪಾರ ಪ್ರೇಮಕ್ಕೆ ಜ್ವಲಂತ ನಿದರ್ಶನವಾಗಿದೆ.

ಬಿ.ಎಂ.ಶ್ರೀ. ಅವರ ಎಲ್ಲಾ ಉದಾತ್ತ ಕನಸುಗಳೂ ನನಸಾಗಬೇಕಾದರೆ ಅವರ ಆಶಯ 'ನಮ್ಮ ಭಾಷೆಯನ್ನು ನಾವು ಎತ್ತದೆ ಹೋದರೆ ಎತ್ತುವವರಾರು? ಎತ್ತುವುದಕ್ಕೆ ನಿಂತರೆ ತಡೆಯುವವರಾರು?' ಇದನ್ನು ಕಾರ್ಯಗತ ಮಾಡುವ ಧೈರ್ಯ ನಾವು ತಂದುಕೊಂಡು ಕನ್ನಡವನ್ನು ಮೇಲೆತ್ತಲು ಕಾರ್ಯಮಗ್ನ ರಾಗಬೇಕು. ಆಗ ಬಿ.ಎಂ.ಶ್ರೀ. ಅವರ ಆತ್ಮಕ್ಕೆ ಶಾಂತಿ ಲಭಿಸು ತ್ತದೆ. ಹಾಗೆಯೇ ಕನ್ನಡಕ್ಕೆ ಪ್ರತಿಷ್ಠಿತ ಸ್ಥಾನಮಾನ ಲಭಿಸುತ್ತದೆ. ಬಿ.ಎಂ.ಶ್ರೀ.ಯವರು ನಿಧನರಾಗಿ ೫೦ಕ್ಕೂ ಹೆಚ್ಚು ವರ್ಷ ಗಳಾಗಿವೆ. ಅಂದಿನ ಪರಿಸ್ಥಿತಿ ಇಂದು ಪ್ರಸ್ತುತವೆಂಬುದು ನಿಜಕ್ಕೂ ವಿಷಾದನೀಯ ಸಂಗತಿ. ಅವಮಾನದಿಂದ ತಲೆ ತಗ್ಗಿಸುವಂತಾಗಿದೆ.

ಬೆಳ್ಳೂರು ಮೈಲಾರಯ್ಯ ಮತ್ತು ಭಾಗೀರಥಮ್ಮನವರ ಮಗ ಶ್ರೀಕಂಠಯ್ಯ ಜನಿಸಿದ್ದು ಜನವರಿ ೩, ೧೮೮೪ ತುಮಕೂರು ಜಿಲ್ಲೆಯ ಸಂಪಿಗೆಯಲ್ಲಿ. ಇವರ ವಿದ್ಯಾಭ್ಯಾಸ ಶ್ರೀರಂಗಪಟ್ಟಣ, ಮೈಸೂರು, ಬೆಂಗಳೂರು ಹಾಗೂ ಮದ್ರಾಸಿನಲ್ಲಿ ನಡೆಯಿತು. ಇವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ೧೯೦೪ರಲ್ಲಿ ಇವರ ವಿವಾಹ ನಡೆಯಿತು. ಬೆಳ್ಳೂರಿನ ರಾಮಸ್ವಾಮಿಯವರ ಮಗಳು ದೇವಮ್ಮನವರೊಡನೆ ಆಯಿತು. ೧೯೦೬ರಲ್ಲಿ ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಪದವಿ ಪಡೆದು ಮದ್ರಾಸಿನಲ್ಲಿ ಓದು ಮುಂದುವರಿಸಿ ಬಿ.ಎಲ್. ಪದವಿ ಗಳಿಸಿಕೊಂಡರು. ೧೯೦೯ರಲ್ಲಿ ಸ್ನಾತಕೋತ್ತರ ಪದವಿ ಪಡೆದು ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾದರು. ಅನಂತರ ಇಲಾಖೆಯಲ್ಲಿ ಕ್ರಮೇಣ ಬಡ್ತಿ ಬಡೆದು ಅಸಿಸ್ಟೆಂಟ್ ಪ್ರೊಫೆಸರ್, ಜ್ಯೂನಿಯರ್ ಪ್ರೊಫೆಸರ್ ೧೯೨೩ರಲ್ಲಿ ಪ್ರೊಫೆಸರ್ ಆದರು. ೧೯೨೬-೩೦ರವರೆಗೆ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಹುದ್ದೆಯನ್ನು ನಿರ್ವಹಿಸಿದರು. ಇದೇ ಸಮಯದಲ್ಲಿ ಕನ್ನಡದ ಗೌರವ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಇವರು ಇಂಗ್ಲಿಷಿನಲ್ಲಿ ಪ್ರಗಲ್ಭ ಪ್ರೌಢಿಮೆ, ಪಾಂಡಿತ್ಯ ಗಳಿಸಿದ್ದರೂ ಅದಕ್ಕೂ ಹೆಚ್ಚಿನ ವಿದ್ವತ್ತನ್ನು ಕನ್ನಡ ಭಾಷೆಯಲ್ಲಿ ಗಳಿಸಿಕೊಂಡಿದ್ದರು. ಇದು ಅವರ ಸಾಮರ್ಥ್ಯ ಹಾಗೂ ಭಾಷೆಯ ಮೇಲಿದ್ದ ಅಪಾರ ಪ್ರೇಮವನ್ನು ತೋರಿಸುತ್ತದೆ. ವಿಶ್ವವಿದ್ಯಾನಿಲಯದಲ್ಲಿದ್ದ ಇಂಗ್ಲಿಷ್ ಭಾಷೆಯ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಭಾಷಾ ಪ್ರೇಮವನ್ನು ಉದ್ದೀಪನಗೊಳಿಸುವ ಸಲುವಾಗಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದು ಬಿ.ಎಂ.ಶ್ರೀ.ಯವರು ಸ್ವಯಿಚ್ಛೆಯಿಂದ ಕನ್ನಡಕ್ಕೆ ಗೌರವಾನ್ವಿತ ಪ್ರೊಫೆಸರ್ ಆಗಲು ಸಮ್ಮತಿಸಿ ಪಾಠ ಹೇಳತೊಡಗಿದ್ದರು. ಹೀಗೆ ವಿಶ್ವವಿದ್ಯಾನಿಲಯದ ಪ್ರೌಢ ತರಗತಿಗಳ ಉಪಯೋಗಕ್ಕಾಗಿಯೇ ಕನ್ನಡ-ಕೈಪಿಡಿ, ಕನ್ನಡ ಸಾಹಿತ್ಯ ಚರಿತ್ರೆ ಗ್ರಂಥಮಾಲೆ, ಹಾಗೂ ಹೊಸಹೊಸ ಗ್ರಂಥ ರಚನೆಗೆ ಪ್ರೋತ್ಸಾಹ ನೀಡತೊಡಗಿದರು. ತಾವೂ 'ಕನ್ನಡ ಛಂದಸ್ಸಿನ ಚರಿತ್ರೆ' (ಕನ್ನಡ ಕೈಪಿಡಿ), ಕನ್ನಡ ಬಾವುಟ (ಸಂಪಾದನೆ), 'ಕನ್ನಡ ಸಾಹಿತ್ಯ ಚರಿತ್ರೆ' (ಕನ್ನಡ ಕೈಪಿಡಿ), ಕನ್ನಡ ಬಾವುಟ (ಸಂಪಾದನೆ), ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಇಸ್ಲಾಂ ಸಂಸ್ಕೃತಿ (ಅನುವಾದ) ಮುಂತಾದ ಕೃತಿ ರಚನೆ ಕೈಗೊಂಡರು.


೧೯೩೮-೪೨ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ೧೯೩೮ರಲ್ಲಿ ಮಹಿಳಾ ಶಾಖೆ ಪ್ರಾರಂಭಿಸಿದ್ದು ಪರಿಷತ್ತಿನ ಲಾಂಛನ ರೂಪಿಸಿದ್ದು ಇವರ ಗಣನೀಯ ಸಾಧನೆಗಳು. ಶ್ರೀಯುತರು ಇಂಗ್ಲಿಷ್ ಕನ್ನಡ ನಿಘಂಟುವಿನ ಸಂಪಾದಕ ಸಮಿತಿಯ ಸದಸ್ಯರಾಗಿ, ಕನ್ನಡ-ಕನ್ನಡ ನಿಘಂಟಿನ ಸಲಹಾ ಸಮಿತಿಯ ಸದಸ್ಯರಾಗಿ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪ್ರಥಮ ಅಧ್ಯಕ್ಷರಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ. ೧೯೩೧ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಗ್ರಂಥಮಾಲೆ ಪ್ರಾರಂಭಿಸಿದ ಯಶಸ್ಸು ಇವರದು. ಕೆಲಕಾಲ ಇವರು ಧಾರವಾಡದ ಕೆ.ಇ. ಬೋರ್ಡ್ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ೨ ವರ್ಷ ಕನ್ನಡ ನುಡಿಯ ಸಂಪಾದಕರೂ ಆಗಿದ್ದರು.

ಇವರಿಗೆ ಲಭಿಸಿರುವ ಪ್ರಶಸ್ತಿ / ಪುರಸ್ಕಾರಗಳು : ಮೈಸೂರು ಮಹಾರಾಜರಿಂದ 'ರಾಜಸೇವಾಸಕ್ತ' ಬಿರಿದು (೧೯೩೮). ಕಲ್ಬುರ್ಗಿಯಲ್ಲಿ ೧೯೨೮ರಲ್ಲಿ ನಡೆದ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ, 'ಸಂಭಾವನೆ' ಇವರಿಗೆ ಅರ್ಪಿತವಾಗಿರುವ ಪ್ರತಮ ಅಭಿನಂದನಾ ಗ್ರಂಥ. ಶ್ರೀನಿಧಿ, ಶ್ರೀಗಂಧ, ಶ್ರೀಉತ್ಸವ, ಇನ್ನಿತರ ಅಭಿನಂದನಾ ಗ್ರಂಥಗಳು. ಇವರ ಇತರ ಪ್ರಮುಖ ಕೃತಿಗಳು : ಇಂಗ್ಲಿಷ್ ಗೀತೆಗಳು. ಗದಾಯುದ್ಧ ನಾಟಕಂ, ಅಶ್ವತ್ಥಾಮನ್, ಪಾರಸೀಕರು, ಹೊಂಗನಸುಗಳು, ರಜತ ಮಹೋತ್ಸವ ಪ್ರಗಾಥ, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಮುಂತಾದವು (೧೯೮೩ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ 'ಶ್ರೀ ಸಾಹಿತ್ಯ' ಸಮಗ್ರ ಕೃತಿ ಸಂಪುಟ ಪ್ರಕಟಿಸಿದೆ).

ಕನ್ನಡಕ್ಕೆ ಅಪಾರ ಆತ್ಮಗೌರವವನ್ನು ತಂದುಕೊಟ್ಟ ಬಿ.ಎಂ.ಶ್ರೀ. ಅವರು ೫-೧-೧೯೪೬ ರಂದು ನಿಧನರಾದರು.

'ನಮ್ಮ ನಾಡುನುಡಿಯ ಸೇವೆ ಸಲ್ಲಿಸಲು ಮುಂದುವರಿಯುವಾಗ ಹಿಂದೂ, ಮುಸಲ್ಮಾನ, ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಸಂಕುಚಿತಾಭಿಪ್ರಾಯಗಳನ್ನು ಬದಿಗೊತ್ತಿ ನಮ್ಮ ಕುಲ ಕನ್ನಡ ಕುಲ, ಗೋತ್ರ-ಸ್ತೋತ್ರಗಳೆಲ್ಲವೂ ಕನ್ನಡವೇ ನಮಗೆ 'ಕನ್ನಡಗೆಲ್ಗೆ', 'ಕನ್ನಡಬಾಳ್ಗೆ' ಎಂಬುದೇ ನಿತ್ಯವೂ ಪಠಿಸುವ ಪಂಚಾಕ್ಷರಿ ಮಹಾಮಂತ್ರವೆಂದು ಭಾವಿಸಬೇಕು. ಪ್ರತಿಯೊಬ್ಬ ಕನ್ನಡಿಗನೂ ಕನ್ನಡಮ್ಮನ ಪೂಜಾರಿಯಾಗಬೇಕು. ಆಕೆಯ ಆಶೀರ್ವಾದ ಹೊಂದಿ ಭಾರತ ಮಾತೆಯ ಪೂಜೆಗೆ ಮುಂದಡಿಯಿಡಬೇಕು....'

ಬಿ.ಎಂ.ಶ್ರೀ.ಯವರ ಈ ಮಹದಾಶಯವನ್ನು ಕಾರ್ಯಗತ ಮಾಡುವ ಹೊಣೆ ನಮ್ಮದು. ಇದು ಕಾರ್ಯಗತಗೊಂಡಾಗ ಕರ್ನಾಟಕವೇ ಅಲ್ಲ ಅಖಂಡ ಭಾರತ ಸಂತೃಪ್ತಿಯ ನೆಲೆವೀಡಾಗುತ್ತದೆ. ❑



ಎಂ.ವಿ. ಸೀತಾರಾಮಯ್ಯ

● *ಎಸ್.ವಿ. ಶ್ರೀನಿವಾಸರಾವ್*

‘ಕನ್ನಡದ ಕಣ್ವ’, ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ ಹೆಸರಿನಲ್ಲಿ ದಿನಾಂಕ ೬-೫-೧೯೭೯ರಲ್ಲಿ ರಾಷ್ಟ್ರಕವಿ ಡಾ. ಕುವೆಂಪು ಅವರಿಂದ ಉದ್ಘಾಟನೆಗೊಂಡಿರುವ ‘ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ’ದ ಸಂಸ್ಥಾಪಕರು. ‘ರಾಘವ’ ಕಾವ್ಯನಾಮದ ಮೈಸೂರು ವೆಂಕಟದಾಸಪ್ಪ ಸೀತಾರಾಮಯ್ಯ. ವೈಶಿಷ್ಟ್ಯಪೂರ್ಣ ಕಾರ್ಯಚಟುವಟಿಕೆಗಳನ್ನು ಸಮರ್ಥವಾಗಿ ನಡೆಸಿಕೊಂಡು ಬರುತ್ತಿರುವ ಈ ವಿದ್ವತ್ ಸಂಸ್ಥೆ ಇದೀಗ ಇಪ್ಪತ್ತೈದು ವರ್ಷಗಳನ್ನು ಪೂರೈಸಿ ‘ರಜತ ಮಹೋತ್ಸವ’ ಆಚರಿಸಿಕೊಳ್ಳಲು ಸಿದ್ಧವಾಗಿದೆ. ಪ್ರಾಚೀನ ಹಸ್ತಪ್ರತಿ ಸಂಗ್ರಹ; ಸಂರಕ್ಷಣೆ; ಸಂಪಾದನೆ, ಹಸ್ತಪ್ರತಿ ಶಾಸ್ತ್ರ ತರಬೇತಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ, ಸಿರಿಕಂಟ ವೇದಿಕೆ, ಮೌಲಿಕ ಗ್ರಂಥ ಪ್ರಕಟಣೆ ‘ಕರ್ನಾಟಕ ಲೋಚನ’ ವಿದ್ವತ್ ಪತ್ರಿಕೆ ಪ್ರಕಟಣೆ, ಅಲ್ಲದೆ ಹಂಪೆಯ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಪಿಎಚ್.ಡಿ. ಸಂಶೋಧನಾ ಕೇಂದ್ರವಾಗಿಯೂ ಸಾಹಿತ್ಯ ಕ್ಷೇತ್ರದಲಿ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಿರುವ ಈ ಸಂಸ್ಥೆಯ ಸಂಸ್ಥಾಪಕರಾದ ಎಂ.ವಿ.ಸೀ. ಜನಿಸಿದ್ದು ಸೆಪ್ಟೆಂಬರ್ ೯, ೧೯೧೦, (ಸಾಧಾರಣ ಸಂವತ್ಸರ ಭಾದ್ರಪದ ಶುದ್ಧ ಷಷ್ಠಿ). ಇವರ ಗುರುಗಳ ಹೆಸರಿನ ಪ್ರತಿಷ್ಠಾನದ ರಜದ ಮಹೋತ್ಸವವನ್ನು ಇದೇ ತಿಂಗಳು ನಡೆಸುವುದು ಹೆಚ್ಚು ಸೂಕ್ತವೆಂದು ಪರಿಗಣಿಸಿ ಸೆಪ್ಟೆಂಬರ್ ೧೦, ೧೧ರಂದು ಆಚರಿಸಲು ಸಕಲ ಸಿದ್ಧತೆಗಳು ನಡೆಯುತ್ತಿವೆ.

ಸಂಪ್ರದಾಯ ಬದ್ಧ, ಸುಸಂಸ್ಕೃತ ಕುಟುಂಬದಲ್ಲಿ ತಂದೆ ವೆಂಕಟದಾಸಪ್ಪ, ತಾಯಿ ಅಗಕಲಗೂಡಿನ ಸಾವಿತ್ರಮ್ಮನವರ ಪುತ್ರ (೩ನೇ ಗಂಡು ಸಂತಾನ)ನಾಗಿ ಸೀತಾರಾಮಯ್ಯ ಮೈಸೂರಿನಲ್ಲಿ ಜನಿಸಿದರು. ಬಿ.ಎ. ಡಿಗ್ರಿ ತನಕ ಇವರ ವಿದ್ಯಾಭ್ಯಾಸ ಮೈಸೂರಿನ ಬನುಮಯ್ಯ ಹೈಸ್ಕೂಲು ಹಾಗೂ ಮಹಾರಾಣಿ ಕಾಲೇಜಿನಲ್ಲಿ ನಡೆಯಿತು. ಮನೆಯಲ್ಲಿ ನಡೆಯುತ್ತಿದ್ದ ಅಳಸಿಂಗಾಚಾರ್ಯರ ಕನ್ನಡ ರಾಮಾಯಣ ಪಾರಾಯಣದಿಂದ ಪ್ರಭಾವಿತರಾಗಿದ್ದ ಸೀತಾರಾಮಯ್ಯನವರಿಗೆ ಸಾಹಿತ್ಯದಲ್ಲಿ ಒಲವು ಮೂಡಿತು. ಹಾಗೇ ಇವರ ಮನೆಯಲ್ಲಿ ಇವರ ದೊಡ್ಡಪ್ಪನ ಮಗ ಅಜ್ಜಿಯ ಮುಂದೆ ಓದುತ್ತಿದ್ದ ಬಿ. ವೆಂಕಟಾಚಾರ್ಯ ಮತ್ತು ಗಳಗನಾಥರ ಕಾದಂಬರಿಗಳು ಇವರ ಆಸಕ್ತಿಯನ್ನು ಕಾದಂಬರಿಯತ್ತ ಸೆಳೆದವು.

ಎಳೆಯ ಮನಸ್ಸು ಬಹಳ ಚಂಚಲ. ಲೇಖಕ, ಚಿತ್ರಗಾರ, ಸಂಗೀತಗಾರ ಎಲ್ಲಾ ಆಗುವ ಹುಮ್ಮಸ್ಸು. ಮನೆಯ ಸನಿಹದಲ್ಲಿದ್ದ ಅರಮನೆಯ ‘ಆನೆಕರೋಟಿ’ (ಗಜಶಾಲೆ)ಯಲ್ಲಿನ ಆಂಜನೇಯನ ಚಿತ್ರ ಹಾಗೂ ಆನೆಗಳನ್ನು ನೋಡಿ ಅವುಗಳ ಚಿತ್ರ ಬಿಡಿಸಲು ಪ್ರಾರಂಭಿಸಿದರು. ಅದರಲ್ಲೇ ಆಸಕ್ತಿ ಬೆಳೆದು ಇದಕ್ಕೆ ಚಿತ್ರಕಲಾವಿದ ಕೆ. ವೆಂಕಟಪ್ಪನವರ ಆಶೀರ್ವಾದ, ಟಿ.ಎಸ್. ವೆಂಕಣ್ಣಯ್ಯನವರ ಮೆಚ್ಚುಗೆ ಲಭ್ಯವಾದಾಗ ಇವರ ಚಿತ್ರಕಲಾಭ್ಯಾಸ ವೃದ್ಧಿಸಿತು. ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ಗೆ ಸೇರಿ ಚಿತ್ರಕಲೆಯಲ್ಲಿ ಪ್ರಾವೀಣ್ಯತೆ ಗಳಿಸಿಕೊಂಡರು. ಶಾಂತಿನಿಕೇತನಕ್ಕೆ ಹೋಗಿ ಶಾಸ್ತ್ರೀಯವಾಗಿ ಚಿತ್ರಕಲೆಯಲ್ಲಿ ಪ್ರೌಢಿಮೆ ಗಳಿಸಿಕೊಳ್ಳಲು ಆಶಿಸಿದ್ದರು. ಆದರೆ ಮನೆಯಲ್ಲಿನ ಆರ್ಥಿಕ ಸ್ಥಿತಿ ಸರಿಯಿಲ್ಲದ್ದರಿಂದ ಅಲ್ಲಿಗೆ ಹೋಗಲಾಗಲಿಲ್ಲ. ಆದರೆ ಇವರು ರಚಿಸಿದ ಚಿತ್ರಗಳಿಗೆ ಮೈಸೂರು ದಸರಾ

ವಸ್ತುಪ್ರದರ್ಶನ ಹಾಗೂ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ವಸ್ತುಪ್ರದರ್ಶನಗಳಲ್ಲಿ ಬಹುಮಾನ ದೊರೆತಾಗ ಚಿತ್ರಕಲೆಯಲ್ಲಿ ಇವರ ಆಸಕ್ತಿ ಮತ್ತಷ್ಟು ಬೆಳೆಯಿತು. ಅವರ ಮೊದಲ ಕವನ 'ಬೀದಿಯೊಳಗಲೆಯುತಿಹಳಾರಿವಳು ಚೆಲುವೆ' ಕವನಕ್ಕೆ ಇವರೆ ಚಿತ್ರ ರಚಿಸಿದ್ದರು. (ಬಹುಶಃ ಹಿಂದಿನ ವರ್ಷತಾನೇ ಶ್ರೀಮತಿ ಸಾವಿತ್ರಮ್ಮನವರೊಡನೆ ವಿವಾಹವಾಗಿದ್ದುದು ಈ ಚಿತ್ರ ಕವಿತೆಗೆ ಸ್ಫೂರ್ತಿ ನೀಡಿದ್ದಿರಬಹುದು).

'ಕವಿಗಳು ಯಾವಾಗಲೂ ಹಳೆಯದನ್ನು ಚೆನ್ನಾಗಿ ನೋಡಿ, ಸಮಕಾಲೀನವನ್ನು ಕೂಡಿ ಹೊಸತನ್ನು ಮಾಡುವವರು ಎಂಬುದನ್ನು ಮೈ.ವೆಂ.ಸಿ. ಅವರು ತಮ್ಮ ಕಾವ್ಯ ರಚನೆಗಳಿಂದ ತೋರಿಸಿಕೊಟ್ಟಿದ್ದಾರೆ' ಎಂಬ ಚೆನ್ನವೀರಕಣವಿಯರ ಮಾತು ಈ ಸಂದರ್ಭದಲ್ಲಿ ಉಲ್ಲೇಖನೀಯ.

ಕಾಲೇಜಿನಲ್ಲಿ ಇವರಿಗೆ ಟಿ.ಎಸ್. ವೆಂಕಣ್ಣಯ್ಯ, ತೀನಂಶ್ರೀ, ಬಿ.ಎಂ.ಶ್ರೀ., ಡಿ.ಎಲ್.ಎನ್. ಮೂರ್ತಿರಾವ್, ರಾಳ್ಳಪಲ್ಲಿ, ನಾ. ಕಸ್ತೂರಿ ಮುಂತಾದ ಸಾಹಿತ್ಯ ದಿಗ್ಗಜರುಗಳು ಗುರುಗಳಾಗಿದ್ದರು. ಇವರೆಲ್ಲರ ಪ್ರಭಾವಿ ವಲಯದಲ್ಲಿ ಸಿಲುಕಿ ಇವರು ಲೇಖಕರಾದರು. ಅನಂತರ ಜನಪ್ರಿಯ ಉಪಾಧ್ಯಾಯರಾಗಿಯೂ ರೂಪುಗೊಂಡರು.

ಗುರುಗಳಾದ ತೀ.ನಂ.ಶ್ರೀ.ಯವರ ಉತ್ತೇಜನದಿಂದ, ಮಾರ್ಗದರ್ಶನದಿಂದ ಇವರಿಗೆ ಬಿ.ಎಂ.ಶ್ರೀ.ಯವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆಸಿದ ರಜತಮಹೋತ್ಸವ ಸ್ವರ್ಣಪದಕ ಕವಿತಾ ಸ್ಪರ್ಧೆಯಲ್ಲಿ ಇವರು ರಚಿಸಿದ 'ಆ ಚಿತ್ರಗಳು' ಕವನಕ್ಕೆ ಸ್ವರ್ಣಪದಕ ಲಭಿಸಿತು. ಹೀಗೆ ದೊರೆತ ಈ ಉತ್ತೇಜನ ಇವರನ್ನು ಪೂರ್ಣರೂಪದ ಕವಿಯನ್ನಾಗಿಸಿತು. ಈ ಪದ್ಯ 'ಆ ಚಿತ್ರಗಳು ಮತ್ತು ಇತರ ಕಥನ ಕವನಗಳು' ಸಂಕಲನದಲ್ಲಿ ಸೇರಿದೆ.

ಕಾವ್ಯ ರಚನೆಯ ಪ್ರಯತ್ನಗಳ ಜೊತೆ ಜೊತೆಯಲ್ಲಿ ಲಲಿತ ಪ್ರಬಂಧ, ಸಣ್ಣಕಥೆ, ನಾಟಕ ಪ್ರಾಕಾರಗಳಲ್ಲೂ ಇವರ ಸಾಹಿತ್ಯ ಕೃಷಿ ಮುಂದುವರಿಯಿತು. ೧೯೩೪ರಲ್ಲಿ ಎಂ.ಎ. ಪದವಿ ಗಳಿಸಿದ ನಂತರ ಉದ್ಯೋಗಕ್ಕಾಗಿ ಅಲೆದಾಟ ಪ್ರಾರಂಭವಾಯಿತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಡಿ.ವಿ. ಗುಂಡಪ್ಪನವರು ಇವರನ್ನು ಪರಿಷತ್ತಿನಲ್ಲಿ ಸಂಬಳ ಪಡೆಯುವ ಕಾರ್ಯದರ್ಶಿಯಾಗಿ ನೇಮಿಸಿಕೊಂಡರು. ಇಲ್ಲಿ ಇವರು ೧೯೩೪-೩೯ರ ತನಕ ಇದ್ದ ಈ ಕಾಲದಲ್ಲಿ ಇವರಿಗೆ ಸಾಹಿತಿಗಳ ಸಂಪರ್ಕ ವೃದ್ಧಿಸಿತು. ಕನ್ನಡ ಸಾಹಿತ್ಯ ಪರಿಷತ್ತಿನ ಪರಿಷತ್ಪತ್ರಿಕೆಯ ಸಂಪಾದಕರಾಗಿದ್ದ ಎ.ಆರ್.ಕೃ.ರವರಿಗೆ ಇವರು ಸಹಾಯಕರಾಗಿದ್ದರು. ಆಗ ಇವರು ರಚಿಸಿದ ಹಲವು ಕವನಗಳನ್ನು 'ಕನ್ನಡ ನುಡಿ'ಯ ಸಂಪಾದಕರಾಗಿದ್ದ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಮೆಚ್ಚಿ 'ಕಾವ್ಯಾಲಾಪ' ವಿಭಾಗದಡಿ ಪ್ರಕಟಿಸಿದರು. ಆಗ ಎಂ.ವಿ.ಸೀ.ಯವರಿಗೆ ಅವರು ನೀಡಿದ್ದು ಕಾವ್ಯನಾಮ 'ಕವಿಮಿತ್ರ'. ಮುಂದೆ ಇವರು 'ರಾಘವ' ಕಾವ್ಯನಾಮವನ್ನು ಹೆಚ್ಚು ಉಪಯೋಗಿಸಿಕೊಂಡರು.

೧೯೩೯ರಲ್ಲಿ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸವನ್ನು ಬಿಟ್ಟು ೧೯೩೯ ರಿಂದ ೧೯೪೭ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ-ಇಂಗ್ಲಿಷ್ ಕೋಶ'ದ ಸಹ ಸಂಪಾದಕರಾಗಿ ದುಡಿದರು. ಇದೇ ಅವಧಿಯಲ್ಲಿ ಇವರು ರಚಿಸಿದ 'ಹಕ್ಕಿಹಾಡು' ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಪ್ರಶಸ್ತಿ ಲಭ್ಯವಾಯಿತು.

೧೯೫೧ರಲ್ಲಿ ಇವರು ತಮ್ಮದೇ ಆದ 'ರಾಘವ' ಪ್ರಕಟಣಾ ಸಂಸ್ಥೆಯನ್ನು ಸ್ಥಾಪಿಸಿ 'ಮಾದನ ಮಗಳು' ಎಂಬ ಕಾದಂಬರಿಯನ್ನು ಪ್ರಕಟಿಸಿದರು. ಇದೂ ಸಹ ದೇವರಾಜ ಬಹದ್ದೂರ್ ಬಹುಮಾನಕ್ಕೆ ಪಾತ್ರವಾಯಿತು.

ಶಾಲಾ ಕಾಲದಿಂದಲೂ ಇವರಿಗೆ ನಾಟಕಗಳಲ್ಲಿ ಬಹಳ ಆಸಕ್ತಿಯಿತ್ತು. ನಾಟಕಗಳನ್ನು ರಚಿಸಿ ಆಡಿಸುತ್ತಿದ್ದರು. ತಾವೂ ಅವುಗಳಲ್ಲಿ ಪಾತ್ರವಹಿಸುತ್ತಿದ್ದರು. ಮೊದಲು ಮೊದಲು ಇವರು ಹೆಚ್ಚಾಗಿ 'ಸ್ತ್ರೀ' ಪಾತ್ರಗಳನ್ನೇ ವಹಿಸುತ್ತಿದ್ದರು. ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ಇವರು ರಚಿಸಿದ 'ಹೂವಿನ ಆಸೆ' ಅಪಾರ ಜನಮೆಚ್ಚುಗೆ ಪಡೆದು ಶಾಲಾ ಕಾಲೇಜುಗಳಲ್ಲಿ ಮೂವತ್ತಕ್ಕೂ ಹೆಚ್ಚು ಬಾರಿ ಪ್ರಕಟಗೊಂಡು ವಿಕ್ರಮ ದಾಖಲಿಸಿತ್ತು. ನಾ. ಕಸ್ತೂರಿಯವರ 'ವರಪರೀಕ್ಷೆ' ನಾಟಕದಲ್ಲಿ ಮತ್ತು ಕೈಲಾಸಂರವರ 'ಪೋಲಿಕಿಟ್ಟಿ' ನಾಟಕದಲ್ಲಿ ಸಮರ್ಥವಾಗಿ ಅಭಿನಯಿಸಿ ಉತ್ತಮ ನಟರೆಂದು ಹೆಸರು ಗಳಿಸಿದ್ದರು.

ಸಂಗೀತದಲ್ಲಿ ಅಭಿರುಚಿಯಿದ್ದ ಮನೆತನದಲ್ಲಿ ಬೆಳೆದ ಇವರಿಗೆ ಸಂಗೀತದಲ್ಲಿ ಬಾಲ್ಯದಿಂದಲೇ ಆಸಕ್ತಿ ಬೆಳೆದು ಬಂದಿತ್ತು. ಇದರಿಂದಾಗಿಯೇ ಇವರು ಮೃದಂಗ ಅಭ್ಯಾಸ ಮಾಡಿ ಅದರಲ್ಲೂ ಪ್ರಾವೀಣ್ಯತೆ ಗಳಿಸಿಕೊಂಡಿದ್ದ ಹೆಗ್ಗಳಿಕೆಗೆ ಪಾತ್ರರಾದರು.

ಬಹುಮುಖ ಪ್ರತಿಭಾವಂತರಾಗಿದ್ದ ಶ್ರೀಯುತರು ಹೀಗೆ ಸಾಹಿತ್ಯಿಕ ಪ್ರಕಾರದಲ್ಲಲ್ಲದೆ ಕಲಾವಿಭಾಗದಲ್ಲೂ ಪ್ರಾವಿಣ್ಯತೆ ಗಳಿಸಿಕೊಂಡು ಖ್ಯಾತರಾಗಿದ್ದರು.

೧೯೪೬ ರಿಂದ ೧೯೬೩ರವರೆಗೆ ಇವರು ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದು ೧೯೬೩ರಲ್ಲಿ ರೀಡರ್ ಆಗಿ ಬಡ್ತಿ ಪಡೆದು ೧೯೬೭ರಲ್ಲಿ ನಿವೃತ್ತರಾದರು. ಆಗ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳು ಸೇರಿ 'ರಾಘವ ಸನ್ಮಾನ ಸಮಿತಿ' ವತಿಯಿಂದ ಇವರನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಗೌರವ ಸೂಚಿಸಿದ್ದರು. ಅನಂತರ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ. ಗೌರವ ಪ್ರಾಧ್ಯಾಪಕರಾಗಿ ಕೆಲ ಕಾಲ ಸೇವೆ ಸಲ್ಲಿಸಿದರು.

೧೯೭೪ರಲ್ಲಿ ಇವರು ತಮ್ಮ ಪೂಜ್ಯ ಗುರುಗಳಾಗಿದ್ದ ಬಿ.ಎಂ.ಶ್ರೀ.ಯವರ ಹೆಸರಿನಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ತಮ್ಮ ಸ್ವಗೃಹದಲ್ಲಿ ಸ್ಥಾಪಿಸಿ ಅದರ ಅಭ್ಯುದಯಕ್ಕಾಗಿ ಅಹರ್ನಿಶಿ ಶ್ರಮಿಸಿದ್ದರು. ಅದೇ ಪ್ರತಿಷ್ಠಾನ ಈಗ ಬೃಹತ್ತಾಗಿ ಬೆಳೆದು ಬೆಳ್ಳೂರಿನಲ್ಲಿ ಸಹ ಒಂದು ಘಟಕವನ್ನು ಹೊಂದಿದ್ದು ಇದೀಗ ರಜತ ಮಹೋತ್ಸವವನ್ನು ಆಚರಿಸಿಕೊಳ್ಳಲು ಸಿದ್ಧವಾಗಿದೆ. ಇದು ನಿಜಕ್ಕೂ ಕನ್ನಡ ನಾಡು ಹಾಗೂ ಸಾಹಿತ್ಯಿಕ ಜಗತ್ತು ಹೆಮ್ಮೆ ಪಡುವ ಅಂಶವಾಗಿದೆ.

ಸಾಹಿತ್ಯದ ಎಲ್ಲಾ ಪ್ರಕಾರಗಳಿಗೂ ಸಂಪನ್ನ ಕೊಡುಗೆಗಳನ್ನು ನೀಡಿರುವ ಶ್ರೀಯುತರು ಮೂಲತಃ ಸೃಜನಾತ್ಮಕ ಸಾಹಿತಿ. ಇವರು ಕಥೆ, ಕಾದಂಬರಿ, ನಾಟಕ, ಕವನ, ಪ್ರಬಂಧ, ಮಕ್ಕಳ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು ೬೦ ಕೃತಿಗಳನ್ನು ನೀಡಿರುತ್ತಾರೆ. (ಕವನ ೧೫, ಮಕ್ಕಳ ಸಾಹಿತ್ಯ ೫, ಕಥಾ ಸಂಕಲನ ೧೦, ಕಾದಂಬರಿ ೧೧, ನಾಟಕ ೯, ಪ್ರಬಂಧ ೧೦, ವ್ಯಕ್ತಿ ೧). ಇವುಗಳಲ್ಲಿ ಹಲವು ಪ್ರಶಸ್ತಿ / ಪುರಸ್ಕಾರಕ್ಕೆ ಭಾಜನವಾಗಿವೆ. ಆದರೂ ಇವರು ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಖ್ಯಾತಿ ಗಳಿಸಿರುವುದು ಸಂಶೋಧನೆ, ಸಂಪಾದನೆ, ವಿಮರ್ಶಾ ಕ್ಷೇತ್ರಗಳಲ್ಲಿ. ಇವರಿಗೆ ಲಭಿಸಿರುವ ಪ್ರಮುಖ ಬಹುಮಾನಗಳು, ಪ್ರಶಸ್ತಿಗಳು:

ಬಿ.ಎಂ.ಶ್ರೀ. ರಜತೋತ್ಸವ ಸ್ವರ್ಣಪದಕ (೧೯೩೩), 'ಹಕ್ಕಿಹಾಡು' ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ (೧೯೪೬), 'ಮಾದನ ಮಗಳು' ಕಾದಂಬರಿಗೆ ದೇವರಾಜ ಬಹದ್ದೂರ್ ಬಹುಮಾನ (೧೯೫೧), 'ಮುಗಿಯದ ಮಾಯೆ' ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಬಹುಮಾನ (೧೯೫೭); ಜೀವನ ನಾಟಕ (ವ್ಯಕ್ತಿ ಕಥೆಗಳು) ಕೃತಿಗೆ ರಾಜ್ಯ ಸರ್ಕಾರ ಪ್ರಶಸ್ತಿ (೧೯೬೦); ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೭೩); 'ಕನ್ನಡ ವ್ಯಾಕರಣಗಳು' ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೮೦); ಡಾ. ಜ.ಚ.ನಿ.ಯವರಿಂದ ವಿಚಾರ ರತ್ನಾಕರ ಪ್ರಶಸ್ತಿ (೧೯೬೭); ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಪ್ರಶಸ್ತಿ (೧೯೭೫), 'ಆಸ್ವಾದ' ಅಭಿನಂದನಾ ಗ್ರಂಥ ಸಮರ್ಪಣೆ ಉದಯಭಾನು ಕಲಾ ಸಂಘದಿಂದ (೧೯೮೩).

ಇವರು ರಚಿಸಿರುವ ಪ್ರಮುಖ ಕೃತಿಗಳು : ಕಾವ್ಯ / ಕವನ ಸಂಗ್ರಹಗಳು : ಹಕ್ಕಿಹಾಡು; ಆ ಚಿತ್ರಗಳು ಮತ್ತು ಇತರ ಕವನಗಳು, ರಾಗ (ಪ್ರಣಯ ಗೀತೆಗಳು); ಅಶೋಕ ಚಕ್ರ (ದೇಶಭಕ್ತಿ ಕವನಗಳು); ವಿಶ್ವಜ್ಯೋತಿ ಬಾಪು; ರಾಷ್ಟ್ರರಥ; ರಾಷ್ಟ್ರ ದಿನೋತ್ಸವ ಗೀತೆ; ಮುಗಿಯದ ಮಾಯೆ; ಗೀತಭಾರತಿ, ಹಂಸಪಥ; ಬೀಸಿಬಂದ ಗಾಳಿ; ಮೊದಲ ಹೆಜ್ಜೆ; ಸೌಂದರ್ಯ ಲಹರಿ.

ಮಕ್ಕಳ ಪದ್ಯಗಳು : ಹೂವಾಡಗಿತ್ತಿ; ಹಾವಾಡಿಗ; ಕೋಡಂಗಿ;

ಸಣ್ಣಕಥೆ: ಶಿಲಾಮುಖ; ಯೌವನ ಸುಧೆ; ಮಾಗದರ್ಶಕ; ಜೀವನ ನಾಟಕ; ಗುಂಡಿನೇಟು ಮತ್ತು ಇತರ ಕಥೆಗಳು (ಅನುವಾದ) ವಿರಹಿಗಳ ಶೃಂಗಾರ (ಅಪ್ರಕಟಿತ); **ಕಾದಂಬರಿ:** ಭಾಗ್ಯಲಕ್ಷ್ಮಿ; ಮಾದನಮಗಳು; ಸೌಭಾಗ್ಯವತಿ; ಜೂಡಿ ಲಕ್ಷ್ಮಿ (ಅನುವಾದ); ಏಳು ಉಪ್ಪಾರಿನ ಮನೆ (ಅನುವಾದ);

ನಾಟಕ: ಹೂವಿನ ಆಸೆ; ತೆರೆಮರೆಯ ಚಿತ್ರಗಳು; ತೊಟ್ಟಿಲು ತೂಗದ ಕೈ; ಕರುಣೆಯ ಕುಡಿ (ಮಕ್ಕಳ ನಾಟಕ); ಕುಮಾರಿ ಗೌತಮ (ಮಕ್ಕಳ ನಾಟಕ); ಕೈಕೋಲು (ಮಕ್ಕಳ ನಾಟಕ); ಕಾವ್ಯ ಮೀಮಾಂಸೆ; ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ ಕನ್ನಡ ಸಾಹಿತ್ಯದಲ್ಲಿ ಶಾಂತರಸ;

ಗ್ರಂಥ ಸಂಪಾದನೆ : ಕವಿರಾಜಮಾರ್ಗ, ಕೀರ್ತನ ಕುಸುಮಾಂಜಲಿ, ಸೂತಭಾರತ; ಶ್ರೀಕೃಷ್ಣ ಬಾಲಲೀಲೆ, ಮಣಿಹ, ಹಸ್ತಪ್ರತಿಶಾಸ್ತ್ರ, ಬೇಂದ್ರೆ ಸ್ಮೃತಿ ಮುಂತಾದುವು.

ಶಾಸ್ತ್ರಗ್ರಂಥ: ಪ್ರಾಚೀನ ಕನ್ನಡ ವ್ಯಾಕರಣಗಳು; ಸಾಹಿತ್ಯ ಸಮೀಕ್ಷೆ; ಹೊಸ ಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು; ಕನ್ನಡ ಜೀವನ ಚರಿತ್ರೆ; ಶಾಸ್ತ್ರ ಸಾಹಿತ್ಯ;

ಸಂಶೋಧನೆ: ಉದಯಾದಿತ್ಯಲಂಕಾರದ ಕೆಲವು ಸಮಸ್ಯೆಗಳು; ೩ನೇ ನಾಗವರ್ಮನ ಕಾಲವಿಚಾರ; ಸರ್ವಜ್ಞನ ತ್ರಿಪದಿಗಳು; ಕವಿರಾಜಮಾರ್ಗ; ಕಾಲಕರ್ತೃ, ಸ್ವರೂಪ, ಕವಿಕಾವ್ಯಪರಂಪರೆ, ಸಾಹಿತ್ಯ ವಿಮರ್ಶೆ; ಕಥಾ ಸಾಹಿತ್ಯ, ಕನ್ನಡ ಕಾವ್ಯದಲ್ಲಿ ಪ್ರಣಯ

ಕಥೆಗಳು, ಮುಂತಾಗಿ ಹಲವು ವಿಷಯಗಳ ಬಗ್ಗೆ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟಗೊಂಡಿವೆ. ಇಂಗ್ಲಿಷ್‌ನಲ್ಲೂ ಇವರ ೫೦ಕ್ಕೂ ಹೆಚ್ಚು ವಿದ್ವತ್‌ಪೂರ್ಣ ಲೇಖನಗಳು ಪ್ರಕಟವಾಗಿವೆ.

ದಿನಾಂಕ : ೧೨-೩-೧೯೮೦ ಇವರು ನಿಧನರಾದಾಗ ಇವರಿಗೆ ಸಹಸ್ರಾರು ಅಭಿಮಾನಿಗಳ ಸಮ್ಮುಖದಲ್ಲಿ ಸಕಲ ಸರ್ಕಾರಿ ಗೌರವಗಳೊಡನೆ ಅಂತ್ಯಸಂಸ್ಕಾರಗಳನ್ನು ನಡೆಸಲಾಯಿತು.

ಖ್ಯಾತ ಬಹುಮುಖ ಪ್ರತಿಭೆಯ ಎಂ.ವಿ. ಸೀತಾರಾಮಯ್ಯ ಇಂದು ನಮ್ಮ ಮುಂದೆ ಇಲ್ಲದೆ ಇದ್ದರೂ ಅವರ ರಚಿಸಿರುವ ವಿದ್ವತ್‌ಪೂರ್ಣ ಕೃತಿಗಳಲ್ಲಿ, ಸ್ಥಾಪಿಸಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ರೂಪದಲ್ಲಿ ಅಮರವಾಗುಳಿದ್ದಾರೆ.

'ಎಂ.ವಿ.ಸೀ. ಕನ್ನಡ ಸಾಹಿತ್ಯಕ್ಕೆ, ಕನ್ನಡನಾಡಿಗೆ ಗೌರವ ತರುವ ದುಡಿಮೆಯಿಂದ ಬದುಕಿನಿಂದ, ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬಂದಿದ್ದಾರೆ. ದೈವದತ್ತವಾದ ಪ್ರತಿಭೆಯನ್ನು ಸತತಾಭ್ಯಾಸದಿಂದ, ವೃದ್ಧ ಸೇವಾನುರಾಗದಿಂದ ಹೇಗೆ ಪ್ರಕಾಶ ಪಡಿಸುತ್ತಿದ್ದಾರೆ ಎಂಬುದನ್ನು ಅವರ ಕಾವ್ಯ ಸೃಷ್ಟಿಯಲ್ಲಿ ಕಾಣಬಹುದು'. ಆರ್.ಎಸ್. ರಾಮರಾಯರ ಈ ಮಾತುಗಳು ಅವರ ಧೀಮಂತ ಜೀವನಕ್ಕೆ ಕನ್ನಡಿ ಹಿಡಿಯುತ್ತದೆ.

ಕೃಪೆ : ಕನ್ನಡ ನುಡಿ, ಆಗಸ್ಟ್ ೨೦೦೪

❑

ಋತಮೊಂದೆ ಗೆಲ್ಲುವುದು, ಅನೃತವಲ್ತು;
ಅಮೃತಮೆನೆ ವಿದ್ಯೆಯೆ, ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.

* * *

ಇವಳ ಸೊಬಗನವಳು ತೊಟ್ಟು,
ನೋಡ ಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ

* * *

ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ, ಗುರು.

* * *

ಕನ್ನಡಿಗರಾದ ನೀವು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ; ತಲೆಯೆತ್ತಿ ನಡೆಯಬೇಕಾಗಿದೆ.

- *ಬಿ.ಎಂ.ಶ್ರೀ.*

ವಾಮನರು ನಾವು

● ನಾ. ಗೀತಾಶಾಸ್ತ್ರಿ

ಮೈವೆಂಸೀ ಮಗುವಿನಂತಹ ಮನಸು ನಡೆನುಡಿ
ಗುಳಿಗೆ ನುಂಗದ ದಿನದ ನೆನಪಿಲ್ಲ ನಿಮಗೆ, ನಿಮ್ಮ
ನೋಟ ವಾಮನ ಒಳಗಿಣುಕಿದರೆ ತ್ರಿವಿಕ್ರಮ
ಮುದುಡಿರುವ ಬೆರಳಿನಲು ಪೆನ್ನಿಗೆಂತಹ ಮೋಡಿ
ಹಿಂದೊಮ್ಮೆ ಚೈತ್ರದಲಿ ನಲಿದಿತ್ತು ನವೋದಯ
ಶೃತಿಗೆ ಸಿಕ್ಕ ರಾಗದಲಿ ಹೊಮ್ಮಿಸಿದೆವು ನಾದ
ಆದರಾಗುಂಗಿನಲಿ ಮರೆತುಹೋದೆವಲ್ಲ
ಕನ್ನಡತಿಯ ವೀಣೆಯಲಿ ಇದೆಲ್ಲ ರಾಗವ
ಮಾಧುರ್ಯವಾಗಿಯೆ ಮಾರ್ನುಡಿದ ನಿಮ್ಮನೆ

ಅದರಗೊಡವೆಯೆ ಇಲ್ಲ ನಿಮಗೆ. ಮರೆತಿರಲು
ಶ್ರೀವಾಣಿಗೆ ಉಸಿರಾದಿರಿ, ಹಸಿರಾದಿರಿ ಕುಗ್ಗಿದಷ್ಟು
ಹಿಗ್ಗುತ್ತಿಹ ನಿಮ್ಮುತ್ಸಾಹದಿದಿರು ವಾಮನರು ನಾವೆ
ಮಾಡುವೆವು ನಾವೂ ನುಡಿಸೇವೆಯ ಕಾಯಕ
ಕಟ್ಟರೀಗಲೆ ನಮಗು ಶ್ರೀಅಂಕಿತ ತಾಯತ

❑

ಕಾವ್ಯರ್ಷಿಬಿಎಂಶ್ರೀ

● ಹೆಚ್.ಎಲ್. ಶೇಷಚಂದ್ರ

ಕನ್ನಡ ಕವಿಗಳಾ ಕವಿಯಾದ ಕಾವ್ಯಶ್ರೀ
ಕನ್ನಡ ತಾಯಿಯ ಮಮತೆಸುತ ಬಿಎಂಶ್ರೀ
ಕಾವ್ಯ ನಾಟಕಗಳ ರಚನೆಯ ಕಾವ್ಯರ್ಷಿ
ಕನ್ನಡದ ಸರಸತಿಯ ವರದಾತ ಬಿಎಂಶ್ರೀ.

ಸಂಗೀತ ನಾಟ್ಯಗಳ ಜನಕ ಶ್ರೀಕಂಠನವಿ
ಹೆಸರಿನಲಿ ನೆಲೆಯಾಗಿ ಕವಿಯಾದ ಬಿಎಂಶ್ರೀ
ಕನ್ನಡದ ಕಾವ್ಯಗಳ ಮಾಲೆಯ ವಾಗ್ದೇವಿಯ
ಕೊರಳಿಗೆ ತೊಡಿಸಿದಾ ಅನುಪಮ ಕಾವ್ಯರ್ಷಿ.

ಆಚಾರ್ಯ ಪುರುಷರಾದ ಕವಿ ನಾಟಕಕಾರ
ನಿನ ಕಾವ್ಯಾಕ್ಷರ ಸುಂದರ ಅಜರಾಮರ
ಕಾವ್ಯಕಲೆಯ ತೋರಿದ ವರವಿದ್ಯಾಸಾಗರ
ಕಾವ್ಯಲೋಕ ಬೆಳಗಿದ ಶಾರದಾ ಕುವರ.

ಛಂದದಾ ನಡೆಯಲಿ ಕಾವ್ಯದರಮನೆಯಂದು
ಅಂದದೀ ನಿರ್ಮಿಸಿದ ಅಮರ ಕಾವ್ಯಶಿಲ್ಪಿ
ಕನ್ನಡದಾ ನಾಡಿಗೆ ಕನ್ನಡವೇ ಗತಿಯೆಂದು
ಉತ್ಸಾಹದಿ ಸಾರಿದ ಈ ನಾಡಪ್ರೇಮಿ.

ನಾಡಿನ ಕವಿಶ್ರೇಷ್ಠರಿಗೆ ಹೆಮ್ಮೆಯ ಗುರುವಾದ
ಚೆಂದದ ಕರುನಾಡಿನ ಸಿರಿನುಡಿಯ ಸಂಸ್ಕೃತಿಯ
ವಿಶಾಲ ವಿಶ್ವದಲಿ ಪಸರಿಸಿದ ಶ್ರೀಮಂತ
ಕಾವ್ಯರ್ಷಿ ಬಿಎಂಶ್ರೀ ನಿನಗೆ ಅನಂತ ನಮನ.

❑

ದೊಡ್ಡಪ್ಪ ಬಿ.ಎಂ.ಶ್ರೀ.

● *ಆರ್ಯಾಂಬ ಪಟ್ಟಾಭಿ*

'ಶ್ರೀ' ಕಾವ್ಯನಾಮದ ಬಿ.ಎಂ.ಶ್ರೀ. ಎಂಬ ಮೂರಕ್ಷರಗಳಿಂದ ಪ್ರಖ್ಯಾತರಾದ ಪ್ರೊಫೆಸರ್ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು 'ಕನ್ನಡದ ಕಣ್ವಮುನಿ', 'ಕನ್ನಡ ನವೋದಯ ಕಾರಣ ಪುರುಷ', 'ಆಧುನಿಕ ಕರ್ಣಾಟ ಕವಿಚೂತವನ ಚೈತ್ರ' ಇತ್ಯಾದಿಯಾಗಿ ಸಂಕೀರ್ತಿತರಾದವರು. ಬಹುಭಾಷಾ ಪಂಡಿತರಾಗಿ, ಅಪ್ರತಿಮ ಬೋಧನಾ ಪ್ರಾವೀಣ್ಯರಾಗಿ, ಕನ್ನಡ ಕಾವ್ಯಕ್ಕೆ ಹೊಸ ಸಿಂಗಾರ ಉಡಿಸಿ, ಗದ್ಯಕ್ಕೆ ನವಶಕ್ತಿ ತುಂಬಿದರು. ಛಂದಸ್ಸು, ಗ್ರಂಥ ಸಂಪಾದನೆ, ಲಿಪಿ ಸುಧಾರಣೆ, ಸಾಹಿತ್ಯ ಚರಿತ್ರೆ, ವಿಮರ್ಶೆ, ಜಾನಪದ, ವಯಸ್ಕರ ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ಹೊಸ ಮಾರ್ಗ ತೋರಿಸಿ ದಾರಿದೀಪವಾದರು. ಅಪಾರ ಶಿಷ್ಯಪರಂಪರೆಗೆ ಆಚಾರ್ಯರಾಗಿ, ವಿಶ್ವವಿದ್ಯಾನಿಲಯದ ಇಂಗ್ಲಿಷ್ ಮತ್ತು ಕನ್ನಡ ವಿಭಾಗದಲ್ಲಿ ಪ್ರಾಚಾರ್ಯರಾಗಿ ಜ್ಞಾನದಾನ ಮಾಡಿದರು.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಸಂಪಿಗೆ ಗ್ರಾಮದಲ್ಲಿ ೧೮೮೪ರ ಜನವರಿ ನಾಲ್ಕನೆಯ ತಾರೀಖು ಬಿ.ಎಂ.ಶ್ರೀ. ಜನಿಸಿದರು. ತಂದೆ ಮೈಲಾರಯ್ಯ, ತಾಯಿಯ ಹೆಸರು ಭಾಗೀರಥಮ್ಮ. ಜೋಡಿದಾರರಾಗಿದ್ದ ತಾತ ಮಲ್ಲಣ್ಣನ ಮನೆಯಲ್ಲೆ ಅವರ ಜನನವಾಯ್ತು. ತಗ್ಗಿನ ಮಣ್ಣಿನ ಗೋಡೆಗಳು, ಹೆಂಚಿನ ಮೇಲ್ಛಾವಣಿಯಿರುವ ಸುಮಾರು ಇನ್ನೂರು ವರ್ಷದ ಆ ಮನೆ ಗಟ್ಟಿಮುಟ್ಟಾಗಿದ್ದು ಈಗಲೂ ಬಿ.ಎಂ.ಶ್ರೀ. ದಾಯಾದಿಗಳು ವಾಸವಾಗಿದ್ದಾರೆ. ಕುಟುಂಬದ ಮನೆದೇವರು ನಂಜನಗೂಡಿನ ನಂಜುಂಡೇಶ್ವರ. ಹೀಗಾಗಿ ಹಿರಿಯರು ಮಗುವಿಗೆ 'ಶ್ರೀಕಂಠ' ಎಂದು ನಾಮಕರಣ ಮಾಡಿದರು. ಶ್ರೀಕಂಠನಿಗೆ ಇಬ್ಬರು ತಮ್ಮಂದಿರು, ಇಬ್ಬರು ತಂಗಿಯರು. ತಂದೆಯನ್ನು ಕಳೆದುಕೊಂಡ ಶ್ರೀಕಂಠ ಅವರ ಸ್ಥಾನದಲ್ಲಿ ನಿಂತು ಮನೆಯವರ ಯೋಗಕ್ಷೇಮ ನೋಡಿಕೊಂಡಿದ್ದಲ್ಲದೆ ಪಿತ್ರಾರ್ಜಿತ ಆಸ್ತಿಯನ್ನು ತಮ್ಮಂದಿರಿಗೇ ಬಿಟ್ಟುಕೊಟ್ಟರು. ಮನೆಯವರೆಲ್ಲ ಅವರನ್ನು ಪ್ರೀತಿಗೌರವಗಳಿಂದ 'ಅಣ್ಣಯ್ಯ' ಎಂದೇ ಸಂಬೋಧಿಸುತ್ತಿದ್ದರು.

ಮೂರು ಮಕ್ಕಳ ತಂದೆಯಾಗಿ ಪತ್ನಿ ದೇವಿಯಮ್ಮನನ್ನು ಕಳೆದುಕೊಂಡ ಶ್ರೀಕಂಠನ ವಯಸ್ಸು ಮೂವತ್ತು. ಅವರ ಆರು ತಿಂಗಳ ಏಕೈಕ ಪುತ್ರ ಮನೆಯವರ ಅಚಾತುರ್ಯದಿಂದ ಎರಡು ಕಣ್ಣುಗಳನ್ನೂ ಕಳೆದುಕೊಂಡು ಕುರುಡನಾದ. ದೊಡ್ಡಪ್ಪ ಮರುಮದುವೆಯಾಗದೆ ಮಕ್ಕಳನ್ನು ಬೆಳೆಸಿದರು, ಒಳ್ಳೆಯ ಶಿಕ್ಷಣ ಕೊಡಿಸಿದರು. ಮಗ ಸೊಗಸಾಗಿ ಕೊಳಲು ನುಡಿಸುವಂತೆ ಪಾಠ ಹೇಳಿಸಿದರು. ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆ ಮಾಡಿದರೂ ಹಿರಿಯ ಮಗಳು ಎರಡು ಮಕ್ಕಳ ತಾಯಾಗಿ ವಿಧವೆಯಾದಳು. ಸಂಸಾರದ ಕಷ್ಟನಷ್ಟಗಳ ಕೊಪ್ಪರಿಗೆಯಲ್ಲಿ ಬೆಂದರೂ ವೃತ್ತಿ ಜೀವನದಲ್ಲಿ ಮೆಟ್ಟಿಲೇರುತ್ತಾ ಹೋದರು.

ಬಿ.ಎಂ.ಶ್ರೀ.ಗೆ ತಾರುಣ್ಯದಲ್ಲೆ ಕನ್ನಡದ ಚಿಂತೆ ಮತ್ತು ಕನ್ನಡ ಸಾಹಿತ್ಯವನ್ನು ಬೆಳೆಸುವ ಆಲೋಚನೆ. ಮಾತೃಭಾಷೆ ಕನ್ನಡದ ಮೇಲೆ ಅನನ್ಯ ಪ್ರೀತಿ, ಹಾಗೆಂದು ಇತರ ಭಾಷೆಗಳನ್ನು ಅಲಕ್ಷ ಮಾಡಲಿಲ್ಲ. ಕನ್ನಡಿಗರು ಕನ್ನಡ, ಇಂಗ್ಲಿಷ್, ಮತ್ತಿತರ ಭಾಷೆಗಳ ಸಾಹಿತ್ಯವನ್ನು ಅಭ್ಯಾಸಮಾಡಬೇಕೆಂದು ಹೇಳುತ್ತಿದ್ದರಲ್ಲದೆ ಅವರೇ ತಮಿಳು, ತೆಲುಗು, ಗ್ರೀಕ್, ಸಂಸ್ಕೃತ, ಉರ್ದು ಮುಂತಾದ ಭಾಷೆಗಳಲ್ಲಿ ಪಾಂಡಿತ್ಯ ಪಡೆದರು. ಅನೇಕ ಪ್ರಸಿದ್ಧ ಇಂಗ್ಲಿಷ್ ಕವಿಗಳ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದರು. ಗ್ರೀಕ್ ಭಾಷೆಯ ದುರಂತ ನಾಟಕಗಳ ರೀತಿಯಲ್ಲಿ 'ಅಶ್ವತ್ಥಾಮನ್' ನಾಟಕವನ್ನು ಹಳಗನ್ನಡ ಭಾಷೆಯಲ್ಲಿ ರಚಿಸಿದರು. ಅವರ 'ಪಾರಸೀಕರು' ನಾಟಕವೂ ಗ್ರೀಕ್ ರುದ್ರನಾಟಕದ ಅನುವಾದ, ನೇರ ಭಾಷಾಂತರ. ರನ್ನನ 'ಗದಾಯುದ್ಧ'ದಲ್ಲಿರುವ ನಾಟಕೀಯ ಗುಣಗಳನ್ನು ಗುರುತಿಸಿ ಅದನ್ನು ನಾಟಕ ರೂಪಕ್ಕೆ ಅಳವಡಿಸಿದರು.

ಬಿ.ಎಂ.ಶ್ರೀ. ಬರೆದದ್ದು ಕಡಿಮೆ. ಕೇವಲ ಹತ್ತು ಕೃತಿಗಳು ಮಾತ್ರ. ಆದರೆ ಅವೆಲ್ಲವೂ ಅಮೂಲ್ಯವಾದ ಮುತ್ತುಗಳು, ಮೌಲಿಕ ಸಾಹಿತ್ಯ ರತ್ನಗಳು, ನಿಸ್ಸಂದೇಹವಾಗಿ ಹೊಸ

ಪ್ರಯೋಗಗಳು. ಇತರರು ಆ ಪ್ರಯೋಗಗಳನ್ನು ಯಶಸ್ವಿಯಾಗಿ ಮುಂದುವರಿಸಿದರು. ಅವರ ಕವನ ಸಂಗ್ರಹ 'ಇಂಗ್ಲಿಷ್ ಗೀತೆಗಳು' ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ ಕವಿತೆಗಳು. ಈ ಕಾವ್ಯಗಳು ಕನ್ನಡ ಕಾವ್ಯರಂಗದಲ್ಲಿ ಹೊಸ ಸಾಧ್ಯತೆಗಳನ್ನು, ವಸ್ತು ಮತ್ತು ಲಯಗಳಿಗೆ ಸಂಬಂಧಿಸಿದಂತೆ ಪ್ರದರ್ಶಿಸಿ ಯಶಸ್ಸು ಪಡೆದು ಹೊಸಗನ್ನಡದ ಕಾವ್ಯ ಪ್ರಪಂಚಕ್ಕೇ ಒಂದು ಪರ್ವಕೃತಿ ಎನಿಸಿಕೊಂಡಿದೆ. ಇದರಿಂದಾಗಿ ಒಂದು ಕಾವ್ಯ ಪರಂಪರೆಯ ನಿರ್ಮಾಣಕ್ಕೆ ಅವರು ಕಾರಣಭೂತರಾದರು. 'ಹೊಂಗನಸು' ಕವನ ಸಂಕಲನದಲ್ಲಿರುವುದು ಸರಳ ಭಾಷೆಯಲ್ಲಿ ಆಡುಮಾತಿಗೆ ಸಮೀಪ ವಾಗಿದ್ದು ಸಾಮಾನ್ಯರಿಗೂ ಅರ್ಥವಾಗುವಂತಹ ಸ್ವತಂತ್ರ ಕವನಗಳು. 'ಕನ್ನಡ ಸಾಹಿತ್ಯ ಚರಿತ್ರೆ' ಅಪೂರ್ಣವಾಗಿದ್ದರೂ ತನ್ನದೇ ಆದ ವಿಶಿಷ್ಟ ಸಾಹಿತ್ಯ ಚರಿತ್ರೆಯನ್ನೊಳಗೊಂಡಿದ್ದು 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ವಿಚಾರ, ವಿಮರ್ಶೆ, ಭಾಷಣ ಮತ್ತು ಮುನ್ನುಡಿಗಳಿರುವ ಗಮನಾರ್ಹ ಸಂಕಲನ. 'ಇಸ್ಲಾಂ ಸಂಸ್ಕೃತಿ' ಶ್ರೀಯವರ ಅನುವಾದ ಗ್ರಂಥ. ಅವರ ಕೆಲವು ಅಪ್ರಕಟಿತ ಕವನಗಳು, ಲೇಖನಗಳು, ವಿಮರ್ಶೆ, ವಿಚಾರ ಇತ್ಯಾದಿ ಬರಹಗಳನ್ನು 'ಶ್ರೀ ಸಾಹಿತ್ಯ' ಎಂಬ ಸಮಗ್ರ ಕೃತಿ ಸಂಪುಟದಲ್ಲಿ ಕುವೆಂಪು ಅಧ್ಯಯನ ಸಂಸ್ಥೆ ೧೯೮೩ರಲ್ಲಿ ಪ್ರಕಟಿಸಿದೆ.

ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ 'ಶ್ರೀ' ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಭಾಷಣ ಮಾಡುತ್ತಿದ್ದರು. 'ನೀವೇಕೆ ಕನ್ನಡದ ಬಗ್ಗೆ ಇಂಗ್ಲಿಷಿನಲ್ಲಿ ಮಾತನಾಡುತ್ತೀರಿ? ಎಂದು ಅವರನ್ನು ಕೇಳಿದಾಗ 'ಇಂಗ್ಲಿಷ್ ವ್ಯಾಮೋಹ ಇರುವ ಜನಕ್ಕೆ ಕನ್ನಡದ ಬಗ್ಗೆ ಗೌರವ ಬರಲೆಂದು' ಎಂದವರು ಉತ್ತರಿಸಿದ್ದರು. ಕನ್ನಡ ಭಾಷೆಯನ್ನು ತಿರಸ್ಕರಿಸಿ ಇಂಗ್ಲಿಷ್ ಭಾಷೆಯನ್ನು ಕನ್ನಡಿಗರು ಪ್ರೀತಿಸುತ್ತಿದ್ದ ಕಾಲವದು. ಈಗಲೂ ಪರಿಸ್ಥಿತಿ ಬದಲಾಗಿಲ್ಲ.

ಹಲವಾರು ಸಾಧನೆಗಳಲ್ಲಿ 'ಶ್ರೀ' ಮೊದಲಿಗರು, ಅವರಿಗೇ ಅಗ್ರಸ್ಥಾನ. ತಂದೆ ತಾಯಿಗಳಿಗೆ ಮೊದಲನೆಯ ಸಂತಾನ. ಜನಿಸಿದ್ದು ವರ್ಷದ ಮೊದಲನೆಯ ತಿಂಗಳು ಜನವರಿಯಲ್ಲಿ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಎಂ.ಎ. ತರಗತಿ ಅವರಿಂದಲೇ ಪ್ರಾರಂಭಿಸಲ್ಪಟ್ಟಿತು ಮತ್ತು ಕನ್ನಡ, ಇಂಗ್ಲಿಷ್ ಈ ಎರಡೂ ವಿಭಾಗಗಳಲ್ಲಿ ಪ್ರಾಧ್ಯಾಪಕರಾಗಿದ್ದರು. ಒಬ್ಬ ವ್ಯಕ್ತಿ ಹೀಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು ಅದೇ ಮೊದಲು ಮತ್ತು ಅದೇ ಕೊನೆ. ಕನ್ನಡ ಏಕೀಕರಣದ ಬಗ್ಗೆ ಕನಸು ಕಂಡ ಮೊದಲ ಸಾಹಿತಿಯಾಗಿದ್ದರಲ್ಲದೆ ಕನ್ನಡದ ಚಳವಳಿಯನ್ನು ಪ್ರಾರಂಭಿಸಿ ದವರಲ್ಲಿ ಅವರೇ ಮೊದಲಿಗರು. ಕನ್ನಡಿಗರನ್ನು ನಿದ್ರೆಯಿಂದ ಎಚ್ಚರಗೊಳಿಸಿ ಅವರಲ್ಲಿ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ಸುತ್ತಾಡಿ ನಾಡು, ನುಡಿ, ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಉಪನ್ಯಾಸ ಗಳನ್ನು ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಉಪಾಧ್ಯಕ್ಷರಾಗಿ 'ಕನ್ನಡ ಬಾವುಟ' ಮತ್ತು 'ಕನ್ನಡ ನುಡಿ' ಪತ್ರಿಕೆ ಗಳನ್ನು ಪ್ರಕಟಿಸಿದರು. ಹೊಸಗನ್ನಡ ಕಾವ್ಯದ ಹೆದ್ದಾರಿಯನ್ನು ತೆರೆದು ಸಾಹಿತ್ಯದ ಅನೇಕ ಪ್ರಕಾರಗಳಿಗೆ ನೂತನ ಮಾರ್ಗ ನಿರ್ಮಿಸಿದ ಅಗ್ರಗಣ್ಯ ಆಚಾರ್ಯರೆನಿಸಿಕೊಂಡರು.

'ಬಿ.ಎಂ.ಶ್ರೀ. ನವಯುಗದ ಪ್ರವರ್ತಕ' ಎಂದಿದ್ದಾರೆ ಕುವೆಂಪು.

'ಶ್ರೀ ಕಂಠಶ್ರೀ ಇತರರಿಗಿಲ್ಲ' - ಆಲೂರ ವೆಂಕಟರಾಯರು.

'ಶ್ರೀ ಮಾರ್ಗದರ್ಶಿಗಳು, ಮಾರ್ಗಕಾರರು' - ದ.ರಾ. ಬೇಂದ್ರೆ

'ಶ್ರೀ ತೋರಿಸಿದ್ದೇ ಒಳ್ಳೆಯ ದಾರಿ' - ಡಿ.ವಿ. ಗುಂಡಪ್ಪ

'ಕನ್ನಡದ ಹುಚ್ಚು ಶ್ರೀ ಅವರಿಗೆ ಹಿಡಿದಷ್ಟು ಬೇರೆ ಯಾರಿಗೂ ಹಿಡಿದಿರಲಿಲ್ಲ' - ಬೆಳ್ಳಾವೆ ವೆಂಕಟನಾರಣಪ್ಪ.

ಬಿ.ಎಂ. ಶ್ರೀಕಂಠಯ್ಯ ನಮ್ಮ ತಂದೆ ಬಿ.ಎಂ. ಕೃಷ್ಣಸ್ವಾಮಿ ಯವರ ಹಿರಿಯಣ್ಣ. ದೊಡ್ಡಪ್ಪನವರನ್ನು ಹಲವಾರು ಸಲ ನಾನು ಕಂಡಿದ್ದೆ, ಅವರ ಧ್ವನಿ ಕೇಳಿದ್ದೆ. ಮಟ್ಟಸವಾದ ಹೆಚ್ಚು ಎತ್ತರ ವಲ್ಲದ ಶರೀರ, ಸುಂದರವಾದ ಅಗಲ ಮುಖ, ಕೆಂಡ ಸಂಪಿಗೆ ಮೈಬಣ್ಣ.... ಅವರಿಗೂ ನಮ್ಮ ತಂದೆಗೂ ತುಂಬ ಹೋಲಿಕೆ. ಮಂಡ್ಯದಲ್ಲಿ ನಡೆದ ನಮ್ಮಕ್ಕನ ಮದುವೆಗೆ ಅವರು ಬಂದಿದ್ದರು. ಅವರ ಅರುವತ್ತರ ಹುಟ್ಟುಹಬ್ಬ ಸಮಾರಂಭಕ್ಕೆ ಅಪ್ಪಅಮ್ಮನ ಜೊತೆ ನಾನು ಬೆಂಗಳೂರಿಗೆ ಹೋಗಿದ್ದೆ...

ಆದರೆ ದೊಡ್ಡಪ್ಪನವರನ್ನು ಕಂಡಿದ್ದು, ಅವರ ಧ್ವನಿ ಕೇಳಿದ್ದು ಎಲ್ಲವೂ ಕತ್ತಲಲ್ಲಿ ಕಾಣಿಸುವ ಕಡಲಲೆಗಳಂತೆ ಅಸ್ಪಷ್ಟ.... ಅವರ ದೊಡ್ಡತನವನ್ನು ತಿಳಿಯಲಾರದಷ್ಟು ದಡ್ಡಳಾಗಿದ್ದೆ, ಯಾಕೆಂದರೆ ನಾನಾಗ ಆರೇಳು ವರ್ಷದ ಹುಡುಗಿ. ❑

ನನ್ನ ಚಿಕ್ಕಪ್ಪ 'ಕನ್ನಡ ಕಣ್ವ ಬಿ.ಎಂ.ಶ್ರೀ.'

● *ಇಂಗ್ಲೀಷ್ ಮೂಲ : ರಾಜೇಶ್ವರಿ ಚಟರ್ಜಿ*

ನನ್ನ ಅಜ್ಜ ಮೈಲಾರಯ್ಯನವರ ಹಿರಿಯ ಪುತ್ರ ಶ್ರೀಕಂಠಯ್ಯ. ಜನವರಿ ೩, ೧೮೮೪ರಲ್ಲಿ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿಗೆ ಸೇರಿದ ಸಂಪಿಗೆ ಎಂಬ ಪುಟ್ಟ ಗ್ರಾಮದಲ್ಲಿ ತಾತ ಮಲ್ಲಣ್ಣನವರ ಮನೆಯಲ್ಲಿ ಜನಿಸಿದರು. ಮೊದಲನೆಯ ಹೆರಿಗೆ ತವರಿನಲ್ಲೇ ಆಗಬೇಕು ಎಂಬುದು ಅಂದಿನ ನಂಬಿಕೆ. ಈ ಪದ್ಧತಿ ಇಂದಿಗೂ ಚಾಲ್ತಿಯಲ್ಲುಂಟು. ಸಂಪಿಗೆ ಪುಟ್ಟಗ್ರಾಮ. ಅಲ್ಲಿ ಶ್ರೀ ವೆಂಕಟರಮಣಸ್ವಾಮಿಯ ದೇವಾಲಯವಿದೆ. ಮಲ್ಲಣ್ಣನವರ ಎರಡನೆಯ ಮಗಳು ಭಾಗೀರಥಮ್ಮ ಶ್ರೀಕಂಠಯ್ಯನವರ ತಾಯಿ. ಮಲ್ಲಣ್ಣನವರು ಜೋಡಿದಾರರಾಗಿದ್ದರು. ಸಂಪಿಗೆಯ ಬಳಿ ದೊಡ್ಡದಾದ ಜಮೀನಿನ ಮಾಲೀಕರಾಗಿದ್ದು, ಬತ್ತ, ರಾಗಿ ಹಾಗೂ ತೆಂಗು ಬೆಳೆಯುತ್ತಿದ್ದರು.

೧೯೮೪ರಲ್ಲಿ ಊರಿನ ಜನ ಏರ್ಪಡಿಸಿದ್ದ ನನ್ನ ದೊಡ್ಡಪ್ಪನವರ ಜನ್ಮಶತಾಬ್ಧಿ ಸಮಾರಂಭದ ಸಂದರ್ಭದಲ್ಲಿ ನಾನು ಸಂಪಿಗೆಗೆ ಹೋಗಿದ್ದೆ. ನನ್ನ ತಂದೆಯೂ ನನ್ನ ಸಂಗಡ ಬಂದಿದ್ದರಿಂದ ಅವರ ದಾಯಾದಿ ಜೋಡಿದಾರ್ ಕೃಷ್ಣಮೂರ್ತಿ ಪರಿವಾರದೊಡನೆ ಇಬ್ಬರು ಸ್ವಲ್ಪ ಕಾಲ ಇದ್ದೆವು. ಇವರು ಇದ್ದದ್ದು ನಮ್ಮ ದೊಡ್ಡಪ್ಪ ಹುಟ್ಟಿದ ಮನೆಯಲ್ಲೇ. ಈ ಹೆಂಚಿನ ಮನೆ ಸುಮಾರು ದೊಡ್ಡದಾಗಿದ್ದು, ಎರಡು ಅಡಿ ದಪ್ಪನೆಯ ಮಣ್ಣಿನ ಗೋಡೆಗಳಿಂದ ಬಲಿಷ್ಟವಾಗಿ ಕಟ್ಟಲ್ಪಟ್ಟಿತ್ತು. ಎರಡುನೂರು ವರ್ಷಗಳ ಮನೆಯಾದರೂ ಇನ್ನೂ ಚೆನ್ನಾಗಿ ಕಾಪಾಡಿಕೊಂಡು ಚೊಕ್ಕಟವಾಗಿರಿಸಿಕೊಂಡಿದ್ದರು. ನನ್ನ ದೊಡ್ಡಪ್ಪನವರು ಜನಿಸಿದ ಮುಂಭಾಗದ ಕೊಠಡಿಯನ್ನು ನಮಗೆ ತೋರಿಸಿದರು. ಹಾಗೆಯೇ ಹಿರಿಯ ಮಗಳು ಕಾವೇರಮ್ಮನೂ ಇದೇ ಕೋಣೆಯಲ್ಲಿ ಹುಟ್ಟಿದ್ದು ಎಂದು ತಿಳಿಸಿದರು. ಎರಡನೆಯ ಮಗಳು ನಂಜಮ್ಮ, ನನ್ನ ತಂದೆ ಶಿವರಾಮಯ್ಯ ಮತ್ತು ಅವರ ತಮ್ಮ ಕೃಷ್ಣಸ್ವಾಮಿ, ತಂದೆ ಮೈಲಾರಯ್ಯನವರ ಶ್ರೀರಂಗಪಟ್ಟಣದಲ್ಲಿದ್ದ ಮನೆಯಲ್ಲಿ ಜನಿಸಿದ್ದರು.

ಗಂಡು ಮಗುವಿನ ಜನನ ಎಲ್ಲರಿಗೂ ಸಂತಸ ತಂದಿತ್ತು. ತಂದೆಯು ನಂಜುಂಡೇಶ್ವರನ ಒಕ್ಕಲಾಗಿದ್ದರಿಂದ ಮಗುವಿಗೆ ಶ್ರೀಕಂಠನೆಂದು ನಾಮಕರಣ ಮಾಡಿದರು. ತಾಯಿ ಭಾಗೀರಥಮ್ಮ ಮತ್ತು ಮಗುವು ವರ್ಷದ ತನಕ ಸಂಪಿಗೆಯಲ್ಲೇ ಉಳಿದರು. ಅಜ್ಜಿ ಹಾಗೂ ವಿಧವೆ ದೊಡ್ಡಮ್ಮ ಅಚ್ಚಮ್ಮಣ್ಣಿ ಅವರುಗಳ ಅಕ್ಕರೆ ಆರೈಕೆಗಳಿಂದ ಶ್ರೀಕಂಠಯ್ಯ ಆರೋಗ್ಯವಂತನಾಗಿ ಬೆಳೆದ. ಮೊದಲನೆಯ ಹುಟ್ಟುಹಬ್ಬದ ವೇಳೆಗೆ ಸರಿಯಾಗಿ ತಂದೆ ಮೈಲಾರಯ್ಯನವರು ವಕೀಲ ವೃತ್ತಿಯಲ್ಲಿದ್ದ ಶ್ರೀರಂಗಪಟ್ಟಣಕ್ಕೆ ಮಗು ಮತ್ತು ತಾಯಿ ಇಬ್ಬರೂ ತೆರಳಿದರು. ಮಗುವಿನ ಅಕ್ಕರೆ ಹಾಗೂ ಮನೆಗೆಲಸಗಳಲ್ಲಿ ನೆರವಾಗಲೆಂದು ಅಕ್ಕ ಅಚ್ಚಮ್ಮಣ್ಣಿಯೂ ಇವರೊಂದಿಗೆ ಶ್ರೀರಂಗಪಟ್ಟಣ ಸೇರಿದರು.

ಹೊಸ ಉಡುಪುಗಳನ್ನು ತೊಡಿಸಿ ರಾಮಾಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಮಗು ಶ್ರೀಕಂಠನ ಮೊದಲನೆಯ ಹುಟ್ಟುಹಬ್ಬ ಬಹಳ ವಿಜೃಂಭಣೆಯಿಂದ ನೆರವೇರಿತು. ಆಪ್ತರೆನಿಸಿದ ಸುಮಾರು ಐವತ್ತು ಮಂದಿ ಬ್ರಾಹ್ಮಣ ಕುಟುಂಬದವರನ್ನು ವಿಶೇಷ ಔತಣಕ್ಕೆಂದು ಆಹ್ವಾನಿಸಿದ್ದರು. ಸಾಮಾನ್ಯವಾಗಿ ಬ್ರಾಹ್ಮಣೇತರ ಸ್ನೇಹಿತರನ್ನು ಇಂತಹ ಔತಣಗಳಿಗೆ ಆಹ್ವಾನಿಸುತ್ತಿರಲಿಲ್ಲ. ಅವರನ್ನೆಲ್ಲ ಆ ದಿನ ಸಂಜೆ ಪ್ರಾಸಂಗಿಕವಾಗಿ ಬರಮಾಡಿಕೊಂಡು ಹೂವು, ರಸಬಾಳೆ, ಚಕ್ಕುಲಿ, ಬೆಲ್ಲದ ಪುರಿ ಉಂಡೆಗಳು ಹಾಗೂ ತಾಂಬುಲಗಳನ್ನು ಕೊಟ್ಟು, ಗೌರವಾದರಗಳಿಂದ ಬೀಳ್ಕೊಡುತ್ತಿದ್ದರು.

ಎರಡು ಮೂರು ವರ್ಷದ ಶ್ರೀಕಂಠನು ಎಷ್ಟು ತುಂಟನೆನಿಸಿದ್ದನೆಂದರೆ ಅವನನ್ನು ಸುಧಾರಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಶ್ರೀಕಂಠನು ಮೂರು ವರ್ಷದವನಾಗಿದ್ದಾಗ ತಾಯಿ ಭಾಗೀರಥಮ್ಮ ಎರಡನೆಯ ಬಾರಿಗೆ ಗರ್ಭ ಧರಿಸಿದಳು. ತಾನು ಐದು ತಿಂಗಳ ಗರ್ಭಿಣಿಯಾದಾಗ ಮೈಲಾರಯ್ಯನವರು ತನ್ನನ್ನು, ಅಚ್ಚಮ್ಮಣ್ಣಿಯವರನ್ನು ಸಂಪಿಗೆಗೆ ಕರೆದೊಯ್ದರು. ಈ ಬಾರಿ

ಹೆಣ್ಣು ಮಗುವಾಯಿತು. ಮಗುವಿಗೆ ಕಾವೇರಮ್ಮನೆಂದು ನಾಮಕರಣ ಮಾಡಿದರು. ಪರಿವಾರದವರು ಗಂಡು ಮಗುವಿಗಾಗಿ ಹಂಬಲಿಸಿದ್ದರೂ ಹೆಣ್ಣು ಮಗುವಿನ ಜನನ ಎಲ್ಲರಿಗೂ ಸಂತಸ ತಂದಿತ್ತು. ಕಾವೇರಿ ಮತ್ತು ತಾಯಿಯನ್ನು ಅಚ್ಚಮ್ಮಣ್ಣಿ ಹಾಗೂ ಅವರ ತಂದೆ ತಾಯಂದಿರು ಬಹಳ ಆರೈಕೆ ಮಾಡಿದರು. ಕಾವೇರಿ ಹತ್ತು ಮಾಸದವಳಾಗಿದ್ದಾಗ ಎಲ್ಲರೂ ಮೈಲಾರಯ್ಯನವರ ಶ್ರೀರಂಗಪಟ್ಟಣದ ಮನೆಗೆ ಹಿಂದಿರುಗಿದರು. ಶ್ರೀಕಂಠನಿಗೆ ಐದು ವರ್ಷಗಳು ತುಂಬಿದಾಗ ತಂದೆ ಮೈಲಾರಯ್ಯನವರು ಮಗನಿಗೆ ಕನ್ನಡ ಹಾಗೂ ಸಂಸ್ಕೃತ ಭಾಷೆಗಳನ್ನು ಬೋಧಿಸುವ ಸಲುವಾಗಿ ಒಬ್ಬ ಬ್ರಾಹ್ಮಣ ಅಧ್ಯಾಪಕರನ್ನು ಗೊತ್ತುಮಾಡಿದರು. ಶ್ರೀಕಂಠನು ತುಂಬ ಬುದ್ಧಿವಂತನಾಗಿದ್ದು ಎರಡೂ ಭಾಷೆಗಳನ್ನು ಬಹು ಬೇಗನೆ ಅರಗಿಸಿಕೊಂಡನಾದರೂ ತನ್ನ ತುಂಟತನಕ್ಕೆ ಲಗಾಮು ಹಾಕಲಿಲ್ಲ. ಮಗನ ತುಂಟತನದ ಪ್ರಕರಣಗಳನ್ನು ತಂದೆ ಮೈಲಾರಯ್ಯನವರ ಹತ್ತಿರ, ಮೇಷ್ಟರು ವರದಿ ಒಪ್ಪಿಸಿದಾಗಲೆಲ್ಲ ಶ್ರೀಕಂಠನಿಗೆ ಬೆತ್ತದ ಸೇವೆಯಾಗುತ್ತಿತ್ತು. ಆದರೆ ಏಟು ತಿಂದ ಶ್ರೀಕಂಠನು ನಗುತ್ತ ಓಡಿಬಿಡುತ್ತಿದ್ದನು.

ಶ್ರೀಕಂಠನು ಆರು ವರ್ಷದವನಾಗಿದ್ದಾಗ ತಂದೆ ಅವನನ್ನು ಸರ್ಕಾರಿ ಪ್ರಾಥಮಿಕ ಶಾಲೆಗೆ ಸೇರಿಸಿದರು. ಅಲ್ಲಿ ತನ್ನ ಉಪಾಧ್ಯಾಯರುಗಳು ಹೇಳಿಕೊಟ್ಟದ್ದೆಲ್ಲವನ್ನೂ ಚೆನ್ನಾಗಿ ಕಲಿತರೂ ಸಮ ವಯಸ್ಸಿನ ಕೆಲ ತುಂಟ ಹುಡುಗರ ಗುಂಪಿಗೆ ನಾಯಕನೆನಿಸಿಕೊಂಡನು. ಸುಬ್ಬರಾವ್, ಅಪ್ಪಾಜಿರಾವ್, ವೆಂಕಟ ಸುಬ್ಬರಾವ್, ವರದಾಚಾರ್, ನರಸಿಂಹಯ್ಯ ಈ ಗುಂಪಿನಲ್ಲಿದ್ದ ಕೆಲ ಹುಡುಗರು. ಹುಡುಗರ ಗುಂಪು ಶಾಲೆ ಮುಗಿದ ಮೇಲೆ ತಮ್ಮ ಮನೆಗಳಿಗೆ ಹಿಂದಿರುಗುತ್ತಿರಲಿಲ್ಲ. ಬದಲಾಗಿ ಕಾವೇರಿ ತೀರದಲ್ಲಿದ್ದ ಟಿಪ್ಪುವಿನ ಹಾಳುಬಿದ್ದ ನೆಲಮಾಳಿಗೆಗಳಲ್ಲಿ ಇವರ ಶೋಧನೆಯ ಕಾರ್ಯ ಜರುಗುತ್ತಿತ್ತು! ಶ್ರೀರಂಗಪಟ್ಟಣವನ್ನು ಸುತ್ತುವರಿದಿದ್ದ ಹಣ್ಣಿನ ತೋಟಗಳಿಗೆ ನುಗ್ಗಿ ಹುಳಿಮಾವು, ಸೀಬೆಹಣ್ಣು, ಅಂಜೂರಗಳನ್ನು ಕದಿಯುತ್ತಿದ್ದರು. ತೋಟ ಕಾಯುವವರು ಈ ಪುಟ್ಟ ಕಳ್ಳರನ್ನು ಹಿಡಿಯಲಾಗುತ್ತಲೇ ಇರಲಿಲ್ಲ. ಶ್ರೀಕಂಠನು ಗುಂಪಿನ ನಾಯಕನೆನಿಸಿದ್ದರೂ ಇವರೆಲ್ಲರಿಗಿಂತ ವಯಸ್ಸು, ಗಾತ್ರಗಳಲ್ಲಿ ದೊಡ್ಡವನಂತಿದ್ದ 'ಪುಂಡ ಮಾಮ' ಇವರೆಲ್ಲರಿಗೂ ಅಚ್ಚುಮೆಚ್ಚು. ಒಮ್ಮೆ ರಜಾದಿನದಂದು ಶ್ರೀಕಂಠ ಮತ್ತು ಅವನ ಗೆಳೆಯರು ತಮ್ಮ ಚೇಷ್ಟೆಗೆ 'ಪುಂಡ ಮಾಮ'ನನ್ನು ಬಲಿಪಶುವನ್ನಾಗಿಸಿದರು! ಪ್ರಸಿದ್ಧ ರಂಗನಾಥಸ್ವಾಮಿ ದೇವಾಲಯದ ಎದುರಿಗಿದ್ದ ವಿಶಾಲ ಹೊರಾಂಗಣದಲ್ಲಿ ಒಂದು ಹಳ್ಳ ತೋಡಿಟ್ಟರು. 'ಪುಂಡ ಮಾಮ'ನನ್ನು ಅದರಲ್ಲಿ ಕೂರಲು ಹೇಳಿಕೊಟ್ಟರು. ಹಳ್ಳಕ್ಕಿಳಿದ ಅವನನ್ನು ಕತ್ತಿನವರೆಗೆ ಬಿಡಿ ಮಣ್ಣಿನಿಂದ ತುಂಬಿಸಿ ಬರಿಯ ತಲೆ ಕಾಣುವಂತೆ ಮಾಡಿದರು. ಇಷ್ಟಕ್ಕೆ ನಿಲ್ಲಿಸದೆ 'ಪುಂಡ ಮಾಮ'ನೇ ತಮ್ಮ ದೇವರೆಂದು. ಅವನ ಪೂಜೆಗೆಂದು ಹೂವು ಹಣ್ಣು ತರಲು ಓಡಿದರು. ಇತ್ತ ಬೀದಿಯಲ್ಲಿ ಹೋಗುತ್ತಿದ್ದ ಕೆಲವರು 'ಪುಂಡ ಮಾಮ'ನನ್ನು ಕಂಡರು. ಹುಡುಗನು ಉಸಿರಾಡಲು ಹೆಣಗುತ್ತಿದ್ದು ದನ್ನು ಕಂಡು ಅವನನ್ನು ಮೇಲೆತ್ತಿ ವೈದ್ಯರಿಗೆ ಬರಹೇಳಿದರು. ಹಿಗ್ಗುತ್ತ ಹಿಂದಿರುಗಿದ ಗೆಳೆಯರು ಪುಂಡಮಾಮನನ್ನು ಕಂಡು ಹೆದರಿ ಅಳಲಾರಂಭಿಸಿದರು. ವೈದ್ಯರು 'ಪುಂಡ ಮಾಮ'ನನ್ನು ಗುಣಪಡಿಸಿದರು. ಸ್ನೇಹಿತನು ಸರಿಹೋದ ನಂತರ ಗೆಳೆಯ ರೆಲ್ಲರೂ ಪೂಜೆಗೆಂದು ತಂದಿದ್ದ ಹಣ್ಣನ್ನು ತಿಂದು ಸಂತಸಪಟ್ಟರು.

ಹುಡುಗರೆಲ್ಲರೂ ಪ್ರಾಥಮಿಕ ಶಿಕ್ಷಣ ಮುಗಿಸಿದೊಡನೆಯೇ ತಮ್ಮ ಪ್ರೌಢ ಶಿಕ್ಷಣಕ್ಕೆಂದು ಮೈಸೂರಿಗೆ ರವಾನೆಗೊಂಡರು. ಶ್ರೀರಂಗಪಟ್ಟಣದಿಂದ ಮೈಸೂರಿಗೆ ರೈಲಿನಲ್ಲಿ ಸುಮಾರು ಒಂದು ಘಂಟೆ ಕಾಲದ ಪ್ರಯಾಣ. ಮುಂದಿನ ಮೂರು ಸಂವತ್ಸರಗಳಲ್ಲಿ ಗುಂಪಿನ ಎಲ್ಲ ಹುಡುಗರೂ ತಮ್ಮ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಸಫಲವಾಗಿ ಮುಗಿಸಿಕೊಂಡರು. ಅದರ ಮುಂದಿನ ಒಂದು ವರ್ಷದಲ್ಲಿ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಯನ್ನು ಮುಗಿಸಿಕೊಂಡರು. ಅಷ್ಟು ಹೊತ್ತಿಗಾಗಲೇ ತಂದೆ ತಾಯಿಗಳು ದೇವಮ್ಮನೆಂಬ ಹನ್ನೆರಡು ವಯಸ್ಸಿನ ಹೆಣ್ಣು ಮಗಳೊಂದಿಗೆ ಶ್ರೀಕಂಠಯ್ಯನ ಲಗ್ನ ನಿಶ್ಚಯಗೊಳಿಸಿದ್ದರು. ದೇವಮ್ಮ ಬೆಳ್ಳೂರು ರಾಮಸ್ವಾಮಯ್ಯನವರ ಹಿರಿಯ ಮಗಳು. ರಾಮಸ್ವಾಮಯ್ಯನವರು ಮೈಲಾರಯ್ಯನವರ ಸ್ನೇಹಿತರು. ತಾವು ಸರ್ಕಾರಿ ಅಧಿಕಾರಿಯಾಗಿ ಸೇವೆಯಲ್ಲಿದ್ದರು. ಇವರು ಕೂಡ ಕನ್ನಡ ಸ್ಮಾರ್ತ ಬ್ರಾಹ್ಮಣ ಜನಾಂಗದ ಒಬ್ಬರು ಕಮ್ಮೆ ಪಂಗಡ ದವರಾಗಿದ್ದರು. ದೇವಮ್ಮ ಪ್ರಾಥಮಿಕ ಶಿಕ್ಷಣ ಪಡೆದಿದ್ದಳು. ಕನ್ನಡ ಭಾಷೆಯಲ್ಲಿ ಉನ್ನತ ಜ್ಞಾನ ಪಡೆದಿದ್ದು, ಇಂಗ್ಲಿಷ್ ಭಾಷೆಯ ಪ್ರಭಾವಕ್ಕು ಒಳಪಟ್ಟಿದ್ದಳು. ಇದರೊಂದಿಗೆ ಸಂಗೀತ ಸರಸ್ವತಿಯನ್ನು ಒಲಿಸಿಕೊಂಡಿದ್ದಳು. ಅಂದಿನ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ ಹನ್ನೆರಡು ಇಲ್ಲವೆ ಇನ್ನೂ ಕಡಿಮೆ ವಯಸ್ಸಿಗೆ ಮದುವೆ ಮಾಡಿಬಿಡುತ್ತಿದ್ದರಿಂದ ಇದಕ್ಕಿಂತ ಹೆಚ್ಚು ಶಿಕ್ಷಣ ಪಡೆದಿದ್ದ ಹೆಣ್ಣು ಮಗಳು ಸಿಗುವುದು ಸಾಧ್ಯವಿರಲಿಲ್ಲ. ಮದುವೆಯಾಯ್ತು. ದೇವಮ್ಮನಿಗೆ ಹದಿನಾಲ್ಕು ತುಂಬಿ ಪ್ರೌಢಾವಸ್ಥೆಗೆ ಬಂದ ಮೇಲೆ ತನ್ನ ಮಾವನ ಮನೆಗೆ ಬಂದಳು. ಶ್ರೀಕಂಠಯ್ಯನಿಗೆ ಹೆಂಡತಿಯು ಪ್ರೀತಿ ಪರವಾಗಿ, ಒಳ್ಳೆಯ ಸ್ವಭಾವದವಳಾಗಿ ಕಂಡಳು. ಸ್ನಾತಕ ಪದವಿಗಾಗಿ ಶ್ರೀಕಂಠಯ್ಯನವರು ಬೆಂಗಳೂರಿನ ಸೆಂಟ್ರಲ್

ಕಾಲೇಜನ್ನು ಸೇರಿಕೊಂಡರು. ವಾರಾಂತ್ಯಗಳಲ್ಲಿ ಹಾಗೂ ಇತರ ರಜಾದಿನಗಳಲ್ಲಿ ತಮ್ಮ ಪರಿವಾರವನ್ನು ಕಾಣಲು ಹಿಂದಿರುಗುತ್ತಿದ್ದರು. ಆ ದಿನಗಳಲ್ಲಿ ಬಸ್ಸುಗಳು ಇರಲಿಲ್ಲವಾದ್ದರಿಂದ ರೈಲಿನಲ್ಲಿಯೇ ಮೂರು ಗಂಟೆಗಳ ಕಾಲ ಪ್ರಯಾಣ ನಡೆಸಬೇಕಿತ್ತು.

ಮದ್ರಾಸು ವಿಶ್ವವಿದ್ಯಾನಿಲಯದ ವತಿಯಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಪಡೆದ ನಂತರ ನ್ಯಾಯಶಾಸ್ತ್ರದಲ್ಲಿ ಪದವಿ ಪಡೆದು ತಂದೆಯಂತೇ ವಕೀಲನಾಗಬೇಕೆಂಬ ಹೆಬ್ಬಯಕೆ ಶ್ರೀಕಂಠಯ್ಯನವರನ್ನು ಕಾಡತೊಡಗಿತು. ತರಗತಿಗಳು ನಡೆಯುತ್ತಿದ್ದ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಹತ್ತಿರವೇ ತನ್ನ ಮೈಸೂರಿನ ಗೆಳೆಯರೊಡಗೂಡಿ ಬಾಡಿಗೆ ಮನೆಯೊಂದನ್ನು ಗೊತ್ತುಪಡಿಸಿಕೊಂಡು ಅಲ್ಲಿ ವಾಸಿಸಲಾರಂಭಿಸಿದರು. ಸಂಜೆಗಳಲ್ಲಿ ಗೆಳೆಯರೊಡಗೂಡಿ ಮರೀನ ಕಡಲು ತೀರಕ್ಕೆ ನಡೆದು ಹೋಗುತ್ತಿದ್ದರು. ಅಲ್ಲಿ ಮರಳಿನ ಮೇಲೆ ಕುಳಿತು, ಅನೇಕ ವಿಷಯಗಳ ಬಗೆಗೆ ಚರ್ಚೆ ಮಾಡುವುದು ಸ್ನೇಹಿತರ ಅಭ್ಯಾಸವಾಯಿತು. ಇಂಗ್ಲಿಷ್ ಸಾಹಿತ್ಯ, ಇಂಗ್ಲಿಷ್ ಕವಿತೆಗಳು, ಇಂಗ್ಲಿಷ್ ಕವಿಗಳು, ಕರ್ತೃಗಳು ಚರ್ಚಾ ವಿಷಯಗಳಾಗಿರುತ್ತಿದ್ದವು. ಈ ಗೆಳೆಯರಿಗೆ ಇಂಗ್ಲಿಷ್ ಸಾಹಿತ್ಯ, ಇಂಗ್ಲಿಷರ ಯೋಚನೆಗಳು ಬಹಳ ಆಕರ್ಷಕವಾಗಿ ಕಂಡಿತ್ತು. ತಮ್ಮ ಹಿರಿಯರೆಲ್ಲಯರೂ ಸೇರಿ ಹೈಸ್ಕೂಲಿನ ಹಂತದಲ್ಲಷ್ಟೆ ಈ ಪರಭಾಷೆಯನ್ನು ಕಲಿಯಲಾರಂಭಿಸಿದ್ದರೂ ಇಂಗ್ಲಿಷ್ ಭಾಷೆಗೆ, ಜನರಿಗೆ, ಅವರ ರೀತಿಗಳಿಗೆ ಪ್ರಭಾವಿತರಾಗತೊಡಗಿದ ಪ್ರಥಮ ಪೀಳಿಗೆ ಇವರದಾಗಿತ್ತು.

ಶ್ರೀಕಂಠಯ್ಯನವರು ಇಂಗ್ಲಿಷ್ ಸಾಹಿತ್ಯ ಹಾಗು ನ್ಯಾಯಶಾಸ್ತ್ರದಲ್ಲಿ ತಮ್ಮ ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಂಡು ಬಂದು ಶ್ರೀರಂಗಪಟ್ಟಣದಲ್ಲಿಳಿದಾಗ ತಂದೆ ಹಾಸಿಗೆ ಹಿಡಿದಿದ್ದರು. ಮುಂದಿನ ಕೆಲವು ತಿಂಗಳುಗಳಲ್ಲೆ ಅವರು ದೈವಾಧೀನರಾದರು. ಅಷ್ಟು ಹೊತ್ತಿಗೆ ಶ್ರೀಕಂಠಯ್ಯನವರ ಇಬ್ಬರು ಸೋದರಿಯರಾದ ಕಾವೇರಮ್ಮ ಮತ್ತು ನಂಜಮ್ಮ ಮದುವೆಯಾಗಿ ತಮ್ಮ ಪತಿಯ ಪರಿವಾರದೊಂದಿಗೆ ವಾಸವಾಗಿದ್ದರು. ಆದರೆ ಇನ್ನು ಶಾಲೆಯಲ್ಲಿ ಓದುತ್ತಿದ್ದ ಇಬ್ಬರು ತಮ್ಮಂದಿರಾದ ಶಿವರಾಮು (ನನ್ನ ತಂದೆ) ಹಾಗೂ ಕಿಟ್ಟು (ಕೃಷ್ಣಸ್ವಾಮಿ) ತನ್ನೊಂದಿಗಿದ್ದರು. ಇವರಿಬ್ಬರ ಜವಾಬ್ದಾರಿ ಈಗ ಪೂರ್ತಿಯಾಗಿ ಶ್ರೀಕಂಠಯ್ಯನವರದಾಗಿತ್ತು. ಇದರ ಸಲುವಾಗಿಯೇ ಒಂದು ಸೂಕ್ತವೆನಿಸುವ ಕೆಲಸವನ್ನು ಹುಡುಕಲಾರಂಭಿಸಿದರು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೆಲಸಕ್ಕೆಂದು ಅರ್ಜಿ ಸಲ್ಲಿಸಿದರು. ಇಂಗ್ಲಿಷ್‌ನಲ್ಲಿ ಉತ್ತಮ ಸ್ನಾತಕೋತ್ತರ ಪದವಿ ಪಡೆದಿದ್ದ ಶ್ರೀಕಂಠಯ್ಯನವರು ಮಹಾರಾಜ ಕಾಲೇಜು, ಮೈಸೂರಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿದರು. ತಂದೆಯ ಅಪೇಕ್ಷೆಯಂತೆ ವಕೀಲನಾಗುವುದಕ್ಕಿಂತ ಪರಿಸ್ಥಿತಿಗೆ ಹೊಂದುವ ಶಿಕ್ಷಣ ವೃತ್ತಿಯು ತಮಗೆ ತೃಪ್ತಿ ತಂದಿತ್ತು. ಪರಿವಾರ ಸಮೇತರಾಗಿ ಮೈಸೂರಿಗೆ ಬಂದಿಳಿದದ್ದೂ ಆಯಿತು. ಶ್ರೀಕಂಠಯ್ಯನವರಿಗೆ ಪರಿವಾರದ ಎಲ್ಲ ವೆಚ್ಚಗಳನ್ನು ಪೂರೈಸುವಷ್ಟು ಹಣ ಮಾತ್ರ ಸಂಬಳದ ರೂಪದಲ್ಲಿ ದೊರಕುತ್ತಿತ್ತು. ಮಹಾರಾಜ ಕಾಲೇಜಿನಿಂದ ಕಾಲ್ನಡಿಗೆಯ ದೂರದಲ್ಲಿದ್ದ ಒಳ್ಳೆಯ ಬಡಾವಣೆಯಲ್ಲಿ ಒಂದು ಸಣ್ಣ ಬಾಡಿಗೆ ಮನೆಯಲ್ಲಿ ವಾಸಿಸತೊಡಗಿದರು. ಸ್ನಾತಕ ಪದವಿ ಕ್ರಮದಲ್ಲಿ ಪ್ರಾಥಮಿಕ ಪ್ರೌಢ ಎರಡು ತರಗತಿಗಳಿಗೆ ಇಂಗ್ಲಿಷ್ ಗದ್ಯ, ನಾಟಕ ಮತ್ತು ಕಾವ್ಯಮಾಲೆಗಳನ್ನು ಹೇಳಿಕೊಡಬೇಕೆಂದು ಆಡಳಿತದವರು ಕೇಳಿಕೊಂಡರು. ಶ್ರೀಕಂಠಯ್ಯನವರಿಗೆ ಕೆಲಸದಿಂದ ಬಿಡುವು ಸಿಗುತ್ತಿರಲಿಲ್ಲ. ಮನೆಯ ನಿರ್ವಹಣೆಯ ಜವಾಬ್ದಾರಿ ಮನೆಯ ಹೆಂಗಸರು ಪೂರ್ತಿಯಾಗಿ ವಹಿಸಿಕೊಂಡುಬಿಟ್ಟಿದ್ದರು.

ಬೇಸಿಗೆ ರಜೆ ಬಂತೆಂದರೆ ಎಲ್ಲರೂ ಹೀರೋಡಿನ ತೋಟದ ಮನೆಗೆ ಹೊರಟುಬಿಡುತ್ತಿದ್ದರು. ಹೀರೋಡು ಮೈಸೂರಿನಿಂದ ಸುಮಾರು ಮೂವತ್ತು ಮೈಲಿ ದೂರದಲ್ಲಿದ್ದ ಊರು. ಇಲ್ಲಿ ಮೈಲಾರಯ್ಯನವರು ಸೊಗಸಾದ ಮನೆಯೊಂದನ್ನು ಕಟ್ಟಿಸಿದ್ದರು. ಮನೆಯ ಸುತ್ತಲೂ ಮಾವಿನ ಮರಗಳಿದ್ದ ಈ ತೋಟದ ಮನೆ ಇವರೆಲ್ಲರಿಗೂ ಬೇಸಿಗೆಯ ಅರಮನೆ. ಶ್ರೀಕಂಠಯ್ಯನವರು ತೋಟದ ಮನೆಯಲ್ಲೂ ತಮ್ಮ ಬಹಳಷ್ಟು ಸಮಯವನ್ನು ಓದುವುದರಲ್ಲಿ ಹಾಗೂ ತರಗತಿಗೆ ಅಣಿಮಾಡಿಕೊಳ್ಳುವುದರಲ್ಲೆ ಕಳೆಯುತ್ತಿದ್ದರು. ಯಾವುದೇ ಗೊಂದಲವುಂಟಾಗಬಾರದೆಂದು ತೋಟದ ಹತ್ತಿರವಿದ್ದ ಕಗ್ಗಲ್ಲಿನ ಗುಡ್ಡದ ಮೇಲೆ ಕೂತು ಓದಿಕೊಳ್ಳುತ್ತಿದ್ದರು.

ಮುಂದಿನ ಐದು ವರ್ಷಗಳಲ್ಲಿ ದೇವಮ್ಮನು ಶಾರದೆ, ತಮ್ಮಯ್ಯ ಹಾಗೂ ತಂಗ ಎಂಬ ಮೂರು ಮಕ್ಕಳಿಗೆ ಜನ್ಮವಿತ್ತಳು. ಪರಿವಾರದವರಿಗೆಲ್ಲ ಇದು ಸಂಭ್ರಮದ ಕಾಲವಾಗಿತ್ತು. ಭಾಗಿರಥಮ್ಮ ಮತ್ತು ಅಚ್ಚಮ್ಮಣ್ಣಿಯವರಿಗೆ ಮಕ್ಕಳನ್ನು ಪೋಷಿಸುತ್ತಿದ್ದ ದೇವಮ್ಮನಿಗೆ ಸಹಾಯ ಮಾಡುವುದರಲ್ಲೆ ಸಂತೋಷ, ತೃಪ್ತಿ. ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದ ನನ್ನ ತಂದೆ ಹಾಗೂ ಚಿಕ್ಕಪ್ಪ ಈ ಮಕ್ಕಳೊಂದಿಗೆ ಆಟವಾಡಿಕೊಂಡಿರುತ್ತಿದ್ದರು. ಅಣ್ಣ ಶ್ರೀಕಂಠಯ್ಯ ಅಂಗಡಿಯಿಂದ ದಿನಸಿ ತರುವ ಕೆಲಸವನ್ನು ಇಬ್ಬರು ತಮ್ಮಂದಿರಿಗೆ ಒಪ್ಪಿಸಿದ್ದರು. ಆಗಿನ

ದಿನಗಳಲ್ಲಿ ಹೆಂಗಸರು ಈ ಕೆಲಸಗಳಿಗೆಂದು ಹೊರಗೆ ಹೋಗು ತ್ತಿರಲಿಲ್ಲ. ಹೀಗೆ ದಿನಸಿ ತರಲು ಹೋದಾಗ ತಿಂಡಿ ತಿನಿಸಿಗೆಂದು ಸ್ವಲ್ಪ ಹಣ ಖರ್ಚು ಮಾಡಬಹುದೆಂದು ಅಣ್ಣನು ಅನುಮತಿ ಕೊಟ್ಟಿದ್ದರೂ ಲೆಕ್ಕವನ್ನು ಚಾಚು ತಪ್ಪದೆ ಹಾಗೆ ಒಪ್ಪಿಸಬೇಕಿತ್ತು.

ಸಂತೋಷದಿಂದಿದ್ದ ಈ ಪರಿವಾರದಲ್ಲಿ ಆಕಸ್ಮಿಕವಾಗಿ ಒಂದು ದುರಂತ ನಡೆದು ಹೋಯಿತು. ಹಿರಿಯ ಮಗಳು ಶಾರದೆಗೆ ಮೂರು ವರ್ಷ ತುಂಬಿತ್ತು. ತಮ್ಮಯ್ಯ ಸುಮಾರು ಒಂದೂವರೆ ವರ್ಷದವನು. ತಂಗ ಅವನಿಗಿಂತ ಚಿಕ್ಕವಳು. ಬೇಸಿಗೆ ರಜೆಗೆಂದು ಹೀರೋಡಿನ ತೋಟದ ಮನೆಗೆ ಎಲ್ಲರೂ ಹೋಗಿದ್ದರು. ಅಲ್ಲಿ ಮಕ್ಕಳಿಗೆ ಕೆಂಗಣ್ಣು ಬೇನೆ ತಗುಲಿತು. ಶ್ರೀಕಂಠಯ್ಯನವರು ಒಳ್ಳೆಯ ವೈದ್ಯರ ಅಭಿಪ್ರಾಯ ಪಡೆದು ಬರು ತ್ತೇನೆಂದು ಕೂಡಲೇ ಮೈಸೂರಿಗೆ ಹೊರಟರು. ಮೈಲುತುತ್ತದ ಪುಡಿಯನ್ನು ಒಂದು ಚಿಟಕಿಯಷ್ಟು ಕಣ್ಣಿಗೆ ಹಾಕಿದರೆ ಬೇನೆ ನಿವಾರಣೆಯಾಗುವುದೆಂದು ವೈದ್ಯರು ಸೂಚನೆ ಇತ್ತು ಕಳುಹಿಸಿ ದರು. ಪುಡಿಯನ್ನು ಹೊತ್ತು ಶ್ರೀಕಂಠಯ್ಯನವರು ತೋಟದ ಮನೆಗೆ ಹಿಂದಿರುಗಿದರು. ತಂದಿದ್ದ ಮದ್ದನ್ನು ದೇವಮ್ಮ ಮತ್ತು ತನ್ನ ದೊಡ್ಡಮ್ಮನ ಕೈಗಿತ್ತು ಹೇಗೆ ಉಪಯೋಗಿಸಬೇಕೆಂದು ಹೇಳಿ ಅತ್ತ ಹೊರಟು ಹೋದರು. ಇಬ್ಬರೂ ಮಕ್ಕಳಿಗೆ ಚಿಕಿತ್ಸೆ ನೀಡಿದರು. ಶಾರದ ಹಾಗೂ ತಂಗ ಚಿಕಿತ್ಸೆಗೆ ಸಹಕರಿಸಿದರು. ಆದರೆ ತಮ್ಮಯ್ಯನು ಮಾತ್ರ ಪುಡಿ ಹಾಕುವಾಗ ಸುಮ್ಮನೆ ಕೂರದೆ ಕೈಕಾಲುಗಳನ್ನೆತ್ತಿ ಹಾಕುತ್ತ ರೋಧಿಸಲಾರಂಭಿಸಿದನು. ಗಲಾಟೆ ಯಲ್ಲಿ ದೇವಮ್ಮನ ಕೈಯಿಂದ ಸೂಚಿಸಿದ್ದಕ್ಕಿಂತ ಹೆಚ್ಚು ಔಷಧಿ ಕಣ್ಣುಗಳನ್ನು ಹೊಕ್ಕಿತು. ಹೆಣ್ಣು ಮಕ್ಕಳಿಗೆ ಸ್ವಲ್ಪ ಗುಣವಾದರೂ ಒಂದು ದಿನದಷ್ಟು ಹೊತ್ತಿನಲ್ಲಿಯೇ ತಮ್ಮಯ್ಯನ ಕಣ್ಣುಗಳು ಕೆಂಪೇರಿ ತಡೆಯಲಾರದ ಬೇನೆ ಉಂಟಾಯಿತು. ಇದನ್ನು ಕಂಡು ಗಾಬರಿಗೊಂಡ ಶ್ರೀಕಂಠಯ್ಯನವರು ತಮ್ಮಯ್ಯನನ್ನು ಅಂದೆ ಮದರಾಸಿಗೆ ಕರೆದುಕೊಂಡು ಹೊರಟರು. ಮದರಾಸಿನ ಪ್ರಸಿದ್ಧ ನೇತ್ರತಜ್ಞ, ಬ್ರಿಟಿಷ್ ವೈದ್ಯರೊಬ್ಬರು ಶ್ರೀಕಂಠಯ್ಯನವರಿಗೆ ಪರಿಚಯದವರಾಗಿದ್ದರು. ತಮ್ಮಯ್ಯನನ್ನು ಪರೀಕ್ಷೆ ಮಾಡಿದ ಅವರು 'ಹುಡುಗನ ದೃಷ್ಟಿ ಮರಳಲು ಯಾವ ಸಾಧ್ಯತೆಗಳೂ ಇಲ್ಲ' ಎಂದುಬಿಟ್ಟರು, ಶ್ರೀಕಂಠಯ್ಯನವರಿಗೆ ಈ ಆಘಾತ ತಡೆಯಲಾಗಲಿಲ್ಲ. ಮಗನ ದುರದೃಷ್ಟವನ್ನು ನೆನೆದು ಒಮ್ಮೆಲೆ ಅತ್ತುಬಿಟ್ಟರು. ಅಂದು ಅವರನ್ನು ದೇವಮ್ಮನನ್ನು ಯಾರಿಂದಲೂ ಸಂತೈಸಲಾಗಲಿಲ್ಲ ಎಂದು ನನ್ನ ತಂದೆ ನನ್ನ ಬಳಿ ಹೇಳಿದ್ದುಂಟು.

ಇಷ್ಟಾದರೂ ದಿನಗಳು ಎಂದಿನಂತೆ ಸಾಗಲಾರಂಭಿಸಿದ್ದವು. ಮುಂದಿನ ವರ್ಷದಲ್ಲಿ ದೇವಮ್ಮ ಮತ್ತೊಂದು ಮಗುವಿಗೆ ಜನ್ಮವಿತ್ತಳು. ದುರ್ದೈವ ಪರಿವಾರವನ್ನಾವರಿಸಿತ್ತೆನಿಸುತ್ತದೆ. ತಾಯಿ ಮಗುವಿಗಿಬ್ಬರಿಗೂ ಜ್ವರ ಅಂಟುಕೊಂಡಿತು. ಹದಿನೈದು ದಿನಗಳಷ್ಟೆ ಆಗಿದ್ದವು. ನಿರಂತರ ಜ್ವರದಿಂದ ಎರಡು ಜೀವಗಳು ಅಸುನೀಗಿದವು. ಮೈಸೂರಿನ ಕಾಲೇಜಿನಲ್ಲಿ ಓದುತ್ತಿದ್ದ ನನ್ನ ತಂದೆ ತಕ್ಷಣ ಹೀರೋಡಿಗೆ ಹೊರಟರು. ಅಲ್ಲಿನ ಸಂದರ್ಭದ ಅರಿವಾಗುತ್ತಲೆ ದುಃಖ ತಡಿಯಲಾಗದೆ ಕಣ್ಣೀರಿಟ್ಟರು. ಆದರೆ ಶ್ರೀಕಂಠಯ್ಯನವರು ಭಾವಹೀನರಾಗಿ ಶಾಂತರಾಗಿರುವುದನ್ನು ಕಂಡು ತಮ್ಮನಿಗೆ ಅವರ ಈ ವರ್ತನೆ ಅರ್ಥೈಸಲೇ ಆಗಲಿಲ್ಲ. ಶ್ರೀಕಂಠಯ್ಯನವರಿಗೆ ಇದು ನಿರ್ಧಾರಕ ಸಮಯವಾಗಿತ್ತು. ತನ್ನ ಪರಿವಾರದ ಕುರಿತಾಗಿ ಗಂಭೀರವಾಗಿ ಆಲೋಚಿಸಬೇಕಾದ ಸಮಯವಾಗಿತ್ತು. ಮೂರು ಎಳೆಯ ಮಕ್ಕಳ ಜವಾಬ್ದಾರಿ ಯೊಂದಿಗೆ ತಮ್ಮ ವೃತ್ತಿಜೀವನದ ಭವಿಷ್ಯದ ಬಗ್ಗೆಯೂ ಅವರು ಎಣಿಕೆ ಮಾಡಬೇಕಿತ್ತು. ತಾಯಿ ಮತ್ತು ದೊಡ್ಡಮ್ಮ ಕೈಲಾದ ಮಟ್ಟಿಗೆ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ಅಚ್ಚಮ್ಮಣ್ಣಿಗೆ ವಯಸ್ಸಾಗಿತ್ತು. ಅಲ್ಲದೇ ಆರೋಗ್ಯ ಹತೋಟಿಯಲ್ಲಿರಲಿಲ್ಲ. ಈ ಸ್ಥಿತಿಯಲ್ಲಿ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ಯಾರಾದರೊಬ್ಬರು ಬೇಕೆಂದು, ಮಗನನ್ನು ಮರುವಿವಾಹ ವಾಗುವಂತೆ ಒತ್ತಾಯಿಸಲಾರಂಭಿಸಿದರು. ಅಲ್ಲದೆ ಸಂಪ್ರದಾಯ ಬದ್ಧ ಬ್ರಾಹ್ಮಣ ಸಮಾಜದಲ್ಲಿ ವಿಧುರನಾದವನಿಗೆ ಯಾವುದೇ ಗೌರವ ಸ್ಥಾನವಿಲ್ಲ ಎಂಬುದನ್ನು ಅವರು ನಂಬಿದ್ದರು. ಶ್ರೀಕಂಠಯ್ಯನವರಿಗೆ ಯಾರ ಬೆಂಬಲವೂ ನಿರೀಕ್ಷಿಸದೆ ತಮ್ಮ ಮುಂದಿದ್ದ ಸಮಸ್ಯೆಗಳನ್ನು ಸ್ವತಃ ಬಗೆಹರಿಸಿಕೊಳ್ಳುವ ಸ್ಥಿತಿ ಬಂದಿತ್ತು.

ದೇವಮ್ಮನ ಅಂತ್ಯಕ್ರಿಯೆ ಮುಗಿದಿತ್ತು. ಶ್ರೀಕಂಠಯ್ಯನವರು ಹತ್ತು ದಿನಗಳ ರಜೆಯನ್ನು ಕೋರಿ ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸಿದರು. ರಜೆ ಅಂಗೀಕೃತವಾಯಿತು. ಬಂಗಾಳ ಮಹಾ ಸಮುದ್ರ ತೀರದ ಧನುಶ್ಕೋಡಿ ಎಂಬ ಸಣ್ಣ ಊರಿಗೆ ಬಂದಿಳಿ ದರು. ಅಲ್ಲಿನ ವಸತಿವೊಂದರಲ್ಲಿ ಕೊಠಡಿಯನ್ನು ಪಡೆದು ಕೊಂಡರು. ಪ್ರತಿದಿನ ಅಲ್ಲಿನ ಕಡಲತೀರಕ್ಕೆ ನಡೆದು ಹೋಗುತ್ತಿದ್ದರು. ಸೂರ್ಯಾಸ್ತದವರೆವಿಗೆ ಅಲ್ಲೇ ಕಾಲಕಳೆಯು ತ್ತಿದ್ದರು. ಮರಳ ತೀರದಲ್ಲಿ ದೂರದತನಕ ನಡೆದು ಹೋಗು ತ್ತಿದ್ದರು. ಆಯಾಸವೆನಿಸಿದಾಗ ಯಾವುದಾದರೂ ಮರದ ನೆಳಲಲ್ಲಿ ಕುಳಿತು ಯೋಚನೆಗಳಲ್ಲಿ ಮುಳುಗಿಬಿಡುತ್ತಿದ್ದರು. ದೇವಮ್ಮನು ಶ್ರೀಕಂಠಯ್ಯನವರ ಮನಸ್ಸಿಗೆ ಬಹಳ ಹತ್ತಿರದವಳಾಗಿದ್ದಳು. ತಮಗೆ ಮಡದಿಯಾಗಿ, ಮಕ್ಕಳಿಗೆ ತಾಯಿಯಾಗಿದ್ದ ಆಕೆಯ

ಸ್ಥಾನವನ್ನು ಬೇರಾವ ಹೆಣ್ಣು ಭರಿಸಲು ಸಾಧ್ಯವಿರಲಿಲ್ಲ. ತಾಯಿ ಹಳೆಯ ಸಂಪ್ರದಾಯದವಳು. ಅವರ ಮಾತಿಗೆ ಮಣಿದು ಮರು ವಿವಾಹವಾಗುವುದಂತೂ ಸಾಧ್ಯವಿರಲಿಲ್ಲ. ಅಡುಗೆ ಮಾಡಲು ಒಬ್ಬ ಹೆಂಗಸನ್ನು ಗೊತ್ತುಪಡಿಸಿದರೆ. ತಮ್ಮ ತಾಯಿಯವರಿಗೂ ಮನೆಗೆಲಸದಲ್ಲಿ ಸಹಾಯವಾಗುತ್ತದೆ. ಇದೇ ವಿಷಯವಾಗಿ ತಮ್ಮ ತಂಗಿ ಕಾವೇರಿಯ ಅಭಿಪ್ರಾಯವನ್ನು ಕೇಳಿ ತಿಳಿಯುವುದೆಂದು ನಿಶ್ಚಯಿಸಿದರು.

ಇದೆಲ್ಲದಕ್ಕಿಂತ ಮಿಗಿಲಾಗಿ ಒಂದು ತೃಪ್ತ ವೃತ್ತಿಜೀವನದ ಹಾದಿಯನ್ನು ನಿಶ್ಚಯಿಸಿಕೊಳ್ಳಬೇಕಾದ ಕೆಲಸ ಶ್ರೀಕಂಠಯ್ಯನವರ ಮುಂದಿತ್ತು. ಶ್ರೀಕಂಠಯ್ಯನವರು ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಆಂಗ್ಲರ ರೀತಿನೀತಿಗಳು, ಯೋಚನೆಗಳು ಹೇಗೆ ವಿನ್ಯಾಸಗೊಂಡಿವೆ ಎಂದು ಅರ್ಥೈಸಲೆತ್ನಿಸಿದರು. ಐರೋಪ್ಯ ಖಂಡದ ಲ್ಯಾಟಿನ್, ಗ್ರೀಕ್, ಫ್ರೆಂಚ್, ಜರ್ಮನ್ ಹಾಗೂ ಇಟಾಲಿಯನ್ ಭಾಷೆಗಳ ಉನ್ನತ ಸಾಹಿತ್ಯ ಕೃತಿಗಳ ಇಂಗ್ಲಿಷ್ ರೂಪಕಗಳನ್ನು ಓದಿ ಅರಿತು ಕೊಂಡಿದ್ದರು. ತಾಯ್ನುಡಿ ಕನ್ನಡವನ್ನು ಕಲಿತಿದ್ದು ಸಾವಿರ ವರ್ಷಗಳ ಹಿಂದಿನ ಕನ್ನಡ ಸಾಹಿತ್ಯ ಕೃತಿಗಳನ್ನು ಪಠಿಸಿದ್ದರು. ಆರ್ಯಭಾಷೆಯಾದ ಸಂಸ್ಕೃತದಲ್ಲಿಯೂ ಜ್ಞಾನ ಪಡೆದಿದ್ದು ಉಪನಿಷತ್ತು, ಬ್ರಹ್ಮಣಗಳು, ವೇದಗಳು ಹಾಗೂ ವ್ಯಾಕರಣಗಳನ್ನು, ನಾಟಕಕಾರ ಕಾಳಿದಾಸನ ಕೃತಿಗಳನ್ನು ಓದಿದ್ದರು. ಕನ್ನಡವು ಸಂಸ್ಕೃತ ಮೂಲ ಭಾಷೆಯಲ್ಲಿ ಅದು ದ್ರಾವಿಡ ಭಾಷೆಗಳ ಗುಂಪಿಗೆ ಸೇರಿದ್ದು. ಈ ಸಮೂಹದಲ್ಲಿ ಅತಿ ಪ್ರಾಚೀನವೆಂದರೆ ತಮಿಳು. ಅಂತಲೆ ಶ್ರೀಕಂಠಯ್ಯನವರು ತಮಿಳು ಭಾಷೆಯನ್ನು ಕುರಿತು ಅಧ್ಯಯನ ನಡೆಸಿದರು. ಕುರಲ್ ಮತ್ತು ಸಿಲಪ್ಪಡಿಕಾರನ್ ಎಂಬ ತಮಿಳು ಮಹಾಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದರು. ತಮಿಳು ಮತ್ತು ಹಳೆಗನ್ನಡಗಳ ಹೊಂದಾಣಿಕೆಯನ್ನು ಗಮನಿಸಿದರು. ಒಟ್ಟಿನಲ್ಲಿ ಹೇಳುವುದಾದರೆ ಬಹುಭಾಗವನ್ನು ಕನ್ನಡದ ಏಳ್ಗೆಗಾಗಿ ಮುಡಿಪಾಗಿಡುವುದೆಂದು ನಿರ್ಧರಿಸಿದರು. ಅನ್ಯ ಭಾಷೆಗಳಿಗಿಂತ ಕನ್ನಡವು ಕೀಳು ಎಂಬುದಾಗಿ ಜನರಿಗೆ ಅಂಟಿದ್ದ ಕೀಳರಿಮೆಯನ್ನು ತೊಲಗಿಸಿ ಅವರಲ್ಲಿ ಭಾಷಾಭಿಮಾನ ನೆಡಬೇಕೆಂಬುದನ್ನು ತಮ್ಮ ಧ್ಯೇಯವನ್ನಾಗಿಸಿಕೊಂಡರು. ಆದರೆ ಈ ಕೆಲಸದಲ್ಲಿ ಹೆಚ್ಚು ಅಡಕುಗಳಿದ್ದು, ಅವುಗಳಿಂದ ಹೊರಬರುವುದು ಕಷ್ಟದ ಕೆಲಸವೆಂಬ ಅರಿವು ಇತ್ತು. ಅಂತೆ ಬಹಳವಾಗಿ ಮೆಚ್ಚಿದ್ದ ಇಂಗ್ಲಿಷ್ ಭಾಷೆಯೆಡೆಗೂ ಅವರು ನಿರ್ಲಕ್ಷ್ಯ ತೋರುವಂತಿರಲಿಲ್ಲ.

ಶ್ರೀಕಂಠಯ್ಯನವರ ವೃತ್ತಿ ಜೀವನದಲ್ಲಿನ ಕೆಲವು ಸಂಗತಿಗಳನ್ನು ಸ್ಮರಿಸುವುದು ನನಗೆ ಹೆಮ್ಮೆಯ ವಿಷಯವಾಗಿದೆ. ಅವರು ಉತ್ತಮ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಕ್ಕಿಂತ ಹಳೆಗನ್ನಡ ಸಾಹಿತ್ಯದಲ್ಲಿ ಅಸಾಧಾರಣ ಪಾಂಡಿತ್ಯ ಪಡೆದಿದ್ದರೆನ್ನುವುದು ತಿಳಿದ ವಿಷಯ. ಅವರು ಶಿಸ್ತುಗಾರರಾಗಿದ್ದವರು. ಉಪನ್ಯಾಸದ ನಡುವೆ ವಿದ್ಯಾರ್ಥಿಗಳು ಸಮಯೋಚಿತವಲ್ಲದ ಸಂಶಯಗಳನ್ನು ಹೊತ್ತು ತಮಗೆ ಅಡಚಣೆ ಉಂಟು ಮಾಡುವುದು ಅವರಿಗೆ ಹಿಡಿಸುತ್ತಿರಲಿಲ್ಲ. ವಿಲಿಯಮ್ ಶೇಕ್ಸ್‌ಪಿಯರ್‌ನ ನಾಟಕಗಳನ್ನು ತರಗತಿಯಲ್ಲಿ ಹೇಳಿಕೊಡುವ ಸಂದರ್ಭದಲ್ಲಿ ನಾಟಕದಲ್ಲಿ ಬರುವ ಪಾತ್ರಗಳನ್ನು ನಟಿಸಿ ತೋರಿಸುತ್ತಿದ್ದರು. ಈ ವಿಷಯದ ಬಗ್ಗೆ ಅರಿವಿದ್ದ ತಮ್ಮ ಬ್ರಿಟಿಷ್ ಸಹೋದ್ಯೋಗಿ ಪ್ರೊ. ಮ್ಯಾಕಿಂಟಾಶ್‌ರವರು ಒಂದು ದಿನ ಶ್ರೀಕಂಠಯ್ಯನವರನ್ನು ಕುರಿತು. 'ಮಿಸ್ಟರ್ ಶ್ರೀಕಂಠಯ್ಯ' ನೀವು ಆಕ್ಸ್‌ಫರ್ಡ್ ಅಥವಾ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಿಗೆ ಹೋದರೆ ಅಲ್ಲಿನವರು ನಿಮ್ಮನ್ನು ಭಾರತಕ್ಕೆ ಹಿಂದಿರುಗಲು ಬಿಡುವುದಿಲ್ಲ. ಯೋಚನೆ ಮಾಡಿ, ನೀವು ಅಲ್ಲಿ ಹೋಗುವುದಕ್ಕೆ ಬೇಕಾದ ಎಲ್ಲ ವ್ಯವಸ್ಥೆಗಳನ್ನು ನಾನು ಮಾಡುತ್ತೇನೆ' ಎಂದಿದ್ದರು. ಆದರೆ ಶ್ರೀಕಂಠಯ್ಯನವರಿಗೆ ಅಲ್ಲಿಗೆ ಹೋಗುವುದು ಸಾಧ್ಯವಿರಲಿಲ್ಲ. ವೃದ್ಧರಾದ ತಾಯಿ, ಚಿಕ್ಕವಯಸ್ಸಿನ ತಮ್ಮ ಮೂರು ಮಕ್ಕಳ ಜವಾಬ್ದಾರಿಯನ್ನು ಅವರು ಮರೆಯುವಂತಿರಲಿಲ್ಲ. ಇದರೊಂದಿಗೆ ಅಡುಗೆ ಮನೆಯ ಭಾಷೆ ಎಂದಾಗಿದ್ದ. ಕನ್ನಡವನ್ನು ಎಲ್ಲರೂ ಗೌರವಿಸುವಂತಹ ಭಾಷೆಯನ್ನಾಗಿ ವಿಕಾಸಗೊಳಿಸಬೇಕೆಂಬ ತಮ್ಮ ಮಹದಾಕಾಂಕ್ಷೆಯ ಕೆಲಸವು ಇನ್ನೂ ನೆರವೇರಿರಲಿಲ್ಲ.

ಆಂಗ್ಲ ಕವಿಗಳಾದ ಮಿಲ್ಟನ್, ಬೈರಾನ್, ವರ್ಡ್ಸ್‌ವರ್ತ್ ಹಾಗೂ ಇತರ ಕವಿಗಳ ಸುಂದರ ಕವನಗಳನ್ನು ತಮ್ಮ ಬಿಡುವಿನ ಸಮಯದಲ್ಲಿ ಕನ್ನಡಕ್ಕೆ ತರ್ಜುಮೆಗೊಳಿಸುವ ಪ್ರಯೋಗವನ್ನು ಶ್ರೀಯವರು ಕೈಗೆತ್ತಿಕೊಂಡರು. ಈ ರೀತಿಯಲ್ಲಿ ರಚಿಸಿದ ಕವನಗಳನ್ನು 'ಇಂಗ್ಲಿಷ್ ಗೀತಗಳು' ಎಂಬ ಸಂಕಲನವನ್ನಾಗಿ ಪ್ರಕಟಿಸಲು ಸಾಧ್ಯವಾಯಿತು. ಈ ಕಿರುಹೊತ್ತಿಗೆ ಶ್ರೀಕಂಠಯ್ಯನವರ ಮೊಟ್ಟಮೊದಲನೆಯ ಪ್ರಕಟಣೆ. ತಮ್ಮ ಸ್ನೇಹಿತರೊಡನೆ ನಿರ್ದುಷ್ಟವಾಗಿ ಇಂಗ್ಲಿಷ್ ಮಾತನಾಡುತ್ತಿದ್ದ ಶ್ರೀಕಂಠಯ್ಯನವರು ಕನ್ನಡದಲ್ಲಿ ಇಂತಹ ಅದ್ಭುತ ಕೃತಿಯನ್ನು ರಚಿಸಿದ್ದನ್ನು ಕಂಡು ಕನ್ನಡ ಓದುಗರು ಮೂಗಿನ ಮೇಲೆ ಬೆರಳನ್ನಿಟ್ಟರು. ಇನ್ನು ಕೆಲಕಾಲದಲ್ಲೇ ಹಳೆಗನ್ನಡವನ್ನು ಅಳವಡಿಸಿ ಮಾಡಿದ ಲಿಖಿತ ಪ್ರಯೋಗಗಳಿಂದಾಗಿ ಮೂಡಿ ಬಂದದ್ದು ಎರಡು ಸ್ವರಚಿತ ದುಃಖಾಂತ ನಾಟಕಗಳು, 'ಅಶ್ವತ್ಥಾಮನ್' ಹಾಗೂ 'ಪಾರಸಿಕರು'

'ಅಶ್ವತ್ಥಾಮನ್' ಪುರಾಣ ಕಾವ್ಯ. ಮಹಾಭಾರತದಲ್ಲಿ ಬರುವ ಒಂದು ಕಥೆಯನ್ನು ಆಧರಿಸಿ ರಚಿಸಿದ ನಾಟಕ. ಭಾರತೀಯ ಸಾಹಿತ್ಯದ ಲಕ್ಷಣಗಳಿಗೆ ವಿರುದ್ಧವಾಗಿ ಶ್ರೀಕಂಠಯ್ಯನವರು ಈ ಪುರಾಣ ಕಥೆಯನ್ನು ದುಃಖಾಂತ ನಾಟಕವನ್ನಾಗಿ ರೂಪಾಂತರಿಸಿದರು. ಅವರ ಮತ್ತೊಂದು ನಾಟಕ 'ಪಾರಸಿಕರು' ಗ್ರೀಕ್ ದುಃಖಾಂತ ನಾಟಕವನ್ನಾಧರಿಸಿ ರಚಿಸಿದ ನಾಟಕ. ಹೀಗೆ ಕನ್ನಡ ಸಾಹಿತ್ಯಕ್ಕೆ ದುಃಖಾಂತದ ಲಕ್ಷಣಗಳನ್ನು ಪರಿಚಯಿಸಿದ ಶ್ರೀಕಂಠಯ್ಯನವರನ್ನು ಕನ್ನಡ ಓದುಗರು ಬಹು ಕಟುವಾಗಿಯೇ ಟೀಕಿಸಿದರು. ಆದರೆ ಶ್ರೀಕಂಠಯ್ಯನವರು ಮನಃಕ್ಷೋಭಿತರಾಗಲಿಲ್ಲ. ಈ ಸಂಗತಿಗಳು ನಡೆದದ್ದು ನಾನು ಮಗುವಾಗಿದ್ದಾಗ ಅಂದರೆ ೩೦ರ ದಶಕದ ಸುಮಾರಿನಲ್ಲಿ.

ಶ್ರೀಕಂಠಯ್ಯನವರು ತನ್ನ ಅಣ್ಣನಾದರೂ ಅವರ ಕೆಲಸಗಳನ್ನು ವಿಮರ್ಶಿಸಲು ನನ್ನ ತಂದೆ ಹಿಂಜರಿಯುತ್ತಿರಲಿಲ್ಲ. ಮಹಾತ್ಮ ಗಾಂಧಿಯವರ ಅಹಿಂಸೆಯ ಉದಾತ್ತ ತತ್ವ ಹಾಗೂ ಬ್ರಿಟಿಷ್ ಸರ್ಕಾರದ ಕಾರ್ಯನೀತಿಯಂತಹ ವಿಷಯಗಳು ನಮ್ಮ ಚರ್ಚಾವಿಷಯಗಳಾಗಿರುತ್ತಿದ್ದವು. ಬಂಧು ಸೇತುರಾಯರು, ಅಜ್ಜಿ ಕಮಲಮ್ಮ, ತಾಯಿ ಲಲಿತ, ಚಿಕ್ಕಮ್ಮ ಪುಟ್ಟಿ ಇವರೆಲ್ಲರೂ ಕೂಡ ಇಂತಹ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಪರಿವಾರದಲ್ಲಿ ಸಲಿಗೆಯ ವಾತಾವರಣ ಮನೆಮಾಡಿತ್ತು.

ಶ್ರೀಕಂಠಯ್ಯನವರನ್ನು ನಾವೆಲ್ಲರೂ ಅಕ್ಕರೆಯಿಂದ 'ಅಣ್ಣಯ್ಯ' ಎಂದು ಕರೆಯುತ್ತಿದ್ದೆವು. ಆದರೆ ನಮ್ಮಜ್ಜಿ ಕಮಲಮ್ಮ ಪುಟ್ಟಿ ಹಾಗೂ ಸೇತುರಾಯರು ಅವರನ್ನು 'ಶ್ರೀಕಂಠಯ್ಯ'ನೆಂದೆ ಸಂಬೋಧಿಸುತ್ತಿದ್ದರು. ಅಣ್ಣಯ್ಯ ಸ್ವಭಾವತಃ ಮಿತ ಸಂಭಾಷಣಾಸಕ್ತರು. ಅಣ್ಣ ತಮ್ಮಂದಿರ ಮಕ್ಕಳೊಂದಿಗೆ ಮಾತಿಗಿಳಿಯುತ್ತಿದ್ದುದು ಅಪರೂಪ. ಹಾಗೆ ಮಾತನಾಡಿಸಿದಾಗಲೆಲ್ಲ ಒಂದೆರಡು ಮಾತುಗಳನ್ನಾಡಿ ಸುಮ್ಮನಾಗಿಬಿಡುತ್ತಿದ್ದರು. ವ್ಯಾಕುಲರಾಗದೆ ನಮಗೆ ಇಷ್ಟವಾಗುವ ಯಾವುದೇ ವಿಷಯವನ್ನು ಚೆನ್ನಾಗಿ ಕಲಿಯಬೇಕೆಂದು, ಮೂಢರಾಗಬಾರದೆಂದು ನಮಗೆಲ್ಲ ಬುದ್ಧಿವಾದ ಹೇಳುತ್ತಿದ್ದರು. ಬಿಡುವಿನ ಸಮಯದಲ್ಲಿ ಮನೆಯ ಮಕ್ಕಳೊಂದಿಗೆ ಸ್ವಲ್ಪ ಹೆಚ್ಚು ಮಾತನಾಡುತ್ತಿದ್ದರೂ ಅವಶ್ಯಕತೆಗೆ ಮೀರಿ ನುಡಿಯುತ್ತಿರಲಿಲ್ಲ. ಆದರೆ ಮನೆಯವರೊಂದಿಗೆಲ್ಲ ಪ್ರೀತಿ ಅಕ್ಕರೆಗಳಿಂದ ವರ್ತಿಸುತ್ತಿದ್ದರು.

ಶ್ರೀಕಂಠಯ್ಯನವರ ಅಭಿಪ್ರಾಯಗಳು ಎಂದೂ ಹಳೆಯ ಲಕ್ಷಣದ್ದಾಗಲಿ, ಸ್ವತಂತ್ರ ಚಿಂತನೆ ಇಲ್ಲದ್ದಾಗಲಿ ಆಗಿರಲೇ ಇಲ್ಲ. ಅವರು ಮರುವಿವಾಹವಾಗಬೇಕೆಂಬ ತಾಯಿಯ ಇಚ್ಛೆಯನ್ನು ನಿರಾಕರಿಸಿದರು. ಈ ನಿರ್ಧಾರ ತಮ್ಮ ತಾಯಿಯವರಿಗೆ ಮಾತ್ರವಲ್ಲದೆ ಸ್ನೇಹಿತರು ಹಾಗೂ ಹಿತಾಸಕ್ತರಿಗೂ ಅಸಮಾಧಾನವನ್ನುಂಟು ಮಾಡಿತ್ತು. ಇವರೆಲ್ಲರ ಈ ಇಚ್ಛೆಯನ್ನು ಶ್ರೀಯವರು ನಿರಾಕರಿಸಿದ್ದರೂ ತಮ್ಮ ಇಬ್ಬರು ಹೆಣ್ಣು ಮಕ್ಕಳ ಜೀವನಗಳನ್ನು ರೂಪಿಸುವ ಉದ್ದೇಶದಲ್ಲಿ ತಮ್ಮ ತಾಯಿಯ ಅಪೇಕ್ಷೆಗಳಿಗೇ ತಲೆಬಾಗಬೇಕಾಯಿತು. ತಮ್ಮ ಇಬ್ಬರು ಪುತ್ರಿಯರನ್ನು ಮೈಸೂರಿನ ಬಾಲಕಿಯರ ಶಾಲೆಯಲ್ಲಿ ಓದಿಸಿದರು. ಮಕ್ಕಳಿಬ್ಬರ ಪ್ರಾಥಮಿಕ ಶಿಕ್ಷಣ ಮುಗಿಯಿತು. ಪ್ರೌಢಾವಸ್ಥೆಗೆ ತಲುಪುವ ಮುನ್ನವೆ, ಹನ್ನೆರಡು ವರ್ಷಗಳು ತುಂಬುತ್ತಿದ್ದಂತೆ ಇಬ್ಬರಿಗೂ ಮದುವೆ ಮಾಡಿಬಿಟ್ಟರು. ತಂಗಿ ಕಾವೇರಿಯ ಸಹಾಯದಿಂದ ತಮ್ಮ ಮಕ್ಕಳಿಗೆ ಸರಿಹೊಂದುವ ಸ್ವಜಾತಿಯ ವರವನ್ನು ಹುಡುಕುವುದು ಸ್ವಲ್ಪ ಸುಲಭವಾಯಿತು.

ಹಾಸನದ ಸಂತೆಬಾಚಳ್ಳಿ ಮನೆತನದ ಹದಿನೆಂಟು ವಯಸ್ಸಿನ ಗುಂಡಪ್ಪನಿಗೆ ತನ್ನ ಹಿರಿಯ ಮಗಳು ಶಾರದೆಯನ್ನು ಕೊಟ್ಟು ಶ್ರೀಕಂಠಯ್ಯನವರು ಮದುವೆ ಮಾಡಿದರು. ಗುಂಡಪ್ಪನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಮಧ್ಯವರ್ತಿ ಪರೀಕ್ಷೆಗೆ (Intermediate) ಪರೀಕ್ಷೆಗೆ ಅಣಿ ಮಾಡಿಕೊಳ್ಳುತ್ತಿದ್ದರು. ಅವರು ಸ್ನೇಹ ಸ್ವಭಾವದವರಾಗಿದ್ದು ನೋಡಲು ಲಕ್ಷಣವಾಗಿದ್ದರು. ೧೯೩೩-೩೪ರ ನಡುವಿನಲ್ಲಿ ಅಣ್ಣಯ್ಯನ ಮನೆಯಲ್ಲೇ ಈ ಮದುವೆ ನೆರವೇರಿತು. ನನ್ನ ತಂದೆ ತಾಯಿಗಳೇ ದೊಡ್ಡಸ್ತಿಕೆ ವಹಿಸಿ ಮದುವೆಯನ್ನು ನಡೆಸಿಕೊಟ್ಟರು. ಮುಂದಿನ ಒಂದೆರಡು ವರ್ಷಗಳಲ್ಲಿ ಕಿರಿಯ ಮಗಳು ತಂಗಳನ್ನು ಬೆಂಗಳೂರಿನ ನಾಗರಾಜರಾವ್ ಎಂಬುವರಿಗೆ ಕೊಟ್ಟು ಲಗ್ನ ಮಾಡಿದರು. ನಾಗರಾಜರಾಯರು ಆಗಷ್ಟೆ ತಮ್ಮ ಮಧ್ಯಂತರ ಪರೀಕ್ಷೆ ಮುಗಿಸಿ ವಾಸ್ತುಶಿಲ್ಪ ವಿಜ್ಞಾನದಲ್ಲಿ ತರಬೇತಿಗೆಂದು ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜನ್ನು ಸೇರಲು ಇಚ್ಛಿಸಿದರು. ಈ ಮದುವೆ ಸಮಾರಂಭದ ನನ್ನ ನೆನಪುಗಳು ಈಗ ಮಾಸಿಹೋಗಿವೆ. ಆದರೆ ತಂದೆತಾಯಿಯೊಡನೆ ತಂಗಳ ಧಾರೆಯಲ್ಲಿ ನಾನು ಪಾಲ್ಗೊಳ್ಳಲಾಗಲಿಲ್ಲವಲ್ಲ ಎಂದು ನಾನು ಗೋಗರೆದದ್ದು ಮಾತ್ರ ನೆನಪಿನಲ್ಲಿನ್ನೂ, ಇದೆ.

ಶಾರದೆ ಪ್ರೌಢಾವಸ್ಥೆಗೆ ತಲುಪಿದ ಮೇಲೆ ಅಣ್ಣಯ್ಯ ತನ್ನ ಅಳಿಯ ಗುಂಡಪ್ಪನವರನ್ನು ತಾವಿದ್ದ ಹಾಸ್ಟಲಿನಿಂದ ಮನೆಗೆ ವರ್ಗವಾಗಬೇಕೆಂದು ವಿನಂತಿಸಿಕೊಂಡರು. ಇದಕ್ಕೆ ಗುಂಡಪ್ಪನವರೂ ತಕ್ಷಣ ಒಪ್ಪಿಕೊಂಡರು. ಮನೆಗೆ ಬಂದು ಮೂರು

ವರ್ಷಗಳಲ್ಲಿ ಶಾರದೆಯು ವಿಶಾಲಾಕ್ಷಿ ಮತ್ತು ಶ್ರೀಕಂಠನೆಂಬ ಇಬ್ಬರು ಮುದ್ದಾದ ಮಕ್ಕಳಿಗೆ ಜನ್ಮವಿತ್ತಳು. ಅಷ್ಟು ಹೊತ್ತಿಗೆ ಗುಂಡಪ್ಪನವರು ಇಂಗ್ಲಿಷ್ ಸಾಹಿತ್ಯದಲ್ಲಿ ತಮ್ಮ ಸ್ನಾತಕೋತ್ತರ ಪದವಿಯನ್ನು ಹಾಸೀಲು ಮಾಡಿಕೊಂಡಿದ್ದರು. ಮೈಸೂರಿನ ಮಧ್ಯಂತರ ಕಾಲೇಜಿನ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ತಮ್ಮ ಸಹೋದ್ಯೋಗಿಗಳು, ವಿದ್ಯಾರ್ಥಿಗಳು, ಇವರೆಲ್ಲರಿಗೂ ಗುಂಡಪ್ಪನವರು ಪ್ರೀತಿ ಪಾತ್ರರಾಗಿಯೂ, ಆದರಣೀಯರಾಗಿಯೂ ಇದ್ದರು.

ಶ್ರೀಕಂಠಯ್ಯನವರ ಮಗ ತಮ್ಮಯ್ಯ ಜಾಣನು, ಒಳ್ಳೆಯ ಸ್ವಭಾವ ಆಗಿದ್ದನು. ಆಗಿನ ಕಾಲದಲ್ಲಿ ಮೈಸೂರಿನಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಅಂಗವಿಕಲರಿಗೆಂದು ಯಾವುದೇ ವಿಶೇಷ ಶಿಕ್ಷಣದ ವ್ಯವಸ್ಥೆ ಇರಲಿಲ್ಲ. ತಮ್ಮಯ್ಯನು ಪರಿವಾರದವರಿಗೆಲ್ಲ ಪ್ರೀತಿಪಾತ್ರನಾಗಿದ್ದ. ತನ್ನ ಎಲ್ಲ ದೇಹ ಸೌಕರ್ಯಗಳನ್ನು - ಪರಿವಾರದವರು ನೋಡಿಕೊಳ್ಳುತ್ತಿದ್ದರು. ವಿದ್ಯೆ ಹಾಗೂ ಜ್ಞಾನದ ಬೆಲೆಯ ಅರಿವಿದ್ದ ಶ್ರೀಕಂಠಯ್ಯನವರು ತಮ್ಮ ಮಗನನ್ನು ಮೂಢನಾಗಿ ಉಳಿಯಲು ಬಿಡುವರೆ? ಮಗನಿಗೆಂದು ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತದ ಹೊತ್ತಿಗೆಗಳನ್ನು ಓದಿ ಹೇಳತಕ್ಕ ಮೇಷ್ಟರೊಬ್ಬರನ್ನು ಗೊತ್ತುಮಾಡಿದರು. ಅಣ್ಣಯ್ಯನೂ ಕೂಡ ತಮ್ಮ ಬಿಡುವಿನ ಸಮಯದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯ ಓದಿ ಭಾಷೆಯ ಸೊಗಸು, ಅದರ ಸುಲಭ ಕ್ಲಿಷ್ಟಗಳನ್ನು ವಿವರಿಸುತ್ತಿದ್ದರು. ಹೀಗೆ ತಮ್ಮಯ್ಯನ ವಿದ್ಯಾಭ್ಯಾಸವೂ ಸಾಗಿತ್ತು. ಓದಲು, ಬರೆಯಲು ಆಗದಿದ್ದರೂ ಕನ್ನಡ ಮತ್ತು ಇಂಗ್ಲಿಷು ಗಳಲ್ಲಿ ತನ್ನ ಸಹಿ ಮಾಡುವುದನ್ನು ಕಲಿತಿದ್ದನು. ಯಾರ ನೆರವಿಲ್ಲದೆಯೇ ಮನೆಯಲ್ಲಿ ಸುಲಭವಾಗಿ ಓಡಾಡುತ್ತಿದ್ದನು. ವ್ಯಕ್ತಿಯ ಚಲನವಲನದಿಂದಲೆ ಯಾರೆಂದು ಗುರುತಿಸುತ್ತಿದ್ದನು. ನನಗೆ ನೆನಪಾದಂತೆ ಒಮ್ಮೆ ತಂದೆತಾಯಿಗಳೊಂದಿಗೆ ನಾನು ಅಣ್ಣಯ್ಯನ ಮನೆಗೆ ಹೋಗಿದ್ದೆ. ಬಾಗಿಲ ಬಳಿ ಬಂದಾಕ್ಷಣ 'ರಾಜು ನೀನು ಬಂದದ್ದು ಬಹಳ ಸಂತೋಷವಾಯಿತು. ಬಾ ಕುಳಿತುಕೊ, ನನ್ನ ಜೊತೆ ಮಾತನಾಡು' ಎಂದು ಸ್ವಾಗತಿಸಿದ್ದ.

೧೯೧೦ರ ನಡುವಿನಲ್ಲಿ ಮೈಸೂರು ಮಹಾರಾಜ ಕಾಲೇಜಿನ ಇಂಗ್ಲಿಷ್ ವಿಭಾಗದಲ್ಲಿ ನನ್ನ ದೊಡ್ಡಪ್ಪನವರು ಸಹ ಪ್ರಾಧ್ಯಾಪಕ ರಾದರು. ೧೯೧೯ರಲ್ಲಿ ದ್ವಿತೀಯ ಸ್ತರದ ಪ್ರಾಧ್ಯಾಪಕರಾಗಿ ಬಡ್ತಿ ಸ್ವೀಕರಿಸಿದರು.

'ರ್ಹೆಟೋರಿಕ' ವಿಷಯವಾಗಿ ಸ್ನಾತಕ ಹಾಗೂ ಸ್ನಾತಕೋತ್ತರ, ಕ್ರಮಗಳ ವಿದ್ಯಾರ್ಥಿಗಳಿಗೆ ನೆರವಾಗಲೆಂದು 'ನೋಟ್ಸ್ ಆನ್ ರ್ಹೆಟೋರಿಕ್' ಎಂಬ ಸಣ್ಣ ಪಠ್ಯ ಪುಸ್ತಕ ವೊಂದನ್ನು ಪ್ರಕಟಿಸಿದರು. ಈ ಪುಸ್ತಕದ ಪ್ರಯೋಜನವನ್ನು ಭಾರತದ ಇತರ ವಿಶ್ವವಿದ್ಯಾನಿಲಯಗಳ ಹಾಗು ಕಾಲೇಜುಗಳ ವಿದ್ಯಾರ್ಥಿಗಳು ಪಡೆದುಕೊಂಡರು. ಕನ್ನಡ ಹಾಗೂ ಕನ್ನಡ ಸಾಹಿತ್ಯದ ಬಗೆಗೆ ತಮಗಿದ್ದ ಜ್ಞಾನದ ಹರವನ್ನು ಇದೇ ವಿಷಯವನ್ನು ಕುರಿತು ಧಾರವಾಡ ವಿದ್ಯಾವರ್ಧಕ ಸಂಘದಲ್ಲಿ ಕೊಟ್ಟ ಕೆಲವು ಉಪನ್ಯಾಸಗಳಿಂದ ಅಲ್ಲಿನ ಶ್ರೋತೃಗಳಿಗೆ ತಿಳಿದು ಬಂತು, ಇಂಗ್ಲಿಷ್ ಭಾಷೆಯನ್ನು ಬೋಧಿಸುವುದು ಬ್ರಿಟಿಷಿ ನವರಿಂದ ಮಾತ್ರ ಸಾಧ್ಯ ಎಂಬುದು ಆಗಿನ ಆಡಳಿತದವರ ನಂಬುಗೆ. ಹಾಗಾಗಿ ಬಹಳ ವರ್ಷಗಳವರೆಗೂ ಆಡಳಿತದವರು ಶ್ರೀಕಂಠಯ್ಯನವರಿಗೆ ಹಿರಿಯ ಪ್ರಾಧ್ಯಾಪಕ ಸ್ಥಾನಕ್ಕೆ ಬಡ್ತಿ ನೀಡಲು ಇಚ್ಛಿಸಿರಲಿಲ್ಲ. ಎಂತೇ ಆದರೂ ೬೨ ರಲ್ಲಿ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರನ್ನಾಗಿ ನೇಮಿಸಿ ದರು. ಇದೇ ಸ್ಥಾನದಲ್ಲಿ ಶ್ರೀಕಂಠಯ್ಯನವರು ಮುಂದಿನ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಸ್ವತಃ ಪಂಡಿತರಾಗಿದ್ದ ಬ್ರಿಜೇಂದ್ರನಾಥ ಶೀಲ್ ಆ ಸಮಯದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಉಪಕುಲಪತಿಗಳಾಗಿ ಸೇವೆಯಲ್ಲಿದ್ದರು. ಸಹೋದ್ಯೋಗಿಗಳಿಬ್ಬರೂ ಕೆಲವು ದಿನಗಳಲ್ಲೆ ಆಪ್ತರಾದರು. ಶ್ರೀಕಂಠಯ್ಯನವರ ಪಾಂಡಿತ್ಯವನ್ನು ಅರಿತು ಶೀಲ್‌ರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕನ್ನಡ ಭಾಷೆಯ ಬೆಳವಣಿಗೆಗೆ ದುಡಿಯಬೇಕೆಂಬ ಶ್ರೀಕಂಠಯ್ಯನವರ ಆಕಾಂಕ್ಷೆಯನ್ನು ತಿಳಿದು ಬ್ರಜೇಂದ್ರನಾಥರು ಒಂದು ಪ್ರತ್ಯೇಕ ಕನ್ನಡ ವಿಭಾಗವನ್ನು ರಚಿಸಿ ಕನ್ನಡ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಕ್ರಮವನ್ನು ಪರಿಚಯಿಸುವ ಸಾಧ್ಯತೆಗಳ ಬಗ್ಗೆ ಶ್ರೀಕಂಠಯ್ಯನವರೊಂದಿಗೆ ಚರ್ಚಿಸುತ್ತಿದ್ದರು. ಹೀಗೆ ಮಾಡುವುದರಿಂದ ಕನ್ನಡದ ಏಳ್ಗೆಗೆ ರೆಕ್ಕೆ ಕೊಟ್ಟಂತಾಗುತ್ತದೆಂಬ ತಮ್ಮ ಅಭಿಪ್ರಾಯವನ್ನು ಶ್ರೀಕಂಠಯ್ಯನವರ ಮುಂದಿಟ್ಟರು. ಈ ಯೋಜನೆ ಶ್ರೀಕಂಠಯ್ಯ ನವರ ಉತ್ಸಾಹ ಹೆಚ್ಚಿಸಿತ್ತು. ತಮ್ಮ ಬಿಡುವಿನ ಸಮಯವನ್ನೆಲ್ಲ ಈ ಯೋಜನೆಯ ತಪಶೀಲುಗಳನ್ನು ತಯಾರಿಸುವುದರಲ್ಲೇ ಕಳೆದರು. ಒಂದು ವರ್ಷದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಮಹಾರಾಜರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಬಿ.ಎ. ಹಾಗೂ ಕನ್ನಡ ಎಂ.ಎ. ಕ್ರಮಗಳನ್ನು ಜಾರಿಗೆ ತರಲು ತಮ್ಮ ಸಮ್ಮತಿ ಸೂಚಿಸಿದರು. ವಿಭಾಗದ ಮುಖ್ಯಸ್ಥರ ಹಾಗೂ ಹಿರಿಯ ಪ್ರಾಧ್ಯಾಪಕರ ಸ್ಥಾನಗಳಿಗೆ ಬ್ರಜೇಂದ್ರನಾಥರು ಹಾಗೂ ಶ್ರೀಕಂಠಯ್ಯನವರ ಹೆಸರುಗಳನ್ನೆ ಸೂಚಿಸಿದರು. ಆದರೆ ಶ್ರೀಕಂಠಯ್ಯನವರಿಗೂ ಇಂಗ್ಲಿಷ್ ವಿಭಾಗದ ಹಿರಿಯ ಪ್ರಾಧ್ಯಾಪಕ

ರಾಗಿಯೂ, ಕನ್ನಡ ಗೌರವ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸುವ ತಮ್ಮ ಇಚ್ಛೆಯನ್ನು ಆಡಳಿತದ ಮುಂದಿಟ್ಟರು. ಮಹಾರಾಜರು ಶ್ರೀಯವರ ಈ ಇಚ್ಛೆಗೆ ಸಮ್ಮತಿಸಿದರೂ ಹಿರಿಯ ಪ್ರಾಧ್ಯಾಪಕ ಸ್ಥಾನವು ಖಾಲಿಯಿರಲಿಲ್ಲವಾದ್ದರಿಂದ ದ್ವಿತೀಯ ಸ್ಥರದ ಪ್ರಾಧ್ಯಾಪಕರಾಗಿಯೆ ಮುಂದುವರಿಯಬೇಕಾಯಿತು. ಸ್ನಾತಕೋತ್ತರ ಹಂತದ ಇಂಗ್ಲಿಷ್ ಹಾಗೂ ಕನ್ನಡ ಕ್ರಮಗಳೆರಡನ್ನೂ ಹೇಳಿಕೊಡುತ್ತಿದ್ದರಿಂದ ಮೊದಲಿಗಿಂತ ಎರಡು ಪಟ್ಟು ಕೆಲಸ ಈಗ ಶ್ರೀಕಂಠಯ್ಯನವರ ಮುಂದಿತ್ತು.

ಶ್ರೀಕಂಠಯ್ಯನವರ ಉಪನ್ಯಾಸಗಳು ವಿದ್ಯಾರ್ಥಿಗಳನ್ನು ಬೆರಗುಗೊಳಿಸುತ್ತಿತ್ತು. ಹಲವು ವಿಷಯಗಳು ಆಯ್ಕೆಯ ಪಟ್ಟಿಯಲ್ಲಿದ್ದರೂ ಶ್ರೀಕಂಠಯ್ಯನವರ ಉಪನ್ಯಾಸ ಕೇಳಬಹುದೆಂದೆ ವಿದ್ಯಾರ್ಥಿಗಳು ಕನ್ನಡವನ್ನು ತಮ್ಮ ವಿಷಯವನ್ನಾಗಿ ಆರಿಸಿಕೊಳ್ಳುತ್ತಿದ್ದರು. ಕೆಲ ವರ್ಷಗಳಲ್ಲೆ ಮಹಾರಾಜ ಕಾಲೇಜಿನ ಕನ್ನಡ ವಿಭಾಗ ಹೆಸರುವಾಸಿಯಾಯಿತು. ಶ್ರೀಕಂಠಯ್ಯನವರು ಕನ್ನಡಿಗರ ಮನೆಮಾತಾದರು. ಕನ್ನಡ ಭಾಷೆಯ ವಿಕಾಸದತ್ತಲಿನ ಶ್ರೀಕಂಠಯ್ಯನವರ ದೃಷ್ಟಿಯನ್ನು ವಿರೋಧಿಸುವವರೂ ಕೆಲವರಿದ್ದರು. ಎಂಬುದು ವಿಷಾದನೀಯ. ಶ್ರೀಕಂಠಯ್ಯನವರು ಕನ್ನಡ ಉದ್ಧಾರಕ್ಕೆಂದು ಸಲ್ಲಿಸುತ್ತಿದ್ದ ಸೇವೆಯನ್ನು ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರು ಬಹಳ ಪ್ರಶಂಸಿಸಿದರಲ್ಲದೆ ರಾಜ್ಯಕ್ಕೆ ಮಾಡಿದ ಅಮೋಘ ಸೇವೆಯನ್ನು ಗುರುತಿಸಿ 'ರಾಜಸೇವಾಸಕ್ತ'ನೆಂಬುದಾಗಿ ಬಿರುದು ನೀಡಿದರು.

೧೯೩೦ ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಹಿರಿಯ ಪ್ರಾಧ್ಯಾಪಕರ ಸ್ಥಾನವು ತೆರವಾಗಿತ್ತು. ಈ ಸ್ಥಾನವನ್ನು ಶ್ರೀಕಂಠಯ್ಯನವರು ಭರಿಸಬೇಕೆಂದು ಮಹಾರಾಜರು ಆಶಿಸಿದರು. ಶ್ರೀಕಂಠಯ್ಯನವರು. ತಾವು ಕಷ್ಟಪಟ್ಟು ಕೆಲಸ ಮಾಡಿದ ಮೈಸೂರಿನ ಕಾಲೇಜನ್ನು ತೊರೆಯಬೇಕಾಗಿ ಬಂತು. ಕೆಳಗಿನ ಶಿಕ್ಷಕವರ್ಗ ಶಿಕ್ಷಣ ಮಟ್ಟವನ್ನು ಇಳಿಯಗೊಡದಂತೆ ತಯಾರೂ ಮಾಡಿದ್ದರು. ಶ್ರೀಕಂಠಯ್ಯನವರು ಬೆಂಗಳೂರಿಗೆ ಹೊರಟಿದ್ದು ಅವರಿಗೆಲ್ಲಾ ಬೇಸರ ತಂದಿತ್ತು. ಕಾಲೇಜಿನ ಕನ್ನಡ ಹಾಗೂ ಇಂಗ್ಲೀಷ್ ವಿದ್ಯಾರ್ಥಿಗಳು ಸಹೋದ್ಯೋಗಿಗಳು ಮತ್ತು ಕನ್ನಡಕ್ಕಾಗಿನ ತಮ್ಮ ಕೆಲಸದಲ್ಲಿ ನೈತಿಕ ಬೆಂಬಲವನ್ನೊದಗಿಸಿದ ಮೈಸೂರಿನ ಜನತೆ ಶ್ರೀಕಂಠಯ್ಯನವರು ಭವಿಷ್ಯದ ತಮ್ಮ ಎಲ್ಲ ಕೆಲಸಗಳಲ್ಲಿ ಸಫಲತೆ ಪಡೆಯಲೆಂದು ಹರಸಿ ಭಾವಾಭಿವ್ಯಂಜಕ ಬೀಳ್ಕೊಡುಗೆಯನ್ನಿತ್ತರು.

೧೯೩೦ರ ಮಾತು. ಬೆಂಗಳೂರಿಗೆ ಬಂದಿಳಿದ ಶ್ರೀಕಂಠಯ್ಯನವರು ಆಗಷ್ಟೇ ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ತಮ್ಮ ಸೇವೆಯಲ್ಲಿ ತೊಡಗಿದ್ದರು. ಬೆಂಗಳೂರಿನ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೆಲಸದಲ್ಲಿದ್ದ ಅಳಿಯ ಗುಂಡಪ್ಪನವರು ಅಸ್ವಸ್ಥರಾದರು. ಅವರಿಗೆ ಟೈಫಾಯ್ಡ್ ಖಾಯಿಲೆಯೆಂದು ವೈದ್ಯರು ನಿಧಾನಿಸಿದರು. ಆಗಿನ ದಿನಗಳಲ್ಲಿ ಟೈಫಾಯ್ಡ್ ಜ್ವರ ನಿಯಂತ್ರಣಕ್ಕೆ ತಕ್ಕ ಔಷದ ಮದ್ದು ಇರಲಿಲ್ಲ. ಈ ಜ್ವರದಿಂದ ಚೇತರಿಸಿಕೊಳ್ಳುತ್ತಿದ್ದ ರೋಗಿಗಳು ಅಪರೂಪ. ಶಾರದೆ ವೈದ್ಯರ ಸೂಚನೆಗನುಗುಣವಾಗಿ ಪತಿಯ ಆರೈಕೆ ಮಾಡಿದಳಾದರೂ ನಲವತ್ತು ದಿನಗಳ ನಿರಂತರ ಜ್ವರದಿಂದ ನರಳಿದ್ದ ಗುಂಡಪ್ಪನವರು ತಮ್ಮ ಅಂತ್ಯಕಂಡರು. ಶ್ರೀಕಂಠಯ್ಯನವರ ತಾಯಿ ಭಾಗೀರಥಮ್ಮನವರಿಗೂ ಜ್ವರ ಅಂಟುಕೊಂಡು ಮುಂದಿನ ಹದಿನೈದು ದಿನಗಳೊಳಗಾಗಿಯೇ ಅವರೂ ದೈವಾಧೀನರಾಗಿ ಹೋದರು. ಇವೆರಡು ಘಟನೆಗಳು ನಡೆದಾಗ ನಾನು ಸುಮಾರು ಹನ್ನೊಂದು ವರ್ಷಗಳ ಹುಡುಗಿ. ತಾಯಿಗೆ ವಯಸ್ಸಾಗಿತ್ತು. ಅದು ಅಲ್ಲದೆ ಅನಾರೋಗ್ಯ ಕಾಡುತ್ತಿತ್ತು.

ಭಾಗಿರಥಮ್ಮನವರ ಸಾವು ಪರಿವಾರದವರಿಗೆ ಅಷ್ಟು ನೋವನ್ನುಂಟು ಮಾಡಿರಲಿಲ್ಲ. ಆದರೆ ಗುಂಡಪ್ಪನವರ ಸಾವು ಅವರೆಲ್ಲರಿಗೂ ಆಘಾತವನ್ನೇ ಉಂಟು ಮಾಡಿತ್ತು. ಇಪ್ಪತ್ತರ ಹರೆಯದ ಶಾರದೆ ಜೀವನದುದ್ದಕ್ಕೂ ವಿಧವೆಯ ಬಾಳು ಬಾಳಬೇಕಿತ್ತು. ಶಾರದೆಯ ಮಾವನವರು ಅವಳನ್ನು ಹಾಸನದಲ್ಲಿರುವ ತಮ್ಮ ಮನೆಗೆ ಕಳುಹಿಸುವಂತೆ ಶ್ರೀಕಂಠಯ್ಯನವರಲ್ಲಿ ಕೇಳಿಕೊಂಡರು. ಆದರೆ ಶ್ರೀಕಂಠಯ್ಯನವರು ಇದಕ್ಕೆ ಒಪ್ಪಲಿಲ್ಲ. ಶ್ರೀಕಂಠಯ್ಯನವರ ಈ ವರ್ತನೆ ಬೀಗರಿಗೆ ಬೇಸರ ತಂದಿತ್ತು. ಮಗಳ ಭವಿಷ್ಯವು ಮುಖ್ಯವೆನಿಸಿದ ಶ್ರೀಕಂಠಯ್ಯನವರು ಇದರ ಬಗ್ಗೆ ಚಿಂತೆಗೀಡಾಗಲಿಲ್ಲ. ತಮಗೆ ಮಾತ್ರ ಶಾರದೆ ಹಾಗೂ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಲು ಸಾಧ್ಯ ಎನ್ನುವುದು ಶ್ರೀಕಂಠಯ್ಯನವರಿಗೆ ತಿಳಿದಿತ್ತು.

ಗುಂಡಪ್ಪನವರು ತೀರಿಕೊಂಡಾಗ ಶ್ರೀಕಂಠಯ್ಯನವರಿಗೆ ವಯಸ್ಸು ನಲವತ್ತೈದು. ತಮ್ಮ ಕೆಲಸಗಳಲ್ಲದೆ ಮಗಳು, ಮೊಮ್ಮಕ್ಕಳ ಕ್ಷೇಮ, ಸುಖಗಳತ್ತಲೂ ಗಮನವನ್ನು ಹರಿಸಬೇಕಿತ್ತು. ಈ ವಿಷಯಗಳನ್ನು ಕುರಿತು ಶ್ರೀಕಂಠಯ್ಯನವರು ಗಂಭೀರವಾಗಿ ಆಲೋಚಿಸತೊಡಗಿದರು. ತಮ್ಮ ಕಾಲ ಮುಗಿದ ಮೇಲೂ ಶಾರದೆ ಹಾಗೂ ಮಕ್ಕಳು ಪರರಿಗೆ ಭಾರವೆನಸದೆ ಸ್ವಾವಲಂಬಿಗಳಾಗಿ ಜೀವನವನ್ನು ನಡೆಸಲು ಸಾಧ್ಯವಾಗುವಂತೆ ವ್ಯವಸ್ಥೆ ರೂಪಿಸಬೇಕೆಂಬುದಾಗಿ ನಿರ್ಧರಿಸಿದರು.

ಶಾರದೆ ಅಷ್ಟಾಗಿ ಔಪಚಾರಿಕ ಶಿಕ್ಷಣ ಪಡೆದಿರಲಿಲ್ಲ, ತಂಗ ಹಾಗೂ ನಾಗರಾಜರಾಯರು ಬೆಂಗಳೂರಿನಲ್ಲೆ ವಾಸವಾಗಿದ್ದರು. ನಾಗರಾಜರಾಯರು ಇಂಜಿನಿಯರಿಂಗ್ ಮುಗಿಸಿ ಕೆಲಸ ಹುಡುಕುತ್ತಿದ್ದರು. ಬಹಳ ಹೊತ್ತು ಅವರು ಮನೆಯಲ್ಲಿರುತ್ತಿರಲಿಲ್ಲ. ಹಾಗಾಗಿ ತಂಗ ಹೆಚ್ಚು ಸಮಯ ತಂದೆಯ ಮನೆಯಲ್ಲೇ ಇರುತ್ತಿದ್ದಳು. ಶಾರದೆ ಮನೆಗೆಲಸದಲ್ಲಿ ನಿಪುಣೆ ಎನಿಸಿದ್ದಳು. ಈಗ ತಂಗಳ ಸಹಾಯದಿಂದ ಮನೆಯ ನಿರ್ವಹಣೆಯನ್ನು ಇಬ್ಬರು ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದಿದ್ದರು. ನಿತ್ಯ ಮಧ್ಯಾಹ್ನದ ವೇಳೆ ಅಕ್ಕತಂಗಿಯರಿಗೆ ಬಿಡುವಿನ ಸಮಯವಾಗಿತ್ತು. ಈ ಬಿಡುವಿನ ವೇಳೆಯಲ್ಲಿ ತಮ್ಮಯ್ಯನಿಗೂ ಸೇರಿದಂತೆ ಮೂವರಿಗೂ ಇಂಗ್ಲಿಷ್ ಸಂಭಾಷಣೆಯಲ್ಲಿ ತರಬೇತು ನೀಡುವ ಸಲುವಾಗಿ ಅಣ್ಣಯ್ಯ ಓರ್ವ ಮನೆಪಾಠ ಹೇಳುವ ಮೇಷ್ಟರನ್ನು ಗೊತ್ತು ಮಾಡಿದರು. ಹೋಮ್‌ಸ್ಕೂಲ್ ಎಂಬ ಖಾಸಗಿ ಶಾಲೆಯನ್ನು ನಡೆಸುತ್ತಿದ್ದ ಮಿಸ್. ಮುರಿಯಲ್ ರಾಬಿನ್‌ಸನ್ ಎಂಬ ಅಮೆರಿಕದ ಮಹಿಳೆ ಶ್ರೀಕಂಠಯ್ಯನವರ ಮನೆಯ ಹತ್ತಿರ ವಾಸವಾಗಿದ್ದರು. ಶಾಲೆಯು ಒಳ್ಳೆಯದಾಗಿತ್ತು. ಇದೇ ವಿಷಯವಾಗಿ ಶ್ರೀಕಂಠಯ್ಯನವರು ಮಹಿಳಾ ಸೇವಾ ಸಮಾಜವೆಂಬ ಶಿಕ್ಷಣ ಸಂಸ್ಥೆಯನ್ನು ನಿರ್ವಹಿಸುತ್ತಿದ್ದ ನನ್ನ ಅಜ್ಜಿ ಕಮಲಮ್ಮನವರ ಅಭಿಪ್ರಾಯ ಯಾಚಿಸಿದರು. ಕಮಲಮ್ಮನವರ ಆಶ್ವಾಸನೆಯ ಮೇರೆಗೆ ಶ್ರೀಕಂಠ ಹಾಗೂ ವಿಶಾಲಾಕ್ಷಿ ಇಬ್ಬರನ್ನು ಇದೇ ಶಾಲೆಗೆ ದಾಖಲು ಮಾಡಿದರು. ಈ ಬದಲಾವಣೆಗಳು ತಮ್ಮ ಮಕ್ಕಳ ಮನೋಧರ್ಮವನ್ನು ಎಷ್ಟರ ಮಟ್ಟಿಗೆ ಬದಲಾಯಿಸಿತ್ತೆನ್ನುವುದು ವರ್ಷದೊಳಗಾಗಿಯೇ ಶ್ರೀಕಂಠಯ್ಯನವರಿಗೆ ಅರಿವಾಯಿತು. ಶಾರದೆ ತನ್ನ ಹಾಗೂ ತನ್ನ ಮಕ್ಕಳ ದುರ್ಭಾಗ್ಯವನ್ನು ಮರೆತು ಎಲ್ಲರೊಂದಿಗೆ ಬಿಚ್ಚು ಮನಸ್ಸಿನಿಂದ ಸ್ನೇಹಭಾವದಿಂದ ಬೆರೆಯಲಾರಂಭಿಸಿದ್ದರು. ಬದುಕನ್ನು ಭರವಸೆ ತುಂಬಿದ ದೃಷ್ಟಿಯಿಂದ ಕಾಣಲಾರಂಭಿಸಿದ್ದರು. ಅಣ್ಣಯ್ಯನು ಶಾರದೆಗೆಂದು ಬ್ಯಾಂಕಿನಲ್ಲಿ ಖಾತೆ ತೆರೆದುಕೊಟ್ಟರು. ಖಾತೆಯ ನಿರ್ವಹಣೆಯನ್ನು ಶಾರದೆಗೇ ಒಪ್ಪಿಸಿದರು. ಇವೆಲ್ಲದರಿಂದ ಶಾರದೆಯ ಆತ್ಮವಿಶ್ವಾಸ ಹೆಚ್ಚಿತ್ತು. ಶಾರದೆ ಹಾಗೂ ತಂಗ ಆಗಿಂದಾಗ್ಗೆ ಹೋಮ್ ಸ್ಕೂಲಿನತ್ತ ಹೋಗುತ್ತಿದ್ದರು. ಮಹಿಳಾ ಸೇವಾ ಸಮಾಜದಲ್ಲಿ ನನ್ನ ಶಿಕ್ಷಕಿಯಾಗಿದ್ದ 'ಮಿಸ್ ಡೋನ್ ಮುರಿಯಲ್‌ರ ಜೊತೆಗೆ ವಾಸವಾಗಿದ್ದರು. ಈ ಸ್ನೇಹಪರ ಭೇಟಿಗಳಿಂದಾಗಿ ಶಾರದ ಹಾಗೂ ತಂಗ ಅಮೆರಿಕನ್ನರ ರೀತಿನೀತಿಗಳನ್ನರಿತರು. ಕೇಕ್ ಹಾಗೂ ಇತರ ಶಾಖಾಹಾರಿ ಅಡುಗೆಗಳನ್ನು ತಯಾರಿಸುವುದನ್ನು ಕಲಿತರು. ಆಗಾಗ್ಗೆ ನಾನು ಅಣ್ಣಯ್ಯನ ಮನೆಗೆ ಹೋಗುತ್ತಿದ್ದೆ. ಹೀಗೆ ಹೋದಾಗಲೆಲ್ಲ ಮನೆಯ ಹಾಗೂ ಮನೆಯವರ ಮನೋಭಾವದಲ್ಲಿ ಜರುಗುತ್ತಿದ್ದ ಬದಲಾವಣೆಗಳನ್ನು ಸ್ಪಷ್ಟವಾಗಿ ಗಮನಿಸುತ್ತಿದ್ದೆ.

೧೯೩೦ನೇ ಇಸವಿಯ ಸುಮಾರಿನಲ್ಲಿ ಸೆಂಟ್ರಲ್ ಕಾಲೇಜಿನ ಸ್ನಾತಕ ಪದವಿ ತರಗತಿಗಳಲ್ಲಿ ಸುಮಾರು ಆರು ಜನ ಮಹಿಳಾ ವಿದ್ಯಾರ್ಥಿಗಳಿದ್ದರು. ಎಪ್ಪತ್ತು, ಎಂಬತ್ತು ಜನರಿದ್ದ ದೊಡ್ಡ ತರಗತಿಯಲ್ಲಿ ಇವರದು ಅಲ್ಪ ಸಂಖ್ಯೆ ಇದರಲ್ಲಿ ಇಂಗ್ಲಿಷ್‌ನಲ್ಲಿ ಆಸಕ್ತಿಯಿರುವ ಕೆಲವರಿದ್ದರು. ವರ್ಷಕ್ಕೊಮ್ಮೆ ಬೆಳದಿಂಗಳ ಔತಣಕ್ಕೆಂದು ಇವರುಗಳನ್ನು ಶ್ರೀಕಂಠಯ್ಯನವರು ಆಹ್ವಾನಿಸುತ್ತಿದ್ದರು. ಹಾಗೆ ಕೆಲ ಆಪ್ತ ವಿಶಾಲ ಹೃದಯಿಗಳನ್ನೂ ಆಹ್ವಾನಿಸುತ್ತಿದ್ದರು. ಶಾರದೆ ಹಾಗೂ ತಂಗ ಹಬ್ಬದಡಿಗೆ ಮಾಡಿ ಇವರಿಗೆಲ್ಲ ಬಡಿಸುತ್ತಿದ್ದರು. ನಾನು ಇವರುಗಳೊಂದಿಗೆ ಈ ಔತಣಕೂಟಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. ಅಣ್ಣಯ್ಯ ಮಿತಭಾಷಿಗರಾದರು ಈ ಔತಣಕೂಟಗಳಲ್ಲಿ ಅವರು ಎಲ್ಲರೊಂದಿಗೆ ಬಿಚ್ಚುಮನಸ್ಸಿನಿಂದ ಎಲ್ಲ ರೀತಿಯ ವಿಷಯಗಳನ್ನೂ ಚರ್ಚಿಸುತ್ತಿದ್ದರು. ಕೆಲವೊಮ್ಮೆ ತಮ್ಮ ಮಾತುಗಳಿಂದ ಎಲ್ಲರನ್ನೂ ನಗಿಸುತ್ತಿದ್ದರು. ಇದನ್ನು ಗಮನಿಸಿದ ಆ ಸ್ನೇಹಿತರು ಶ್ರೀಕಂಠಯ್ಯನವರು ಎಲ್ಲರೊಂದಿಗೆ ಸಲಿಗೆಯಿಂದ ವರ್ತಿಸದೆ ತಮ್ಮ ತರಗತಿಯ ವಿದ್ಯಾರ್ಥಿನಿಯರೊಂದಿಗೆ ಮಾತ್ರ ಏಕೆ ಹೀಗೆ ವರ್ತಿಸುತ್ತಾರೆ. ಅವರ ಮನಸ್ಸಿನಲ್ಲಿ ಕೆಡುಕಿರಬಹುದೆ?' ಎಂಬುದಾಗಿ ಅಣ್ಣಯ್ಯನವರನ್ನು ದೂಷಿಸುತ್ತಿದ್ದರು. ಈ ಮಾತುಗಳಿಂದ ಅಣ್ಣಯ್ಯ ಬೇಸರಗೊಳ್ಳುತ್ತಿರಲಿಲ್ಲ. ಅರುವತ್ತು ಎಪ್ಪತ್ತು ಜನರನ್ನು ಆಹ್ವಾನಿಸಿ ಉಪಚಾರ ಮಾಡುವಷ್ಟು ಜಾಗ ಅವರ ಮನೆಯಲ್ಲಿರಲಿಲ್ಲ. ಅಲ್ಲದೆ ಇಷ್ಟು ಜನಕ್ಕೆ ಬೇಕಾದ ಅಡುಗೆಯನ್ನು ತಮ್ಮ ಇಬ್ಬರು ಮಕ್ಕಳಿಂದ ಮಾತ್ರ ಸಾಧ್ಯವಿರಲಿಲ್ಲ. ಈ ರೀತಿ ಔತಣಕೂಟಗಳನ್ನು ಏರ್ಪಡಿಸಿ ತಮ್ಮ ವಿದ್ಯಾರ್ಥಿನಿಯರನ್ನು ಆಹ್ವಾನಿಸಲು ಮತ್ತೊಂದು ಉದ್ದೇಶವಿತ್ತು. ಶ್ರೀಕಂಠಯ್ಯನವರು ಸ್ತ್ರೀ ಉದ್ಧಾರ, ಸ್ತ್ರೀ ಸ್ವಾತಂತ್ರ್ಯದ ಬೆಂಬಲಿಗರು. ಸ್ತ್ರೀ ಪುರುಷ ಸಮಾನರು ಎಂದು ಅವರು ನಂಬಿದ್ದರು. ಈ ರೀತಿಯಾಗಿ ಆ ನಂಬುಗೆಯನ್ನು ಜಾರಿಗೊಳಿಸುತ್ತಿದ್ದರು. ಅಷ್ಟೆ.

ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳ ಕುರಿತ ಕೆಲಸಗಳಲ್ಲಿ ಶ್ರೀಕಂಠಯ್ಯನವರು ಆಳವಾಗಿ ತೊಡಗಿಕೊಂಡಿದ್ದರು. ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಎರಡನ್ನು ಕಲಿಸುತ್ತಿದ್ದ ಶ್ರೀಯವರಿಗೆ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಕ್ಕೆ ಮಾತ್ರ ಸಂಬಳ ದೊರೆಯುತ್ತಿತ್ತು. ಸ್ನಾತಕ ಹಾಗೂ ಸ್ನಾತಕೋತ್ತರ ಕ್ರಮಗಳ ಎಲ್ಲ

ವಿದ್ಯಾರ್ಥಿಗಳು ಇಂಗ್ಲಿಷ್ ಕಾವ್ಯ, ಗದ್ಯ ಹಾಗೂ ನಾಟಕ, ಈ ಎಲ್ಲ ವಿಭಜನೆಗಳಲ್ಲಿ ಒಂದೊಂದು ಕ್ರಮವನ್ನು ಆರಿಸಿಕೊಳ್ಳಲೇ ಬೇಕಾಗಿತ್ತು. ಹಿರಿಯ ತರಗತಿಗಳಿಗೆ ಶ್ರೀಕಂಠಯ್ಯನವರು ಯಾವಾಗಲೂ ಶೇಕ್ಸ್‌ಪಿಯರ್‌ನ ಸಾಹಿತ್ಯವನ್ನು ಹೇಳಿಕೊಡಲು ಇಷ್ಟ ಪಡುತ್ತಿದ್ದರು. ಮೈಸೂರು ಮಹಾರಾಜ ಕಾಲೇಜಿನ ಮಾನವಿಕ ಶಾಸ್ತ್ರದ ವಿದ್ಯಾರ್ಥಿಗಳಷ್ಟೇ ಬೆಂಗಳೂರಿನ ವಿದ್ಯಾರ್ಥಿಗಳೂ ಇಂಗ್ಲೀಷಿನಲ್ಲಿ ಆಸಕ್ತರಾಗಿರುವುದನ್ನು ಶ್ರೀಯವರು ಗಮನಿಸಿದರು. ೧೯೪೧ ಮತ್ತು ೧೯೪೩ರ ನಡುವಿನಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಹಾಗೂ ಎಂ.ಎ. ಕ್ರಮಗಳನ್ನು ಜಾರಿಗೆ ತರುವಂತೆ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವರ್ಗಕ್ಕೆ ಮನಗಾಣಿಸಿದರು.

೧೯೪೦ರಲ್ಲಿ ನಾನು ಬಿ.ಎಸ್ಸಿಯ ವಿದ್ಯಾರ್ಥಿಯಾಗಿದ್ದೆ. ಶ್ರೀಕಂಠಯ್ಯನವರು ಶೇಕ್ಸ್‌ಪಿಯರ್‌ನ 'ಮರ್ಚೆಂಟ್ ಆಫ್ ವೆನಿಸ್' ನಾಟಕವನ್ನು ಹೇಳಿಕೊಡುತ್ತಿದ್ದ ತರಗತಿಯಲ್ಲಿ ಅವರ ವಿದ್ಯಾರ್ಥಿಯಾಗಿ ನಾನೂ ಕುಳಿತಿದ್ದೆ. ಶ್ರೀಯವರು ಶೇಕ್ಸ್‌ಪಿಯರ್‌ನ ಅಭಿಪ್ರಾಯಗಳನ್ನು ವಿವರಿಸುತ್ತ ನಾಟಕದಲ್ಲಿ ಬರುವ ಪಾತ್ರಗಳನ್ನು ನಟಿಸಿ ತೋರುತ್ತಿದ್ದಾಗ ವಿದ್ಯಾರ್ಥಿಗಳೆಲ್ಲ ವಿಸ್ಮಿತರಾಗಿ ಕುಳಿತಿರುತ್ತಿದ್ದುದು ನಾನು ಮರೆಯುವಂತಿಲ್ಲ. ಈಗಲೂ ಶ್ರೀಕಂಠಯ್ಯನವರ ವಿದ್ಯಾರ್ಥಿಗಳು ಈ ಸಂಗತಿಗಳನ್ನು ಮೆಲುಕು ಹಾಕುತ್ತಾರೆ. ಕೆಲವು ದಿನಗಳ ಹಿಂದಷ್ಟೆ ಭೇಟಿ ಇತ್ತ ಅವರ ವಿದ್ಯಾರ್ಥಿಯೊಬ್ಬರು "ಸೆಂಟ್ರಲ್ ಕಾಲೇಜಿನಲ್ಲಿ ಪ್ರೊ.ಬಿ.ಎಂ.ಶ್ರೀಕಂಠಯ್ಯ ಹಾಗೂ ಪ್ರೊ. ಬಿ.ಎಸ್. ಮಾಧವ ರಾವ್, ಇವರಿಬ್ಬರನ್ನು ಮೀರಿಸಲು ಯಾರಿಂದಲೂ ಸಾಧ್ಯವಿರಲಿಲ್ಲ ಎಂದದ್ದುಂಟು. ನಾನೂ ಬಿ.ಎಸ್. ಮಾಧವರಾಯರ ಶಿಷ್ಯಳೆ. ಗಣಿತದಲ್ಲಿ ಪ್ರಬುದ್ಧ ಶಿಕ್ಷಕರೆನಿಸಿದ್ದರಲ್ಲದೆ ಅದೇ ವಿಷಯವಾಗಿ ಗಣನೀಯ ಸಂಶೋಧನೆಯನ್ನು ಮಾಧವರಾಯರು ನಡೆಸಿದ್ದಾರೆ.

ಬೆಂಗಳೂರಿನ ಸಾರ್ವಜನಿಕ ಸಂದರ್ಭದ ನಡುವಿನಲ್ಲಿ ಶೀಘ್ರವಾಗಿ ವಿಕಸಿಸುವಂತಹ ಕನ್ನಡದ ಕುರಿತ ಹಲವು ಯೋಚನೆಗಳು ಶ್ರೀಕಂಠಯ್ಯನವರ ಮನಸ್ಸಿನಲ್ಲಿ ಗೂಡು ಮಾಡಿದ್ದವು. ಇದಲ್ಲದೆ ಕನ್ನಡದ ಗೌರವ ಪ್ರಾಧ್ಯಾಪಕರಾಗಿ ಕನ್ನಡ ಕುರಿತು ಅನೇಕ ಹೊಸ ಹಾಗೂ ಹಳೆಯ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದರು. ಈ ಉಪನ್ಯಾಸಗಳಿಗೆ ಸೆಂಟ್ರಲ್ ಕಾಲೇಜಿನ ಗಣಿತ ವಿಭಾಗಕ್ಕೆ ಸೇರಿದ್ದ ವಿಶಾಲ ಸಭಾಂಗಣದಲ್ಲಿ ನಡೆಯುತ್ತಿದ್ದ ಈ ಕಾರ್ಯಕ್ರಮವು ಕೆಲವು ದಿನಗಳಲ್ಲೆ ಜನಪ್ರಿಯವಾಯಿತು. ಶ್ರೀಕಂಠಯ್ಯನವರು 'ಕರ್ನಾಟಕ ಸಾಹಿತ್ಯ ಪರಿಷತ್ತಿನ' ಮುಖ್ಯ ಸದಸ್ಯರಾದರು. ಸದಸ್ಯರಾದ ಸ್ವಲ್ಪ ದಿನಗಳಲ್ಲೆ ಪರಿಷತ್ತಿನ ಉಪಕಾರ್ಯದರ್ಶಿಗಳಾದ ಬಳಿಕ ಪರಿಷತ್ತು ಬಹಳಷ್ಟು ಪ್ರಶಂಸನೀಯ ಕೆಲಸಗಳನ್ನು ನೆರವೇರಿಸಿತು. ಕೈಗೊಂಡ ಈ ಕೆಲಸಗಳನ್ನು ಜನರು ಗುರುತಿಸಿದಂತೆಲ್ಲ ಶ್ರೀಕಂಠಯ್ಯನವರು ಹಾಗೂ ಪರಿಷತ್ತು ತತ್ಸಂಬಂಧ ನಾಮಗಳಂತಾಗಿ ಹೋದವು. ಭಾಷೆಯ ಏಳ್ಗೆಯ ಸಲುವಾಗಿ ಶ್ರೀಕಂಠಯ್ಯನವರು ಹಮ್ಮಿಕೊಳ್ಳುತ್ತಿದ್ದ ಹೊಸ ಯೋಜನೆಗಳು, ಕೆಲಸಗಳೂ, ಇವೆಲ್ಲವನ್ನೂ ಖಂಡಿಸುವ ಜನ ಎಂದಿನಂತೆ ಮುಂದೆ ಬಿದ್ದರೂ ಮಹಾರಾಜರನ್ನು ಮೊದಲ್ಗೊಂಡು ಸಾಕಷ್ಟು ಜನರ ಬೆಂಬಲ ಶ್ರೀಕಂಠಯ್ಯನವರ ಹತ್ತಿರ ಇದ್ದುದರಿಂದ ಅವರು ಅಷ್ಟಾಗಿ ಚಿಂತೆಗೀಡಾಗಲಿಲ್ಲ. ಇಷ್ಟು ಹೊತ್ತಿಗಾಗಲೇ ಶ್ರೀಕಂಠಯ್ಯನವರು ಕನ್ನಡಿಗರಿಗೆ ಪರಿಚಿತರೆನಿಸಿದ್ದರು. ಸೆಂಟ್ರಲ್ ಕಾಲೇಜಿನ ತಮಿಳು ಹಾಗೂ ತೆಲುಗು ವಿಭಾಗಗಳ ಅಧ್ಯಾಪಕರುಗಳೊಂದಿಗೆ ಸಾಹಿತ್ಯಿಕ ಚರ್ಚೆಗಳನ್ನು ಕೈಗೊಳ್ಳುತ್ತಿದ್ದರು. ಪ್ರಾಂಶುಪಾಲನಾದರೆ ವೃಥಾ ತಮ್ಮ ಮೇಲೆ ಆಡಳಿತದ ಜವಾಬ್ದಾರಿ ಬೀಳುವುದೆಂದು ಇದರಿಂದ ಕನ್ನಡ ಏಳ್ಗೆಗೆಂದು ಕೈಗೊಂಡಿದ್ದ ಕೆಲಸಗಳಿಗೆ ಅಡಚಣೆ ಉಂಟಾಗುವುದು ಎಂದು ಯೋಚಿಸಿದ ಶ್ರೀಯವರು ಪ್ರಾಂಶುಪಾಲರ ಹುದ್ದೆಯನ್ನೇ ನಿರಾಕರಿಸಿಬಿಟ್ಟರು.

ಬ್ರಿಟಿಷರ ಆಳ್ವಿಕೆಯ ಆ ದಿನಗಳಲ್ಲಿ ಕನ್ನಡ ಮಾತನಾಡುವ ಜನರು ಹೈದರಾಬಾದ್, ಮದ್ರಾಸ್, ಮೈಸೂರು ಹಾಗೂ ಬಾಂಬೆ, ಈ ಬೇರೆ ಬೇರೆ ಪ್ರಾಂತ್ಯಗಳಾಗಿ ಚದುರಿಹೋಗಿದ್ದವು. ಇದಲ್ಲದೆ ಕೊಡಗಿನಂತಹ ಪುಟ್ಟ ರಾಜ್ಯಗಳು ಮತ್ತು ಸಣ್ಣ ರಾಜರುಗಳ ಆಳ್ವಿಕೆಯಲ್ಲಿದ್ದ ಇನ್ನೂ ಕೆಲವು ಸಣ್ಣ ಊರುಗಳಲ್ಲಿ ಕನ್ನಡಿಗರು ಬೇರೂರಿದ್ದರು. ಶ್ರೀಕಂಠಯ್ಯನವರ ಹಿರಿಮೆ ಈ ಪ್ರದೇಶಗಳಿಗೂ ಹರಡಿತ್ತು. ಇಲ್ಲಿನ ಜನನಾಯಕರುಗಳು ತಮ್ಮ ಇಲಾಖೆಗೂ ಬಂದು ಭಾಷೆಯ ಕುರಿತಾಗಿ, ಕನ್ನಡದ ಘನತೆಯನ್ನು ಸುಧಾರಿಸುವ ರೀತಿಗಳ ಕುರಿತಾಗಿ, ತಮಗೆಲ್ಲ ಮಾರ್ಗದರ್ಶನ ನೀಡಬೇಕೆಂದು ಶ್ರೀಕಂಠಯ್ಯನವರನ್ನು ಆಹ್ವಾನಿಸಿದರು. ಮುಂಬೈನಲ್ಲಿದ್ದ ಧಾರವಾಡ, ಮದರಾಸು ಪ್ರಾಂತ್ಯದ ಮಂಗಳೂರು, ಹೈದರಾಬಾದ್‌ಗೆ ಸೇರಿದ ರಾಯಚೂರು, ಹಾಗೆ ಕೊಡಗಿನಲ್ಲಿ ಮಡಿಕೇರಿ ಈ ಸ್ಥಳಗಳಿಗೆಲ್ಲ ಶ್ರೀಕಂಠಯ್ಯನವರು ಭೇಟಿ ಇತ್ತು ಉಪನ್ಯಾಸಗಳನ್ನು ನೀಡುತ್ತಿದ್ದರಲ್ಲದೆ ಚರ್ಚೆಗಳಲ್ಲೂ ಭಾಗವಹಿಸುತ್ತಿದ್ದರು. ಕೆಲವೊಮ್ಮೆ ಒಂದೇ ದಿನದಲ್ಲಿ ಮೂರು ನಾಲ್ಕು ಉಪನ್ಯಾಸಗಳನ್ನು ನೀಡುತ್ತಿದ್ದರು. ತಮ್ಮ ಉತ್ಸಾಹ

ಚೈತನ್ಯಗಳಿಗೆ ಮಿತಿಯೇ ಇಲ್ಲವೆಂಬಂತೆ ದುಡಿದರು. ಇಂತಹ ಸಮಾವೇಶಗಳಲ್ಲಿ ವಿದ್ಯಾವಂತರು ಮಾತ್ರವಲ್ಲದೆ ಸುತ್ತಮುತ್ತಲಿನ ಊರುಗಳಿಂದ ಅಕ್ಷರಸ್ಥರು, ಅನಕ್ಷರಸ್ಥರು ಎಲ್ಲರೂ ಬಂದು ಭಾಗವಹಿಸುತ್ತಿದ್ದರು. ಹೀಗೆ ಕನ್ನಡ ಸಾಹಿತ್ಯದ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಚೂರು ಚೂರಾಗಿ ಹೋಗಿದ್ದ ಕನ್ನಡಿಗರನ್ನು ಏಕೀಕರಿಸುವ ಮಹತ್ಕಾರ್ಯದಲ್ಲೂ ಶಾಮೀಲಾದರು. ಕರ್ನಾಟಕ ಏಕೀಕರಣ ಚಳವಳಿಯ ಉದ್ಧಾರಕನಾಗಿ ಅವತರಿಸಿದರು.

ಮಹಾತ್ಮಗಾಂಧಿ, ಜವಾಹರ್‌ಲಾಲ್ ನೆಹರು ಮತ್ತಿತರ ರಾಜಕೀಯ ಮುಖಂಡರ ಹಾಗೆ ಶ್ರೀಕಂಠಯ್ಯನವರ ಮಾತುಗಳಲ್ಲಿ ರಾಷ್ಟ್ರೀಯ ಸಮಗ್ರತೆಯ ದೃಷ್ಟಿಕೋನವಿಲ್ಲ ಎಂಬ ಟೀಕೆಯನ್ನು ಅವರು ಎದುರಿಸಬೇಕಾಯಿತು. ಆದರೆ ಕರ್ನಾಟಕ ಏಕೀಕೃತವಾದರೆ ಪ್ರತಿ ಕನ್ನಡಿಗನು ನಾಡಿನ ಉತ್ತಮ ಭವಿಷ್ಯಕ್ಕಾಗಿ ಕಾರ್ಯಶೀಲನಾಗುತ್ತಾನೆ. ಕನ್ನಡ ನಾಡು ದೇಶಕ್ಕೆ ಮಾದರಿಯಾಗುತ್ತದೆ. ಈ ಪ್ರೇರಣೆ ಪ್ರತಿ ಭಾರತೀಯನಲ್ಲೂ ಕಂಡು ಸಮಗ್ರತೆಯ ಚಳವಳಿ ಇನ್ನೂ ಬಲಿಷ್ಟವಾಗುತ್ತದೆ ಎಂಬುದು ಶ್ರೀಯವರ ಚಿಂತನೆ.

ಶ್ರೀಕಂಠಯ್ಯನವರಿಗೆ ಇಂಗ್ಲಿಷ್ ಅಚ್ಚುಮೆಚ್ಚು. ಇಂಗ್ಲಿಷಿನವರ ದೇಣಿಗೆಗಳನ್ನು ಅವರು ಮುಕ್ತವಾಗಿ ಪ್ರಶಂಸಿಸುತ್ತಿದ್ದರು. ಅವರುಗಳಿಂದ ಭಾರತೀಯರು ಕಲಿಯುವುದು ಬಹಳಷ್ಟಿದೆ ಎಂದು ಶ್ರೀಯವರು ನಂಬಿದ್ದರು. ಸ್ವಾತಂತ್ರ್ಯ ಪಡೆಯುವುದು ದೊಡ್ಡದಲ್ಲ. ಅದನ್ನು ಉಳಿಸಿಕೊಳ್ಳತಕ್ಕ ಮನೋಬಲವನ್ನು ಭಾರತೀಯನು ಬೆಳೆಸಿಕೊಳ್ಳಬೇಕೆಂಬುದು ಅವರ ಚಿಂತನೆ. ಮೈಸೂರಿನ ಮಹಾರಾಜರು ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರು ಶ್ರೀಕಂಠಯ್ಯನವರ ಕೆಲಸಗಳನ್ನು ಎಷ್ಟರ ಮಟ್ಟಿಗೆ ಮೆಚ್ಚಿದ್ದರೆಂದರೆ ಅವರ ಪ್ರಾಧ್ಯಾಪಕರ ಸೇವೆಯನ್ನು ಐದು ವರ್ಷಗಳು ಮುಂದೂಡಿದರು. ೫೫ ವರ್ಷಗಳಿಗೆ ನಿವೃತ್ತರಾಗಬೇಕಾದವರು ಅರುವತ್ತು ವರ್ಷಗಳವರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

೧೯೪೪ರಲ್ಲಿ ಶ್ರೀಕಂಠಯ್ಯನವರ ಷಷ್ಟ್ಯಬ್ದ ಪೂರ್ತಿ ಸಮಾರಂಭವನ್ನು ಪರಿವಾರದವರೆಲ್ಲಾ ಆಚರಿಸಿದರು. ಸಮಾರಂಭ ಜರುಗಿದ ಮುಂದಿನ ದಿನವೆ ಧಾರವಾಡಕ್ಕೆ ಹೊರಟು ಅಲ್ಲಿನ ನೂತನ ಕಾಲೇಜೊಂದರ ಪ್ರಾಂಶುಪಾಲರಾಗಿ ವೃತ್ತಿ ಆರಂಭಿಸಿದರು. ಆರೋಗ್ಯ ಹತೋಟಿಯಲ್ಲಿಲ್ಲದಿರುವಾಗ ಮತ್ತೊಂದು ಕೆಲಸಕ್ಕೆ ಕೈ ಹಾಕುವುದು ಉಚಿತವಲ್ಲ ಎಂದು ಸ್ನೇಹಿತ ಕೆಲವರು ನೀಡಿದ ಸಲಹೆಯನ್ನು ತಿರಸ್ಕರಿಸಿಬಿಟ್ಟರು. ಶಾರದ ಹಾಗೂ ತಮ್ಮಯ್ಯ ತಂದೆಯೊಡನೆ ಧಾರವಾಡಕ್ಕೆ ಹೊರಟರು. ತಂಗ ತನ್ನ ಪರಿವಾರದೊಂದಿಗೆ ಹೈದರಾಬಾದಿನ ಬಳಿ ವಾಸವಾಗಿದ್ದಳು. ಶಾರದಾಳ ಮಕ್ಕಳು ಮೈಸೂರಿನಲ್ಲೇ ಉಳಿದರು. ವಿಶಾಲಾಕ್ಷಿ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿದ್ದಳು. ಶ್ರೀಕಂಠ ಮೈಸೂರಿನ ವೈದ್ಯಕೀಯ ಕಾಲೇಜಿಗೆ ಸೇರಿದ್ದ.

ಧಾರವಾಡದಲ್ಲಿ ಶ್ರೀಯವರು ಹೊಸ ಕಾಲೇಜಿನ ಸ್ಥಾಪನಾ ಕಾರ್ಯದಲ್ಲಿ ಬಹಳ ಉತ್ಸಾಹದಿಂದ ತೊಡಗಿಕೊಂಡರು. ಒಂದುವರೆ ವರ್ಷಗಳು ಕಳೆದಿತ್ತು. ಬಿಡುವಿಲ್ಲದ ಕೆಲಸಗಳಿಂದ ಶ್ರೀಕಂಠಯ್ಯನವರ ಆರೋಗ್ಯಕ್ಕೆ ಹಾನಿ ಉಂಟಾಗಿತ್ತು. ಮಧುಮೇಹ ಮತ್ತು ಅತಿರಕ್ತ ಒತ್ತಡಗಳಿಂದ ಹೃದಯ ಬಲಹೀನವಾಗಿತ್ತು. ದೇಹ ಶಕ್ತಿ ಕಡಿಮೆಯಾಗಿತ್ತು. ಮನೆಯಲ್ಲಿ ತಮ್ಮ ಉಪಾಂತಕರೊಬ್ಬರೊಡನೆ ಯಾವುದೋ ಮುಖ್ಯವಾದ ವಿಷಯವನ್ನು ಚರ್ಚಿಸುತ್ತಿದ್ದ ಸಮಯದಲ್ಲಿ ತೀವ್ರ ಹೃದಯಾಘಾತ ಸಂಭವಿಸಿತು. ೧೯೪೬ರ ಮಧ್ಯಕಾಲದಲ್ಲಿ ಅವರು ತಮ್ಮ ಕೊನೆಯುಸಿರಳೆದರು. ಈಗ ಅವರ ವಯಸ್ಸು ೬೦ ವರ್ಷಗಳ ಸುಮಾರು. ಜೀವನದುದ್ದಕ್ಕೂ ಎಂದೂ ಮೈಗಳ್ಳರಾಗದೆ, ವಿಶ್ರಾಂತಿ ಬಯಸದೆ ಬದುಕಿನುದ್ದಕ್ಕೂ ಕಂಡ ದುಃಖಗಳನ್ನು ಒತ್ತಿ ಹಿಡಿದು ತಮಗೆ ಸಾಧ್ಯವಾದಷ್ಟು ಧ್ಯೇಯಾಕಾಂಕ್ಷೆಗಳನ್ನು ಸಾಧಿಸಿದರು. ಮಿತ ಭಾಷಿಗರಾದರು. ತಮಗನ್ನಿಸಿದ್ದನ್ನು ತಕ್ಕ ರೀತಿಯಲ್ಲಿ ಪೂರೈಸುವ ಛಲಗಾರರಾಗಿದ್ದರು. ಶ್ರೀಕಂಠಯ್ಯನವರು ವಿಶಾಲ ಹೃದಯಿಗಳು. ಅವರು ಕಾಲ ಮೀರಿದ ಚಿಂತನ ಪ್ರಜ್ಞೆ ತಾಳಿದವರು. ಅರ್ಥವಿಲ್ಲದ ಆಚರಣೆಗಳಿಗೆ, ಮೂಢನಂಬಿಕೆಗಳಿಗೆ ಸದಾ ವಿರೋಧಿಸಿದವರು. ಕನ್ನಡದ ಉದ್ಧಾರ ಮತ್ತು ಕನ್ನಡಿಗರ ಏಕೀಕರಣ ಕೆಲಸಗಳಲ್ಲಿ ತಮ್ಮ ಸೇವೆಯನ್ನು ಗುರುತಿಸಿ ಕನ್ನಡ ಜನರು ಅವರಿಗೆ 'ಕನ್ನಡ ಕಣ್ವ' ಎಂದು ಬಿರುದು ಸಲ್ಲಿಸಿ ಗೌರವಿಸಿದರು.

೩ನೇ ಜನವರಿ ೧೯೮೪ರಲ್ಲಿ ಬೆಂಗಳೂರಿನಲ್ಲಿ ನಡೆದ ಬಿ.ಎಂ.ಶ್ರೀ. ಯವರ ಜನ್ಮಶತಾಬ್ದಿ ಬೃಹತ್ ಸಮಾರಂಭದಂದು ಹಾಗೂ ವಿದ್ಯಾರ್ಥಿಗಳು ತಮ್ಮ ವಿಷಯವಾಗಿ ಬರೆದ ಲೇಖನಗಳು ಪುಸ್ತಕದ ರೂಪದಲ್ಲಿ ಬಿಡುಗಡೆ ಮಾಡಲಾಯಿತು. ತಂದೆ ಮೈಲಾರಯ್ಯನವರ ಹುಟ್ಟೂರಾದ ಬೆಳ್ಳೂರಿನ ಗ್ರಾಮಸ್ಥರು ಶ್ರೀಯವರ ಸ್ಮಾರಕವಾಗಿ ಒಂದು ಗ್ರಂಥಾಲಯವನ್ನು ನಿರ್ಮಿಸಿದ್ದಾರೆ. ೩ನೇ ಜನವರಿ ೧೯೮೫ರಲ್ಲಿ ಸಂಪಿಗೆಯ ಗ್ರಾಮಸ್ಥರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸಿದ್ದೆ. ೧೯೮೪ರ ಉದ್ದಕ್ಕೂ ದೇಶದೆಲ್ಲೆಡೆಯಲ್ಲಿ ಕನ್ನಡಿಗರು ಶ್ರೀಯವರ

ಸ್ಮರಣಾರ್ಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಕೆಲ ವರ್ಷಗಳ ಹಿಂದಷ್ಟೆ ಶ್ರೀಯವರ ಗೌರವಾರ್ಥ ಬೆಂಗಳೂರಿನ ಇಂದಿರಾನಗರ ಬಡಾವಣೆಯ ಪ್ರಮುಖ ಬೀದಿಯೊಂದರಲ್ಲಿ ಬಿ.ಎಂ.ಶ್ರೀ. ವೃತ್ತವನ್ನು ನಿರ್ಮಿಸಿದ್ದಾರೆ. ಬೆಂಗಳೂರಿನ ಬಸವನ ಗುಡಿ ನ್ಯಾಷನಲ್ ಕಾಲೇಜು ವೃತ್ತದ ಬಳಿ ಬಿ.ಎಂ.ಶ್ರೀ. ಅವರ ಪ್ರತಿಮೆಯನ್ನು ಅನಾವರಣಗೊಳಿಸಿದ್ದಾರೆ. ಇಲ್ಲಿಂದ ಸಮೀಪ ದಲ್ಲೇ ಶ್ರೀಯವರು ವಾಸವಾಗಿದ್ದರು. ಅವರು ವಾಸವಾಗಿದ್ದ ಮನೆಯು ಇನ್ನೂ ಹಾಗೆಯೇ ಉಳಿದಿದೆ.

ಬಿ.ಎಂ.ಶ್ರೀ. ಪ್ರತಿಷ್ಠಾನವೆಂಬ ಸಂಘವು ಸ್ಥಾಪಿತಗೊಂಡಿದೆ. ವರ್ಷದುದ್ದಕ್ಕೂ ಕನ್ನಡ ಹಾಗೂ ಸಂಬಂಧಿತ ವಿಷಯಗಳ ಕುರಿತು ಉಪನ್ಯಾಸಗಳನ್ನು ಈ ಸಂಘವು ಏರ್ಪಡಿಸುತ್ತ ಬಂದಿದೆ. ನನ್ನ ಚಿಕ್ಕಪ್ಪ ಕೃಷ್ಣಸ್ವಾಮಿಯವರ ಮಗಳು ಅನಸೂಯ 'ತ್ರಿವೇಣಿ' ಎಂಬ ಕಲ್ಪಿತನಾಮದಿಂದ ಜನಪ್ರಿಯ ಕಾದಂಬರಿಕಾರಳಾದಳು. ಅನಸೂಯಳ ಅನೇಕ ಕಾದಂಬರಿಗಳು ಚಲನಚಿತ್ರಗಳಾಗಿ ತೆರೆ ಕಂಡಿವೆ. ಅವಳ ತಂಗಿ ಆರ್ಯಾಂಬ ಪಟ್ಟಾಭಿ ಕೂಡ ಪ್ರಸ್ತುತದಲ್ಲಿ ಜನಪ್ರಿಯ ಕಾದಂಬರಿಕಾರಳೆನಿಸಿದ್ದಾಳೆ. ಶ್ರೀಯವರ ಮೊಮ್ಮಗಳು ವಿಶಾಲಾಕ್ಷಿಯು ಕೂಡ ಕನ್ನಡ ಹಾಗೂ ಇಂಗ್ಲಿಷುಗಳಲ್ಲಿ ಲೇಖನ ಗಳನ್ನು ಬರೆದಿದ್ದಾರೆ.

ನನ್ನ ಹೆಸರು ರಾಜೇಶ್ವರಿ 'ಚಟರ್ಜಿ' ಎಂಬುದಾದ್ದರಿಂದ ನಾನು ಬಂಗಾಳದವಳು ಎಂದು ಜನ ತಪ್ಪು ತಿಳಿದುಬಿಡುತ್ತಾರೆ. ಇದೆ ಕಾರಣಕ್ಕಾಗಿ ನಾನು ಕರ್ನಾಟಕದಲ್ಲಿ ಎಲ್ಲೆ ಹೋದರು ಅಲ್ಲಿನ ಜನ ನಾನು ಕನ್ನಡ ಮಾತನಾಡುವುದನ್ನು ಕೇಳಿ ಕೌತುಕ ರಾಗುತ್ತಾರೆ. ನಾನು ಬಿ.ಎಂ.ಶ್ರೀ.ಯವರ ಸೋದರ ಮಗಳು ಎಂದು ತಿಳಿದೊಡನೆಯೇ ಅತ್ಯಂತ ಗೌರವಾದರಗಳಿಂದ ಉಪಚರಿಸಿದ ಎಷ್ಟೋ ಸಂದರ್ಭಗಳು ಸವಿನೆನಪುಗಳಾಗಿ ಉಳಿದಿವೆ. ಬಿ.ಎಂ.ಶ್ರೀ.ಯವರು ಕನ್ನಡ ನಾಡಿನ ಏಕೀಕರಣವನ್ನು ಕಾಣುವ ಪೂರ್ವದಲ್ಲೇ ಆಸು ನೀಗಿದರು. ನಾನು ಅವರ ಸಂಬಂಧಿಕಳು ಎಂದು ಹೇಳಿಕೊಳ್ಳುವುದು ನನಗೆ ಬಹಳ ಹೆಮ್ಮೆಯ ಸಂಗತಿಯಾಗಿದೆ. ನನ್ನಂತೆಯೇ ಕರ್ನಾಟಕದ ಎಲ್ಲೆಡೆ ಕನ್ನಡಿಗರ ಮನದಲ್ಲಿ ಬಿ.ಎಂ.ಶ್ರೀ. ಶಾಶ್ವತವಾಗಿ ನೆಲೆಸಿದ್ದಾರೆ.

❑

"ಕನ್ನಡಿಗರೆ, ಏಳಿ, ಎಚ್ಚರಗೊಳ್ಳಿ, ಆರಂಬಮಾಡಿ. ಹಿಂದೆ ಯುರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮ ವುಂಟಾದಾಗ, ಒಬ್ಬ ಮಹಾ ಪಂಡಿತನು- 'ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ' ಎಂದು ಘೋಷಿಸಿದನು. ನಾವು ಕನ್ನಡಿಗರು, ಇಂದು ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು."

* * *

ಈ ಪ್ರಪಂಚದಲ್ಲಿ ನಿರ್ದುಷ್ಟವಾದದ್ದು ಪರಿಪೂರ್ಣವಾದದ್ದು ಯಾವುದೂ ಇಲ್ಲ. ಎಲ್ಲದರಲ್ಲೂ ಒಂದು ಸತ್ವವಿದೆ, ಒಂದು ವೈಶಿಷ್ಟ್ಯವಿದೆ; ಹಾಗೆಯೇ ಕೊರತೆಯಿದೆ, ಕಲ್ಮಷವಿದೆ.

* * *

ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ.

* * *

ಚಿನ್ನದೊಡನೆ ಕೂಡುವುದು ಚಿನ್ನ-ಹಿತ್ತಾಳೆಯಲ್ಲ; ಪಾದರಸದೊಡನೆ ಹೊಂದಿಕೊಳ್ಳುವುದು ಪಾದರಸ, ಕಸವಲ್ಲ. ತೂರಬೇಕು, ಸೋಸಬೇಕು, ಒರೆಗಲ್ಲಿಗೆ ತೀಡಬೇಕು, ನೋಡಬೇಕು.

- *ಬಿ.ಎಂ.ಶ್ರೀ.*

ನೆನಪಿನಂಗಳದಲ್ಲಿ "ಶ್ರೀ"

● ಕಾ.ಪ. ವಿಜಯಕುಮಾರ್

ಕನ್ನಡ ಪಠ್ಯಪುಸ್ತಕದ ಮುನ್ನುಡಿಯಲ್ಲಿ ಉಪಾಧ್ಯಾಯರುಗಳಿಗೆ ಸೂಚನೆ ಎಂಬಲ್ಲಿ "ಕನ್ನಡ ಶಬ್ದಗಳು ಪದಪುಂಜಗಳು ಮಕ್ಕಳ ಬಾಯಲ್ಲಿ ಹುರುಳಿ ಉರಿದಂತೆ ಉತ್ಸಾಹದಿಂದ ನಲಿದು ನುಡಿಯಲು ಕಲಿಸಿ" ಎಂದು ಸೂಚಿಸಿ ಮುಂದುವರಿದು "ಒಟ್ಟಿನಲ್ಲಿ ಕನ್ನಡ ನಾಡಿನ ಚಿನ್ನದಂತಹ ಮಕ್ಕಳು ನಿಮ್ಮ ಕೈಯ್ಯಲ್ಲಿವೆ. ಹೆಚ್ಚು ಹೊರೆಯನ್ನು ಹೇಳದೆ ನಲಿಸಿ ಕಲಿಸಿ" ಎಂದು ಪರಿಸಮಾಪ್ತಿ ಮಾಡಿದ್ದಾರೆ. ಈ ಮಾತುಗಳನ್ನು ಕನ್ನಡ ಪರಿಸರದ ಕನ್ನಡ ಅಭಿಮಾನಿಗಳಾದ ನನ್ನ ಹಿರಿಯರು ಓದಿ ಹೇಳಿದ್ದಾರೆ. ಇದು ನನ್ನ ಚಿಕ್ಕವಯಸ್ಸಿನಲ್ಲಿ ಹಳ್ಳಿಯಲ್ಲಿ ಓದುತ್ತಿದ್ದಾಗ ಕೇಳಿದ ನೆನಪು.

ಬಿ.ಎಂ.ಶ್ರೀ. ಅವರ ಮಾತು "ಮೊದಲು ತಾಯ ಹಾಲ ಕುಡಿದು ಲಲ್ಲೆಯಿಂದ ತೊದಲಿ ನುಡಿದು ಎಳೆಯರೊಡನೆ ಬೆಳೆದು ಬಂದ ನುಡಿಯದಾವುದು? ನಲ್ಲೆಯೊಲವ ತೆರೆದು ತಂದ ಮಾತದಾವುದು?

ಕನ್ನಡ ನುಡಿ ನಮ್ಮ ಹೆಣ್ಣು ನಮ್ಮ ತೋಟದಿನಿಯ ಹಣ್ಣು
ಬಳಿಕ ಬೇರೆ ಬೆಳೆದ ಹೆಣ್ಣು ಬಳಿಗೆ ಸುಳಿದಳು
ಹೊಸದು ರಸದ ಬಳ್ಳಿ ಹಣ್ಣು ಒಳಿಗೆ ಸುಳಿದಳು
ಹೀಗೆ ನನಗೆ ಹಬ್ಬವಾಗಿ ಇನಿಯರಿಬ್ಬರನ್ನು ತೂಗಿ
ಅವಳ ಉಡುಪ ಇವಳಿಗಿಟ್ಟು ನೋಡಬಯಸಿದೆ
ಇವಳ ತೊಡಿಗೆ ಅವಳಿಗಿಟ್ಟು ಹಾಡಬಯಸಿದೆ.

ಈ ನುಡಿಗಳು ಇಂದಿಗೂ ನನ್ನ ಕಿವಿಯಲ್ಲಿ ಗುಯ್ಗುಟ್ಟುತ್ತಿವೆ. ಈ ನುಡಿಗಳಿಂದ ಪಡೆದ ಸ್ಫೂರ್ತಿಯಿಂದ ಕೈಲಾಸಂ ಅದನ್ನು ಮಾಡಿ ತೋರಿಸಿದ್ದಾರೆ

ನಂತರದ ದಿನಗಳಲ್ಲಿ ಬಿ.ಎಂ.ಶ್ರೀ. ಯವರು ಹಂಪೆಗೆ ಹೋಗಿ ಅಲ್ಲಿ "ಕನ್ನಡಮ್ಮನನ್ನು ಕಂಡರು. ಅವಳು "ನಾನೊಬ್ಬ ಹಳೆಯ ಮುತ್ತೈದೆ ಹಿಂದೊಮ್ಮೆ ಹಿರಿದಾಗಿ ಬಾಳಿದೆನು" ಎಂದಂತಾಯಿತು. ಅವಳ "ಅಳಲನಾರಿಸ ಬಯಸಿ ನಾನೆಂದೆ ಏಕಮ್ಮ - ಮಕ್ಕಳಲಿ ಇನಿಸೊಂದು ಕಡುಮುನಿಸು ಬಾರಮ್ಮಾ ಹರಸು, ಆ ಕೊಂಬೆ ಕರಗಿದೊಡೆ ಈ ಕೊಂಬೆ ಬಿಳಿಲಿಳಿದು ಒಂದೇ ಮರ ಅಮರವಾಗಿರ್ಪಂತೆ ಇನ್ನುಂ ಅದೆ ಇಹುದು ಮತ್ತೊಮ್ಮೆ ತೇರನೇರು ಬಾ ತಾಯೆ ಹರಸು" ಎಂದಾಗ ಮದುಕಿ ಹುಡುಗಿಯ ತೆರದಿ ನಸುನಕ್ಕಳಾ ಕನ್ನಡದ ತಾಯಿ ದಾರಿ ಬಿಡಿ ದಾರಿ ಬಿಡಿ ಕನ್ನಡದ ತೇರು ಹರಿದು ಬರುತ್ತಿದೆ. ಎಂದ ಬಿ.ಎಂ.ಶ್ರೀ. "ಕನ್ನಡ ತಾಯ ನೋಟ" ಎಂಬ ಕವನದಲ್ಲಿ ಕನ್ನಡದ ತೇರು ಸಾಗಿದೆ. ನನ್ನ ನೆನಪಿನಲ್ಲಿ ಉಳಿದಿರುವಂತೆ ಶ್ರೀಯವರ "ಅಶ್ವತ್ಥಾಮನ್" ಕನ್ನಡಕ್ಕೆ ಹೊಸ ತಿರುವು ತಂದ ನಾಟಕ ಭಾಸಕವಿ ಸಂಸ್ಕೃತ ನಾಟಕಕ್ಕೆ ಹೊಸ ತಿರುವು ನೀಡಿದಂತೆ ಕನ್ನಡ ನಾಟಕಕ್ಕೇ ಹೊಸ ತಿರುವು ಇದು.

ಕೋಟೆ ಪ್ರೌಢಶಾಲೆಯಲ್ಲಿ ಮೊದಲನೇ ತರಗತಿಯಲ್ಲಿ ಓದುತ್ತಿದ್ದಾಗ ಪರೀಕ್ಷೆಯಲ್ಲಿ ಬಿ.ಎಂ.ಶ್ರೀ. ಅವರನ್ನು "ಕನ್ನಡದ ಕಣ್ವ" ಎಂದು ಏಕೆ ಕರೆದಿದ್ದಾರೆ? ಈ ಮಾತು ಅವರಿಗೆ ಹೇಗೆ ಒಪ್ಪುತ್ತದೆ? ಎಂಬ ಪ್ರಶ್ನೆ ಬಂದಿತ್ತು.

ಕನ್ನಡ ಮೂಲೆ ಗುಂಪಾಗಿ ಅಸಡ್ಡೆಗೆ ಒಳಗಾಗಿ ಬಿದ್ದಿದ್ದಾಗ ಅದನ್ನು ಎತ್ತಿ ಪೋಷಿಸಿದ ಕವಿ ಬಿ.ಎಂ.ಶ್ರೀ. ಅವರನ್ನು "ಕಣ್ವ" ಎಂದು ಕರೆದದ್ದು ಶಕುಂತಲೆಯನ್ನು ಪೋಷಿಸಿದ ಕಣ್ವರಿಗೆ ಹೋಲಿಸಿದ್ದು ಸಮಂಜಸವಾಗಿದೆ ಎಂದು ಅದನ್ನೇ ವಿಸ್ತರಿಸಿ ಬರೆದದ್ದು ನೆನಪಿದೆ.

ಮೈಸೂರಿನಲ್ಲಿ ವರ್ಧಮಾನಯ್ಯನವರ ವಿದ್ಯಾರ್ಥಿ ನಿಲಯ ಪ್ರಸಿದ್ಧವಾಗಿದ್ದು ಅಲ್ಲಿಗೆ ಬಿ.ಎಂ.ಶ್ರೀ. ಅವರನ್ನು ಬರಮಾಡಿ ಕೊಂಡಿದ್ದರು. ಆಗಾಗ ಕನ್ನಡ ಸಾಹಿತ್ಯದಲ್ಲಿ ಜೈನ ಕವಿಗಳು ಹರಿಸಿದ ಕನ್ನಡ ಸಾಹಿತ್ಯ ಸುಧೆಯ ಪರಿಚಯ ಮಾಡಿ ಕೊಡುವ ಕೃಪೆ ಅವರಿಂದ ಆಗುತ್ತಿತ್ತು.

"ಬೆಳಗುವೆನಿಲ್ಲಿ ಜಿನಾಗಮಮಂ ಅಲ್ಲಿ ಲೌಕಿಕಮಂ" ಎಂದ ಪಂಪಕವಿ. ಆದಿಪುರಾಣ ಹಾಗೂ ವಿಕ್ರಮಾರ್ಜುನ ವಿಜಯ

ಎಂಬ ಕಾವ್ಯಗಳು "ಮನುಜ ಕುಲ ತಾನೊಂದೆ ವಲಂ" ಎಂಬ ಮಾತನ್ನು ಕಾವ್ಯದಲ್ಲಿ ಬಿತ್ತರಿಸಿದ ಪಂಪ ಪಸರಿಪ ಕನ್ನಡ ಕೊಡೆಯನೋರ್ವನೆ ಪಂಪಂ ಆವಗಮ್ ಎಂಬ ಹಿರಿಮೆಗೆ ಪಾತ್ರನಾದ ಪಂಪ "ರನ್ನನಿರುವ ಕನ್ನಡಕ್ಕೆ ಅನ್ಯರಿಂದ ಬಹುದೆ ಧಕ್ಕೆ? ಬರಿಯ ನುಡಿಯೆ? ಸಿಡಿಲ ಚಕ್ಕೆ ಎಂಬ ನುಡಿಗೆ ಪಕ್ಕಾದ ರನ್ನ "ತಾಂ ರತ್ನಪರೀಕ್ಷನೆಂದು ಫಣಿಪತಿಯ ಪಣಾರತ್ನಮಂ ರನ್ನನ ಕೃತಿ ರತ್ನಮಂ ಪರಿಕಿಸಂಗೆ ಎಂಟೆರ್ದೆಯೇ? ಎಂದು ವಿಜ್ರಂಭಿಸಿದ ರನ್ನ ಇವರನ್ನು ವಿದ್ಯಾರ್ಥಿನಿಲಯಕ್ಕೆ ಪರಿಚಯಿಸಿದ ಬಿ.ಎಂ.ಶ್ರೀ. ಮಹದುಪಕಾರ ಮಾಡಿದ್ದಾರೆ.

ವಿಶ್ವಕೋಶದ ಅಧಿಕಾರಿಯಾಗಿದ್ದ ಕಾ.ಸ. ಧರಣೇಂದ್ರಯ್ಯ, ಲಕ್ಷ್ಮೀಪತಯ್ಯ ಹಾಗೂ ಚೀಫ್ ಜಸ್ಟೀಸ್ ಆಗಿದ್ದ ಪದ್ಮನಾಭಯ್ಯ ಇವರೆಲ್ಲಾ ವರ್ಧಮಾನಯ್ಯನವರ ವಿದ್ಯಾರ್ಥಿ ನಿಲಯದಿಂದ ವರ ಪಡೆದವರು "ಬಿ.ಎಂ.ಶ್ರೀ- ಅವರನ್ನು ಕರ್ನಾಟಕ ವಿಶ್ವ ವಿದ್ಯಾನಿಲಯ ಬರಮಾಡಿಕೊಂಡಿತು" ಅಲ್ಲಿ ವಿಶ್ರಾಂತಿ ಸಿಕ್ಕಬಹು ದೆಂದು ಯೋಚಿಸಿದ್ದೆವು. ಆದರೆ ಮೇಸ್ಟು ಕನ್ನಡಪ್ರಚಾರ (ಉತ್ತರ ಕರ್ನಾಟಕದಲ್ಲಿ) ಕೈಗೆತ್ತಿಕೊಂಡು ಬೇಗ ಜೀವನ ಕೊನೆಗೊಳಿಸಿ ದರು" ಎಂದು ಮಾಸ್ತಿಯವರು ಬೆಳ್ಳೂರಿನಲ್ಲಿ ಹೇಳಿದ್ದು ನೆನಪಿದೆ.

ಬಿ.ಎಂ.ಶ್ರೀ. ಅವರು ನೀಡಿದ 'ಇಂಗ್ಲೀಷ್ ಗೀತಗಳು' ಕನ್ನಡಕ್ಕೆ ಹೊಸ ಆಯಾಮ ನೀಡಿದ ಕೃತಿ, ಅವರ ಲೀಡ್ ಕೈಂಡ್ಲಿ ಲೈಟ್ ಎಂಬ ಕವನ ಬಹಳ ಪ್ರಸಿದ್ಧ 'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲ್ಲಿ ಕೈಹಿಡಿದು ನಡೆಸೆನ್ನದು" "ಇರುಳು ಕತ್ತಲೆಯ ಕವಿ ಮನೆದೂರ ಕೈಹಿಡಿದು ನಡೆಸೆನ್ನನು" ಎಂಬ ಕವನವು ಪ್ರಸಿದ್ಧವಾದದ್ದು.

ಇಳೀ ವಯಸ್ಸಿನಲ್ಲಿರುವ ನಾನು ನನ್ನ ಜೊತೆಯವರಲ್ಲಿ ಅನೇಕರನ್ನು ಕಳೆದುಕೊಂಡಿದ್ದೇನೆ ಈಗ ನೆನಪಿಗೆ ಬರುವುದು ಶ್ರೀಯವರ ಇಂಗ್ಲೀಷ್ ಗೀತೆ "ಮೈ ಫೆಮಿಲಿಯರ್ ಫೇಸಸ್ ಆರ್‌ಗಾನ್" ಭಾಷಾಂತರದಲ್ಲಿ "ಹೊಳೆದು ಹೋದವು ಅಳಿದು ಹೋದವು ಹಳೆಯ ಪಳಕೆಯ ಮುಖಗಳು" ನೆನಪಾಗುತ್ತದೆ. "ಎಲೆ ಮುಪ್ಪೆ ದೂರ ಸರಿ ನನ್ನವಳು ಇನ್ನೂ ಚಿಕ್ಕವಳು" ಚಿಕ್ಕ ವಯಸ್ಸಿನ ಹೆಂಡತಿಯನ್ನು ಹೊಂದಿದ ಗಂಡ ಹೇಳುವ ಮಾತಿದು. ಇವು ಬಿ.ಎಂ.ಶ್ರೀ. ಲೇಖನಿಯಲ್ಲಿ ಮೂಡಿ ಸಾರ್ಥಕವಾಗಿವೆ.

ಬಿ.ಎಂ.ಶ್ರೀಯವರ :

ಗಂಧದ ಗುಡಿ ಇದು ಮೈಸೂರು
ವೀಣೆಯ ಬೆಡಗಿದು ಮೈಸೂರು
ಇಳೆಗೆ ಮಾದರಿ ಇದು ಮೈಸೂರು
ಕನ್ನಡಿಗನ ಕಣ್ಣಿದು ಮೈಸೂರು
ನಾಲ್ಮಡಿ ಕೃಷ್ಣನ ಮೈಸೂರು

ಅಲ್ಲೊಬ್ಬ ನಮಗಿಹನು ನಾಯಕನು ಭಕ್ತಿಯಲಿ ನಿಲುನಿಲುಕಿ
ಕಣ್ತುಂಬ ನೋಡುತ್ತಿರಲು

ಆನೆಂಬಾರಿಯಲಿ ನಸುನಗೆಯ ಇಕ್ಕೆಲಕೆ ಬೀರಿ ಜನರಕ್ಕರೆಯ
ನುಕ್ಕಿಸುವನು ಪ್ರಜೆಯ ತಂದೆ

ಮೈಸೂರು ಬಗೆಗಿನ ಒಲುವು ಹಾಗೂ ರಾಜಭಕ್ತಿಗಳನ್ನು ಬಿತ್ತರಿಸುವ ನುಡಿಗಳಿವು. ಈ ಬಗೆಗಿನ ಭಾಷೆ ನನ್ನ ನೆನಪಿನ ಬಗೆಯಿಂದ ಹಾಗೆ ಉಳಿದು ಧುಮುಕುತ್ತಿದೆ. ಕನ್ನಡ ನಾಡಿನ ಹೆಮ್ಮೆಯ, ಪಡಿ ನುಡಿಯ ಹಿರಿಯ ಹೆಮ್ಮೆಯ ಕವಿ, ಬಿ.ಎಂ.ಶ್ರೀ. ❑

ಕನ್ನಡವನ್ನು ನಂಬಿ; ಕನ್ನಡವನ್ನು ಕೈ ಹಿಡಿಯಿರಿ.

* * *

ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂನಾಸ್ತಿ. ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ.

* * *

ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸೋಣ. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ವೃದ್ಧಿಯಾಗುತ್ತಾಳೆ.

- ಬಿ.ಎಂ.ಶ್ರೀ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ನಡೆದು ಬಂದ ದಾರಿ

● *ಪ್ರೊ. ಎನ್. ಗೀತಾಚಾರ್ಯ*

"ದೇಶದಲ್ಲಿ ಹುಳು ತಿಂದುಹೋಗದೆ ಇರುವ ಗ್ರಂಥಗಳನ್ನೆಲ್ಲ ಒಂದೆಡೆ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕಿಸಿ ಕಾಲಕಾಲಕ್ಕೆ ಲಕ್ಷಣಗ್ರಂಥಗಳನ್ನು ರಚಿಸಬೇಕು" ಎಂಬ ಬಿ.ಎಂ. ಶ್ರೀಕಂಠಯ್ಯನವರ ವಾಣಿಯನ್ನು ಧ್ಯೇಯವಾಕ್ಯವನ್ನಾಗಿಟ್ಟು ಕೊಂಡು ಮೇ ೬, ೧೯೭೯ರಂದು ಎಂ.ವಿ. ಸೀತಾರಾಮಯ್ಯನವರು ಸ್ಥಾಪನೆ ಮಾಡಿದ, ರಾಷ್ಟ್ರಕವಿ ಕುವೆಂಪು ಅವರು ಉದ್ಘಾಟನೆ ಮಾಡಿದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ಈಗ ೨೫ ವರ್ಷಗಳ ಸಂಭ್ರಮ. ಈ ಅವಧಿಯಲ್ಲಿ ಸಂಸ್ಥೆ ಸಾಧಿಸಿರುವ ಸಾಧನೆಗಳು ಹಲವು. ಸಂಸ್ಥಾಪಕ ಸೀತಾರಾಮಯ್ಯನವರ ಆಶ್ರಯ ದಲ್ಲಿ ಅವರ ಮನೆಯಲ್ಲೇ ಹತ್ತು ವರ್ಷಗಳನ್ನು ಪೂರೈಸಿ ಅನೇಕ ಮೌಲಿಕ ಪ್ರಕಟನೆಗಳನ್ನೂ, ವಿದ್ವತ್ ಚರ್ಚೆಗಳನ್ನು, ವಿಚಾರ ಗೋಷ್ಠಿಗಳನ್ನು, 'ಕರ್ನಾಟಕ ಲೋಚನ' ವಿದ್ವತ್ ಪತ್ರಿಕೆಯನ್ನು ಸಾಹಿತ್ಯಲೋಕಕ್ಕೆ ಪರಿಚಯಿಸುವ ಮೂಲಕ ತಮ್ಮ ಪಾಂಡಿತ್ಯ, ವ್ಯಕ್ತಿತ್ವ ಮತ್ತು ಪರಿಶ್ರಮದಿಂದ ಕರ್ನಾಟಕದ ಪ್ರತಿಷ್ಠಿತ ಸಂಶೋಧನ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಪಡೆದಿತ್ತು. ಅನಂತರ ಮಾಸ್ತಿ ಮನೆ, ಗೋಖಲೆ ಸಂಸ್ಥೆಗಳ ಆಶ್ರಯದಲ್ಲಿದ್ದು ೨.೨.೨೦೦೦ ರಿಂದ ಸ್ವಂತ ಕಟ್ಟಡದಲ್ಲಿದೆ.

ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರ ಗೌರವ ಅಧ್ಯಕ್ಷತೆಯಲ್ಲಿ, ಮಾಸ್ತಿ ವೆಂಕಟೇಶ ಅಯ್ಯಂಗಾರರ ಪೋಷಕತ್ವ ದಲ್ಲಿ ಆರಂಭವಾದ ಈ ಸಂಶೋಧನ ಸಂಸ್ಥೆಗೆ ಎಂ.ವಿ. ಸೀತಾರಾಮಯ್ಯನವರು, ನಂತರ ಎಲ್.ಎಸ್. ಶೇಷಗಿರಿ ರಾಯರು, ಎನ್. ಬಸವಾರಾಧ್ಯರು, ಈಗ ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಅಧ್ಯಕ್ಷರಾಗಿ ಈ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ.

ಡಾ॥ ಕೆ.ಆರ್. ಗಣೇಶ್, ಪ್ರೊ॥ ಕೆ.ಎಸ್. ಮಧುಸೂದನ, ಶ್ರೀ ವಿ. ವೆಂಕಟರಾವ್, ಡಾ॥ ಪಿ.ವಿ. ನಾರಾಯಣ, ಪ್ರೊ॥ ದೊಡ್ಡರಂಗೇಗೌಡ, ಗೋವಿಂದ ಜಾಲಿಹಾಳ, ಪ್ರೊ॥ ಎಂ.ವಿ. ಸತ್ಯನಾರಾಯಣ, ಪ್ರೊ॥ ಜಿ.ಎಸ್. ವೆಂಕಟರಾಜು, ಜಿ. ಚನ್ನವೀರಸ್ವಾಮಿ, ಪ್ರೊ॥ ಕೆ.ಆರ್. ಇಕ್ಬಾಲ್ ಅಹಮದ್ ಮುಂತಾದ ಅನೇಕರು ಗೌರವ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್ ಅವರು ಗೌರವ ಕೋಶಾಧ್ಯಕ್ಷರಾಗಿ, ಪ್ರಸ್ತುತ ಪ್ರೊ॥ ನಾ. ಗೀತಾಚಾರ್ಯ ಅವರು ಗೌರವ ಕಾರ್ಯದರ್ಶಿಯಾಗಿ, ಸಂಸ್ಥೆಯನ್ನು ಕಟ್ಟುವಲ್ಲಿ ಸಂಸ್ಥಾಪಕರ ಕನಸನ್ನು ನನಸು ಮಾಡುವಲ್ಲಿ ಅಪಾರವಾಗಿ ಶ್ರಮಿಸುತ್ತಿದ್ದಾರೆ. ಇವರೊಂದಿಗೆ ಪ್ರೊ॥ ಡಿ. ಲಿಂಗಯ್ಯ ಅವರು ಕೋಶಾಧಿಕಾರಿಗಳಾಗಿ, ಡಾ॥ ಎಂ. ಚಿದಾನಂದಮೂರ್ತಿ, ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಮುಂತಾದ ನಾಡಿನ ಶ್ರೇಷ್ಠ ವಿದ್ವಾಂಸರು ಕಾರ್ಯಸಮಿತಿ ಸದಸ್ಯರಾಗಿ ಡಾ॥ ಪು.ತಿ.ನ., ಗೊರೂರು, ಜಿ. ನಾರಾಯಣ, ಹಾ.ಮಾ. ನಾಯಕ, ಜಿ.ಎಸ್. ಶಿವರುದ್ರಪ್ಪ, ದೇ.ಜ.ಗೌ., ಮುಂತಾದ ನಾಡಿನ ಗಣ್ಯ ಸಾಹಿತಿಗಳು ಗೌರವ ಸದಸ್ಯರಾಗಿ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ದುಡಿದಿದ್ದಾರೆ, ದುಡಿಯುತ್ತಿದ್ದಾರೆ.

ಕಾಲಕಾಲಕ್ಕೆ ಚಟುವಟಿಕೆಗಳಿಗೆ ಮತ್ತು ನಿರಂತರ ಯೋಜನೆಗಳಿಗೆ ಉಪಸಮಿತಿ ಹಾಗೂ ಸಂಚಾಲಕತ್ವದ ಮೂಲಕ ಅನೇಕ ಸಾಹಿತಿ-ವಿದ್ವಾಂಸರು ಈ ಸಂಸ್ಥೆಗೊಂದು ಶಾಶ್ವತ ಸ್ಥಾನವನ್ನು ತಂದುಕೊಡುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ.

ಈವರೆಗಿನ ಮುಖ್ಯ ಚಟುವಟಿಕೆಗಳ ಸಂಕ್ಷಿಪ್ತ ವಿವರ

(೧) ಪ್ರಾಚೀನ ಹಸ್ತಪ್ರತಿಗಳ ಭಂಡಾರ :

ಪ್ರತಿಷ್ಠಾನದ ಪ್ರಾಚೀನ ಹಸ್ತಪ್ರತಿ ಭಂಡಾರದಲ್ಲಿ ಸಂಸ್ಥೆಯ ಸ್ಥಾಪನೆಯೊಂದಿಗೇ ಅಂದರೆ ೧೯೭೯ರಿಂದಲೇ ಪ್ರಾರಂಭವಾಗಿದ್ದು ಪ್ರಸ್ತುತ ೧೫೦೦ಕ್ಕೂ ಅಧಿಕ ಓಲೆಗರಿ ಮತ್ತು ಕಾಗದದ ಅಮೂಲ್ಯ ಹಸ್ತಪ್ರತಿಗಳಿವೆ. ಒಟ್ಟು ೮೦೦ಕ್ಕೂ ಹೆಚ್ಚಿನ ಗ್ರಂಥಗಳಿರುವ ಈ ಹಸ್ತಪ್ರತಿಗಳಲ್ಲಿ ವೈವಿಧ್ಯತೆಯಿದೆ. ಅತಿ ಸಣ್ಣ ಹಸ್ತಪ್ರತಿಯಿಂದ ಹಿಡಿದು ೩ ಅಡಿ ಉದ್ದ ದೊಡ್ಡ ಹಸ್ತಪ್ರತಿಗಳಿವೆ. ೫೦ಕ್ಕೂ ಹೆಚ್ಚು ಬೃಹತ್ ಹಸ್ತಪ್ರತಿಗಳು ರೇಖಾ-ವರ್ಣಚಿತ್ರಗಳಿರುವ ಹಸ್ತಪ್ರತಿಗಳು, ಸನ್ನದು, ಕೈಫಿಯತ್ತುಗಳೂ ಇವೆ.

ತಿಮ್ಮಪ್ಪದಾಸರ ಸ್ವಹಸ್ತಾಕ್ಷರದ ಹಸ್ತಪ್ರತಿಗಳೊಂದಿಗೆ 'ಸೂಕ್ತಿ ಸುಧಾರ್ಣವ' 'ಕುಮಾರವ್ಯಾಸ ಭಾರತ', ಪ್ರತಿಪುಟದಲ್ಲೂ ವರ್ಣಚಿತ್ರಗಳಿರುವ 'ಸ್ತೋತ್ರ ರತ್ನಾಕರ' ಎಂಬ ಕಾಗದ ಹಸ್ತಪ್ರತಿ ಮುಂತಾದ ಮಹತ್ವದ ಹಸ್ತಪ್ರತಿಗಳೂ ಅನೇಕ ಅಪ್ರಕಟಿತ ಹಸ್ತಪ್ರತಿಗಳೂ ಇವೆ.

ಯಾವುದೇ ಒಂದು ಸಂಶೋಧನಾ ಸಂಸ್ಥೆಯ ಅತ್ಯಗತ್ಯ ಅಂಗವಾಗಿರುವ ಈ ಹಸ್ತಪ್ರತಿ ಭಂಡಾರ ಪ್ರತಿಷ್ಠಾನದಲ್ಲಿ ಸುಸಜ್ಜಿತವಾಗಿದ್ದು ಉತ್ತಮ ನಿರ್ವಹಣೆಯಿಂದ ಕೂಡಿದೆ. ವೈಜ್ಞಾನಿಕ ವಿಧಾನದಿಂದ ಹಸ್ತಪ್ರತಿಗಳನ್ನು ಸಂರಕ್ಷಿಸಲಾಗುತ್ತಿದೆ. ಹಸ್ತಪ್ರತಿಗಳ ಅಧ್ಯಯನಕ್ಕಾಗಿ ಮೈಕ್ರೊ ಫಿಲಂ ರೀಡರ್ ಹೊಂದಿದ್ದು ನಿರಂತರವಾಗಿ ಹಸ್ತಪ್ರತಿ ಸಂಪ್ರತಿ ಕಾರ್ಯ ಮತ್ತು ಸಂಶೋಧನೆ ನಡೆಯುತ್ತಿದೆ. ಈವರೆಗೆ ೯೭ ಹಸ್ತಪ್ರತಿಗಳ ವರ್ಣನಾತ್ಮಕ ಹಸ್ತಪ್ರತಿಸೂಚಿ ಪ್ರಕಟವಾಗಿದ್ದು ಇನ್ನೂ ೨೦೦ ಹಸ್ತಪ್ರತಿಗಳ ಸೂಚಿ ಪ್ರಕಟಣೆಗೆ ಸಿದ್ಧವಾಗಿವೆ. 'ಅಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳು' ಎಂಬ ಖಾಸಗಿ ಸಂಗ್ರಹ ಸೂಚಿಯನ್ನೂ ನಮ್ಮ ವಿದ್ಯಾರ್ಥಿಯೊಬ್ಬರಿಂದ ಸಿದ್ಧಪಡಿಸಿ ಪ್ರಕಟಿಸಲಾಗಿದೆ.

(೨) ಆಕರ ಗ್ರಂಥಾಲಯ :

ಒಂದು ಸಂಶೋಧನಾ ಸಂಸ್ಥೆಯ ಮುಖ್ಯ ಅಂಗವಾದ 'ಗ್ರಂಥಾಲಯ' ಪ್ರತಿಷ್ಠಾನದಲ್ಲಿ ಪ್ರಾರಂಭದಿಂದಲೂ ಇದೆ. ಈವರೆಗೆ ಹನ್ನೆರಡು ಸಾವಿರಕ್ಕೂ ಹೆಚ್ಚು ಗ್ರಂಥ ಸಂಗ್ರಹವಿದೆ. ಇದರಲ್ಲಿ ಸಂಶೋಧನೆಗೆ ಅಗತ್ಯವಾದ ಗ್ರಂಥಗಳನ್ನು ಮಾತ್ರ ಹೊಂದಲಾಗಿದೆ. ಈ ಕಾರಣಕ್ಕಾಗಿಯೇ ಕತೆ, ಕಾದಂಬರಿ, ನಾಟಕ ಇತ್ಯಾದಿ ಜನಪ್ರಿಯ ಸಾಹಿತ್ಯ ಪ್ರಕಾರಗಳನ್ನು ಸೇರಿಸಿಲ್ಲ ಮತ್ತು ಪುಸ್ತಕಗಳನ್ನು ಮನೆಗೆ ಕೊಡುವ ವ್ಯವಸ್ಥೆ ಹೊಂದಿಲ್ಲ. ಬೆಳ್ಳೂರಿನ ಬಿ.ಎಂ.ಶ್ರೀ. ಶತಮಾನ ಗ್ರಂಥಾಲಯದಲ್ಲೂ ೫೦೦೦ ಗ್ರಂಥಗಳ ಒಂದು ಗ್ರಂಥಾಲಯವನ್ನು ನಿರ್ವಹಿಸಲಾಗುತ್ತಿದೆ.

ಎಲ್ಲ ಇ.ಸಿ.ಗಳು, ಎಂ.ಎ.ಆರ್.ಗಳು, ನಿಘಂಟುಗಳು, ಹಸ್ತಪ್ರತಿ, ಗ್ರಂಥಸೂಚಿಗಳೂ ಪ್ರಾಚೀನ ಗ್ರಂಥಗಳ ಇಂಡಾಲಜಿ ಮತ್ತು ಕನ್ನಡಾಲಜಿಗೆ ಸಂಬಂಧಿಸಿದ ಅಮೂಲ್ಯ ಆಕರ ಗ್ರಂಥಗಳನ್ನು ಪ್ರತಿಷ್ಠಾನ ಹೊಂದಿದ್ದು ಸಾಹಿತ್ಯ ಸಂಶೋಧನೆಯ ಆಸಕ್ತರು ಮತ್ತು ಉನ್ನತ ವ್ಯಾಸಂಗದ ವಿದ್ಯಾರ್ಥಿಗಳು ನಿರಂತರವಾಗಿ ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಪ್ರಬುದ್ಧ ಕರ್ನಾಟಕ, ಕನ್ನಡ ನುಡಿ, ಪರಿಷತ್ಪತ್ರಿಕೆ, ಸಾಧನೆ, ಕರ್ನಾಟಕ ಭಾರತಿ, ಜೀವನ ಮುಂತಾದ ಎಲ್ಲ ಹಳೆಯ ಪತ್ರಿಕೆಗಳೂ ನಮ್ಮಲ್ಲಿ ಲಭ್ಯವಿದೆ.

ಇತಿಹಾಸ ತಜ್ಞ ಎಸ್. ಶ್ರೀಕಂಠಯ್ಯ, ಪ್ರಸಿದ್ಧ ಸಾಹಿತಿಗಳಿಂದ, ಎ.ಸೀ. ಮತ್ತು ಎಂ.ಎ.ಸೀ., ಮೈಸೂರು ವಿಶ್ವವಿದ್ಯಾಲಯಗಳ ಪ್ರಕಟನೆಗಳ ಎಲ್ಲ ಸಂಗ್ರಹಗಳೊಂದಿಗೆ ಅನೇಕ ಸಾಹಿತಿ ಗಣ್ಯರು ನೀಡಿರುವ ದಾನದ ಪುಸ್ತಕಗಳಿಂದ ಪ್ರತಿಷ್ಠಾನದ ಗ್ರಂಥಭಂಡಾರ ಬೆಳ್ಳೂರು ಮತ್ತು ಬೆಂಗಳೂರುಗಳಲ್ಲಿ ನಡೆಯುತ್ತಿವೆ.

(೩) ಹಸ್ತಪ್ರತಿಶಾಸ್ತ್ರ ತರಗತಿ :

ಕರ್ನಾಟಕದ ಏಕೈಕ ಪ್ರಯತ್ನವಾಗಿ ನಡೆಯುತ್ತಿರುವ ಈ ತರಗತಿಯನ್ನು ೧೯೯೧ರಿಂದ ನಡೆಸಲಾಗುತ್ತಿವೆ. ೧೯೯೧ರಲ್ಲಿ ನಡೆಸಿದ ರಾಷ್ಟ್ರಮಟ್ಟದ "ಹಸ್ತಪ್ರತಿಶಾಸ್ತ್ರ" ವಿಚಾರಗೋಷ್ಠಿಯ ನಿರ್ಣಯದ ಭಾಗವಾಗಿ ನಡೆಯುತ್ತಿರುವ ಈ ತರಗತಿಯಲ್ಲಿ ಪ್ರತಿವರ್ಷ ಗರಿಷ್ಠ ೧೦ ಜನ ವಿದ್ಯಾರ್ಥಿಗಳಿಗೆ ಓಲೆಗರಿ, ಕಾಗದ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪ್ರತಿ, ದಾಖಲೀಕರಣ ಮತ್ತು ಗ್ರಂಥ ಸಂಪಾದನಾ ಕೌಶಲದಲ್ಲಿ ಪರಿಣತಿಯನ್ನು ನೀಡಲಾಗುವುದು.

ಅಳಿಸಿಹೋಗಿರುವ ಈ ಕಲೆಯನ್ನು ಉಳಿಸುವ, ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಮತ್ತು ಸಂಗ್ರಹವಾಗಿರುವ ಕರ್ನಾಟಕ ಹಸ್ತಪ್ರತಿಗಳ ವೈಜ್ಞಾನಿಕ ಸಂರಕ್ಷಣೆಯ ವಿಧಿವಿಧಾನಗಳಿಂದ ಸಂರಕ್ಷಿಸುವುದಕ್ಕೆ ಅರ್ಹರನ್ನು ತಯಾರು ಮಾಡುವ ಉದ್ದೇಶದಿಂದ ಈ ತರಗತಿಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಕೇವಲ ೧೦೦ ರೂ.ಗಳ ಶುಲ್ಕದಿಂದ ಆಸಕ್ತರನ್ನು ಆಕರ್ಷಿಸುವ ಉದ್ದೇಶದಿಂದ ಕನಿಷ್ಠ ಎಸ್.ಎಸ್.ಎಲ್.ಸಿ. ಅರ್ಹತೆಯೊಂದಿಗೆ ಪ್ರತಿವರ್ಷ ಅಕ್ಟೋಬರ್‌ನಿಂದ ಜೂನ್‌ವರೆಗೆ ೮ ತಿಂಗಳ ಡಿಪ್ಲೊಮಾ ತರಬೇತಿಯಾಗಿ ಈ ತರಗತಿಗಳನ್ನು ನಡೆಸಲಾಗುತ್ತಿದೆ.

(೪) ಪ್ರಾಚೀನ ಗ್ರಂಥಗಳ ಸಂಪಾದನೆ ಮತ್ತು ಪ್ರಕಟನೆ :

ಈವರೆಗೆ ೧೫ಕ್ಕೂ ಹೆಚ್ಚು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪರಿಷ್ಕರಿಸಿ ಪ್ರಕಟಿಸಲಾಗಿದೆ. ಪ್ರತಿಷ್ಠಾನದ ಗ್ರಂಥ ಭಂಡಾರದಲ್ಲೇ ಇದ್ದ ಮತ್ತು ವಿದ್ವಾಂಸರು ಸಂಪಾದಿಸಿ ಸಿದ್ಧಪಡಿಸಿದ್ದ ಈ ಕೆಳಕಂಡ ಅಪ್ರಕಟಿತ ಗ್ರಂಥಗಳನ್ನು ಪ್ರತಿಷ್ಠಾನ ಪ್ರಕಟಿಸಿದೆ.

೧. ಸೂತಭಾರತ - ಜಿ.ಎಂ. ಹೆಗ್ಗಡೆ
(ಷಟ್ಪದಿ ಕಾವ್ಯ)

೨. ಶ್ರೀ ಕೃಷ್ಣದೇವರಾಯ ದಿನಚರಿ (ಗದ್ಯ-ಕೈಫಿಯತ್ತು) - ಸಂಪತ್ಕುಮಾರಾಚಾರ್ಯ
೩. ಚಂದ್ರಚೂಡಾಮಣಿ ಶತಕ (ಶತಕ) - ಎಂ.ವಿ. ಸೀತಾರಾಮಯ್ಯ
೪. ಶ್ರೀನಿವಾಸ ಕಲ್ಯಾಣ (ಗದ್ಯ-ಪದ್ಯ) - ಕೆ.ಎಂ. ಕೃಷ್ಣರಾವ್
೫. ಪರುನ್ನಂದನ ಶತಕ (ಶತಕ) - ಎಂ.ವಿ. ಸೀತಾರಾಮಯ್ಯ
೬. ಧ್ರುವ ಚರಿತ್ರೆ (ಸಾಂಗತ್ಯ ಕಾವ್ಯ) - ಎನ್.ಎಸ್. ಲಕ್ಷ್ಮೀನಾರಾಯಣಭಟ್
೭. ಕೀರ್ತನ ಕುಸುಮಾಂಜಲಿ (ಕೀರ್ತನೆ) - ಎಂ.ವಿ. ಸೀತಾರಾಮಯ್ಯ
೮. ಪದ್ಮಿನಿ ಕಲ್ಯಾಣ (ಸಾಂಗತ್ಯ ಕಾವ್ಯ) - ಎಸ್. ಶಿವಣ್ಣ
೯. ಬೇಟೆರಾಯ ದೀಕ್ಷಿತರ ದೇವರನಾಮಗಳು (ಕೀರ್ತನೆ) - ಎಸ್. ರಾಮಸ್ವಾಮಿ
೧೦. ಶ್ರೀಕೃಷ್ಣ ಬಾಲಲೀಲೆ ಭಾಗ ೧ ಮತ್ತ ೨ (ಬೃಹತ್ ಕೀರ್ತನ ಕಾವ್ಯ) - ಎಂ.ವಿ. ಸೀತಾರಾಮಯ್ಯ

ಈ ಎಲ್ಲ ಗ್ರಂಥಗಳನ್ನು ಗ್ರಂಥ ಸಂಪಾದನಾ ಶಿಸ್ತಿಗೆ ಅನುಗುಣವಾಗಿ ಸಂಪಾದಿಸಲಾಗಿದ್ದು ಪಾಠಾಂತರಗಳ ನಿಷ್ಕರ್ಷ, ವಿಸ್ತೃತ, ಪ್ರಸ್ತಾವನೆ, ಕವಿ ಕಾವ್ಯ ವಿಚಾರ ಮತ್ತು ಸೂಕ್ತ ಅನುಬಂಧಗಳೊಂದಿಗೆ ಶಾಸ್ತ್ರೀಯವಾಗಿ ಸಂಪಾದಿಸಲಾಗಿದೆ.

ಕೆಲವು ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ ನೂತನ ಪಾಠಗಳೊಂದಿಗೆ ಸಂಪಾದಿಸಿ ಪ್ರಕಟಿಸುವ ಕಾರ್ಯವನ್ನು ಪ್ರತಿಷ್ಠಾನ ನಡೆಸಿದೆ. ಅವುಗಳೆಂದರೆ,

೧. ಸರ್ವಜ್ಞ ವಚನಗಳು
೨. ಕುಮಾರವ್ಯಾಸ ಭಾರತ ಸಂಗ್ರಹ
೩. ಕವಿರಾಜ ಮಾರ್ಗ

ಪ್ರತಿಷ್ಠಾನದಲ್ಲಿ ಇನ್ನು ಹಲವಾರು ಅಪ್ರಕಟಿತ ಗ್ರಂಥಗಳಿದ್ದು ಅವುಗಳಲ್ಲಿ ಈ ಕೆಳಕಂಡವುಗಳ ಸಂಪಾದನೆಯ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

೧. 'ತಿಮ್ಮಪ್ಪದಾಸರ ಕೀರ್ತನೆಗಳು'
೨. 'ವೆಂಕಟದಾಸರ ಕೀರ್ತನೆಗಳು'
೩. 'ಪರಬ್ರಹ್ಮ ಪ್ರಕಾಶಿಕೆ'

ಪ್ರತಿಷ್ಠಾನದ ತಜ್ಞರ ತಂಡ ಇತರರಿಗೂ ಕೆಲವು ಪ್ರಾಚೀನ ಗ್ರಂಥಗಳನ್ನು ಸಂಪ್ರತಿ ಮಾಡಿಸಿಕೊಂಡುವುದಲ್ಲದೆ ಅವರು ಅಪೇಕ್ಷಿಸಿದರೆ ಶಾಸ್ತ್ರೀಯವಾಗಿ ಸಂಪಾದಿಸುವ ಕಾರ್ಯವನ್ನು ನಡೆಸುತ್ತಿದೆ.

೧. ಡಾ। ಸಿದ್ಧಯ್ಯ ಪುರಾಣಿಕಗಾಗಿ 'ಮಳೆಯರಾಜನ ಚರಿತ್ರೆ'
೨. ಬಸವ ಸಮಿತಿಗಾಗಿ 'ನವರತ್ನಮಾಲಿಕೆ'

ಕಾವ್ಯಗಳನ್ನು ಸಂಪ್ರತಿಮಾಡಿ ಸಂಪಾದಿಸಿಕೊಟ್ಟಿದೆ.

(೫) ಲಕ್ಷಣಗ್ರಂಥಗಳ ರಚನೆ ಮತ್ತು ಪ್ರಕಟನೆ :

ಪ್ರತಿಷ್ಠಾನದ ಸಂಶೋಧನಾ ಚಟುವಟಿಕೆಗಳಲ್ಲಿ ಕಾಲಕಾಲಕ್ಕೆ ಆವಿಷ್ಕಾರಗೊಳ್ಳುವ ನೂತನ ಅಧ್ಯಯನ ಶಿಸ್ತುಗಳಿಗೆ ಅಗತ್ಯ ಲಕ್ಷಣಗ್ರಂಥಗಳನ್ನು ಸಿದ್ಧಪಡಿಸುವುದೂ ಒಂದಾಗಿದೆ. ೧೯೮೦ರ ದಶಕದಲ್ಲಿ "ಹಸ್ತಪ್ರತಿಶಾಸ್ತ್ರ" ಎಂಬ ನೂತನ ಶಿಸ್ತನ್ನು ರೂಪಿಸಿದ್ದಲ್ಲದೆ 'ಮಣಿಹ', 'ಹಸ್ತಪ್ರತಿಶಾಸ್ತ್ರ', 'ಹಸ್ತಪ್ರತಿಶಾಸ್ತ್ರ ಪರಿಚಯ' ಎಂಬ ಶಾಸ್ತ್ರಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸಿದೆ. 'ಭಾಷಾಂತರ ಕಲೆ', 'ಸೃಜನಶೀಲತೆ ಮತ್ತು ಪಾಂಡಿತ್ಯ', 'ಹೊಸಗನ್ನಡ ವ್ಯಾಕರಣ', 'ವೈಚಾರಿಕ ಜಾಗೃತಿ' ಮುಂತಾದ ಕೃತಿಗಳು ಹೊಸ ಶಿಸ್ತುಗಳಿಗೆ ಪೂರಕವಾಗಿ ರಚಿಸಿದ ಪ್ರಕಟಣೆಗಳಾಗಿವೆ. ೧೯೯೦ರ ದಶಕದಲ್ಲಿ 'ಅಂತರಶಿಸ್ತೀಯ ಸಂಶೋಧನೆಯ ಶಿಸ್ತಿ'ನ ಪರಿಕಲ್ಪನೆಗೆ ಅನುಗುಣವಾಗಿ 'ಅಂತರಶಿಸ್ತೀಯ ಸಂಶೋಧನ ವಿಧಿವಿಧಾನ' ಎಂಬ ಲಕ್ಷಣ ಗ್ರಂಥವನ್ನು ಪ್ರಕಟಿಸಲಾಗಿದೆ. 'ತೌಲನಿಕ ಸಾಹಿತ್ಯ'ವನ್ನು ಕುರಿತು ಒಂದು ಲಕ್ಷಣ ಗ್ರಂಥ ಅಚ್ಚಿನಲ್ಲಿದೆ.

(೬) ಕರ್ನಾಟಕ ಲೋಚನ ವಿದ್ವತ್ ಪತ್ರಿಕೆಯ ಪ್ರಕಟನೆ :

೧೯೮೨ರಿಂದ ಅರ್ಧವಾರ್ಷಿಕ ಪತ್ರಿಕೆಯಾಗಿ ಪ್ರಕಟವಾಗುತ್ತಿರುವ ಈ ಪತ್ರಿಕೆ ಸಂಶೋಧನೆಗೆ ವಿದ್ವತ್ತಿಗೆ ಮೀಸಲಾಗಿದೆ. ಕರ್ನಾಟಕ ಸಾಹಿತ್ಯ-ಸಂಸ್ಕೃತಿಯಲ್ಲಿ ನಡೆಯುವ ನೂತನ ಆವಿಷ್ಕಾರಗಳು, ಹೊಸ ಚಿಂತನೆಗಳು, ವಿದ್ವತ್ ಟಿಪ್ಪಣಿಗಳು ಅಪ್ರಕಟಿತ ಕೃತಿಯ ಭಾಗಗಳು, ಸಂಶೋಧನಾ ಚಟುವಟಿಕೆಗಳ ವಿವರಗಳು, ಶಾಸ್ತ್ರಗ್ರಂಥಗಳ ವಿಮರ್ಶೆ, ಛಂದೋಬದ್ಧ ಕವಿತೆಗಳ ರಚನೆಗೆ ಪ್ರೋತ್ಸಾಹ ನೀಡುವ ಸಮಸ್ಯಾಪೂರಣ ಮುಂತಾದ ಸಂಶೋಧನೆ - ಪಾಂಡಿತ್ಯಕ್ಕೆ ಪೂರಕವಾದ ಲೇಖನ-ಟಿಪ್ಪಣಿಗಳ ಮೂಲಕ ಕರ್ನಾಟಕ ಲೋಚನ ಕರ್ನಾಟಕದ ಏಕೈಕ ಸಂಶೋಧನಾ ಪತ್ರಿಕೆಯೆನಿಸಿದೆ. ನಿಯತವಾಗಿ ಪ್ರಕಟವಾಗುತ್ತಿರುವ ಏಕೈಕ ಪತ್ರಿಕೆ ಎಂಬ ಹೆಗ್ಗಳಿಕೆಯೂ ಇದಕ್ಕಿದೆ.

ಈಗ ೧೬ನೇ ವರ್ಷದಲ್ಲಿ ಮುನ್ನಡೆಯುತ್ತಿದೆ. ಕಾಲಕಾಲಕ್ಕೆ ಹಲವು ವಿಶೇಷ ಸಂಚಿಕೆಗಳನ್ನು ಪ್ರಕಟಿಸಲಾಗಿದೆ. ೧೫ ವರ್ಷಗಳ ಸೂಚಿಯನ್ನು ಪ್ರಕಟಿಸಲಾಗಿದೆ. ಸಂಶೋಧನಾ ಕೇಂದ್ರಕ್ಕೆ ಇರಲೇಬೇಕಾದ ಅತ್ಯಗತ್ಯದ ಪ್ರಕಟಣೆಯಾಗಿ ಈ ಪತ್ರಿಕೆ ನಮ್ಮ ಸಂಶೋಧನಾ ಕೇಂದ್ರದ ಮುಖ್ಯ ಚಟುವಟಿಕೆಯಾಗಿದೆ.

(೭) ವಿಚಾರಗೋಷ್ಠಿಗಳು ಮತ್ತು ಉಪನ್ಯಾಸಗಳು :

ಪ್ರತಿಷ್ಠಾನ ತನ್ನ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ವಿಚಾರಗೋಷ್ಠಿಗಳನ್ನು, ಉಪನ್ಯಾಸಗಳನ್ನು ನಡೆಸುವುದರ ಮೂಲಕ ಸಂಶೋಧನಾ ಚಟುವಟಿಕೆಗಳನ್ನು ಸಾರ್ವಜನಿಕರಿಗೆ ತೆರೆದಿಡುತ್ತದೆ. ಈ ಕಾರ್ಯಕ್ರಮಗಳಿಗೆ ನಾಡಿನ ಎಲ್ಲ ಹಿರಿಯ ಕಿರಿಯ ವಿದ್ವಾಂಸರನ್ನು ಒಳಗೊಳ್ಳುವ ಮೂಲಕ ಸರ್ವಜನಾದರಣೀಯವಾಗಿದೆ. ವಿದ್ವತ್‌ವಲಯದಲ್ಲಿ ಸಾಹಿತ್ಯ ಸಂಶೋಧನೆಯ ಈ ಕ್ಷೇತ್ರದಲ್ಲಿ ಹೊಸ ಹೊಸ ಚಿಂತನೆಗಳನ್ನು ಬೆಳೆಸಲು ಈ ವಿಚಾರಗೋಷ್ಠಿಗಳು, ಉಪನ್ಯಾಸಗಳು ನೆರವಾಗುತ್ತವೆ.

ಈವರೆಗೆ ನಡೆಸಿರುವ ಕೆಲವು ಮುಖ್ಯ ವಿಚಾರಗೋಷ್ಠಿಗಳನ್ನು ಹೀಗೆ ಪಾವತಿ ಮಾಡಬಹುದು.

೧. ರಾಷ್ಟ್ರಮಟ್ಟದ ಹಸ್ತಪ್ರತಿಶಾಸ್ತ್ರ ವಿಚಾರಗೋಷ್ಠಿ (೧೯೮೧)
೨. ರಾಷ್ಟ್ರಮಟ್ಟದ ಕನ್ನಡ ನವೋದಯ ಸಾಹಿತ್ಯ ವಿಚಾರಗೋಷ್ಠಿ (೧೯೮೪)
೩. ರಾಷ್ಟ್ರಮಟ್ಟದ ಪ್ರಾರಂಭಿಕ ವಿಜಯನಗರ ಸಾಮ್ರಾಜ್ಯದ ಇತಿಹಾಸ ಮತ್ತು ಸಂಸ್ಕೃತಿ ವಿಚಾರಗೋಷ್ಠಿ (೧೯೮೬)
೪. ಕುಮಾರವ್ಯಾಸ ಭಾರತ ಸಮಗ್ರ ಸಮೀಕ್ಷೆ (೧೯೮೭)
೫. ಕನ್ನಡ ಸಾಹಿತ್ಯದಲ್ಲಿ ಅದ್ವೈತ (೧೯೮೮)
೬. ೧೯ನೇ ಶತಮಾನದಲ್ಲಿ ಪ್ರಮುಖ ಸಾಹಿತ್ಯೋಪಾಸಕರನ್ನು ಕುರಿತ ವಿಚಾರಗೋಷ್ಠಿಗಳು (೧೯೯೫-೯೮)

ಇವು ಕೆಲವು ಪುಸ್ತಕರೂಪದಲ್ಲಿ ಪ್ರಕಟವಾಗಿವೆ. ಪ್ರತಿವರ್ಷವೂ ಒಂದೊಂದು ಕೆಲವೊಮ್ಮೆ ಎರಡು ಮೂರು ವಿಚಾರಗೋಷ್ಠಿಗಳನ್ನು ಪ್ರತಿಷ್ಠಾನ ನಡೆಸುತ್ತಾ ಸಂಶೋಧನಾ ಚಟುವಟಿಕೆಗಳಿಗೆ ಒತ್ತಾಸೆಯಾಗಿ ನಿಂತಿದೆ.

ಉಪನ್ಯಾಸಗಳನ್ನು ನಡೆಸುವುದೂ ಒಂದು ಮುಖ್ಯ ಚಟುವಟಿಕೆಯಾಗಿದೆ. ಎರಡು ರೀತಿಯ ಉಪನ್ಯಾಸ ಕಾರ್ಯಕ್ರಮಗಳೂ ಪ್ರತಿಷ್ಠಾನದಲ್ಲಿ ನಡೆಯುತ್ತಿವೆ. (೧) ದತ್ತಿ ಉಪನ್ಯಾಸಗಳು: ಇದಕ್ಕಾಗಿ ಹಲವು ಮಹನೀಯರ ಹೆಸರಿನಲ್ಲಿ (ವಿಶೇಷವಾಗಿ ಸಾಹಿತ್ಯ ಸಂಶೋಧನೆಗೆ ಸೇವೆ ಸಲ್ಲಿಸಿದ ವಿದ್ವಾಂಸರು ಉದಾ : ಡಾ॥ ಡಿ.ಎಲ್. ನರಸಿಂಹಾಚಾರ್, ಆ.ನೆ. ಉಪಾಧ್ಯ, ಬಿ.ಎಂ.ಶ್ರೀ., ಚಂದ್ರಶೇಖರ ಶರ್ಮ, ಎಸ್. ಶ್ರೀಕಂಠಯ್ಯ, ಟಿ.ಎನ್. ಮಹದೇವಯ್ಯ, ಎಂ.ಜಿ. ನಂಜುಂಡಾರಾಧ್ಯ ಇತ್ಯಾದಿ) ಪುದುವಟ್ಟುಗಳಿದ್ದು ಪ್ರತಿವರ್ಷ ಇದರ ಆದಾಯದಿಂದ ಆಯಾ ವಿದ್ವಾಂಸರ ಸಾಹಿತ್ಯ ಕ್ಷೇತ್ರದ ಈಚಿನ ಚಟುವಟಿಕೆಗಳು ಹೆಚ್ಚಿನ ಸಂಶೋಧನೆಗೆ ಅವರ ಸೇವೆ ಇತ್ಯಾದಿ ವಿಚಾರಗಳಲ್ಲಿ ವಿದ್ವತ್ ಪೂರ್ಣ ಉಪನ್ಯಾಸಗಳು ನಡೆಯುತ್ತಲೇ ಇರುತ್ತವೆ. **(೨) ವಿಶೇಷ ಉಪನ್ಯಾಸಗಳು :** ಸಾದಂರ್ಭಿಕವಾಗಿ ಗಣ್ಯ ವಿದ್ವಾಂಸರು ಬೆಂಗಳೂರಿಗೆ ಬಂದಾಗ ಅಥವಾ ಕೆಲವು ವಿಶೇಷ ಸಂದರ್ಭದಲ್ಲಿ ಈ ಉಪನ್ಯಾಸಗಳನ್ನು, ಉಪನ್ಯಾಸ ಮಾಲಿಕೆಗಳನ್ನು ನಡೆಸಲಾಗುವುದು. ಉದಾ. : ಅಂತರಶಿಸ್ತೀಯ ಸಂಶೋಧನ ವಿಧಿವಿಧಾನ ಉಪನ್ಯಾಸ ಮಾಲಿಕೆಯಲ್ಲಿ ೧೯೮೫ರಲ್ಲಿ ವಿವಿಧ ಶಿಸ್ತುಗಳಿರುವ ಈ ಶಾಸ್ತ್ರಲಕ್ಷಣಗಳನ್ನು ದಾಖಲಿಸುವ ೮ ಉಪನ್ಯಾಸಗಳು ಪ್ರತಿದಿನ ನಡೆಯಿತು.

ಈ ಎಲ್ಲ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದೆ.

(೮) ಬಿ.ಎಂ.ಶ್ರೀ. ಸ್ಮಾರಕ ಭವನಗಳ ನಿರ್ಮಾಣ :

ಕನ್ನಡದ ಕಣ್ವ, ಹೊಸಗನ್ನಡ ಯುಗಪ್ರವರ್ತಕ, ಕನ್ನಡದ ಆಚಾರ್ಯಪುರುಷ ಬಿ.ಎಂ.ಶ್ರೀಕಂಠಯ್ಯನವರ ಸ್ಮಾರಕವಾಗಿ ಪ್ರತಿಷ್ಠಾನ ಎರಡು ಭವನಗಳನ್ನು ನಿರ್ಮಿಸಿದೆ. ೧೯೮೪ರಲ್ಲಿ ನಡೆಸಿದ ಬಿ.ಎಂ.ಶ್ರೀ. ಶತಮಾನೋತ್ಸವದ ಸ್ಮರಣೆಗಾಗಿ ಹುಟ್ಟೂರಾದ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಬೆಳ್ಳೂರಿನಲ್ಲಿ ಹುಟ್ಟಿದ ಮನೆಯ ಸ್ಥಳದಲ್ಲಿಯೇ ಎರಡು ಮಹಡಿಗಳ 'ಆಚಾರ್ಯ ಬಿ.ಎಂ.ಶ್ರೀ. ಶತಮಾನ ಭವನ'ವನ್ನು ಸರ್ಕಾರದ ನೆರವಿನಿಂದ, ಶತಮಾನೋತ್ಸವ ಸಮಿತಿಯ ಸಹಕಾರದಿಂದ ನಿರ್ಮಿಸಿದ್ದು ಸ್ಥಳೀಯ ಸಮಿತಿಯ ಮೂಲಕ ನಿರಂತರ ಚಟುವಟಿಕೆಯಿಂದ ನಿರ್ವಹಿಸಲಾಗುತ್ತಿದೆ. ಬಿ.ಎಂ.ಶ್ರೀ. ಶತಮಾನ ಗ್ರಂಥಾಲಯ ಮತ್ತು ಸ್ಥಿರ ವಸ್ತುಸಂಗ್ರಹಾಲಯ ಮತ್ತು ಬಿ.ಎಂ.ಶ್ರೀ. ಸಭಾಂಗಣಗಳು ಈ ಭವನದಲ್ಲಿವೆ. 'ಬಿ.ಎಂ.ಶ್ರೀ. ಕಲಾಭವನ' ಹೆಸರಿನಲ್ಲಿ ರಾಜಧಾನಿ ಬೆಂಗಳೂರಿನಲ್ಲಿ ನರಸಿಂಹರಾಜ ಕಾಲೋನಿಯಲ್ಲಿ ಮೂರು ಮಹಡಿಗಳ ಭವ್ಯ ಸ್ಮಾರಕವನ್ನು ನಿರ್ಮಿಸಿದೆ. ಸಂಸ್ಥಾಪಕ ಎಂ.ವಿ. ಸೀತಾರಾಮಯ್ಯನವರ ಪರಿಶ್ರಮದ ಫಲವಾಗಿ ಸರ್ಕಾರ ವಾರ್ಷಿಕ ೧೦೦ ರೂ.ಗಳ ಗುತ್ತಿಗೆ ಮೇಲೆ ನೀಡಿರುವ ೩೦ x ೧೧೦ ಅಳತೆಯ ನಿವೇಶನದಲ್ಲಿ ನೆಲಮಹಡಿ ಮತ್ತು ಎಂ.ವಿ.ಸೀ. ಸಭಾಂಗಣ ಮಹಡಿಯನ್ನು

ಸದ್ಯ ನಿರ್ಮಿಸಲಾಗಿದೆ. ಇದನ್ನು ಸಂಪೂರ್ಣವಾಗಿ ಸಾರ್ವಜನಿಕರ ಮತ್ತು ಸಂಸದರ ನಿಧಿಗಳ ನೆರವಿನಿಂದ ನಿರ್ಮಿಸಲಾಗಿದೆ. ಸರ್ಕಾರದಿಂದ ಕಿಂಚಿತ್ತೂ ಸಹಾಯಧನ ಬಂದಿಲ್ಲ. ಇದರಲ್ಲೂ ಹಸ್ತಪ್ರತಿ ಸಂಗ್ರಹಾಲಯ, ಗ್ರಂಥಾಲಯ, ಸಭಾಂಗಣಗಳನ್ನು ನಿರ್ವಹಿಸಲಾಗುತ್ತಿದೆ.

ಎರಡೂ ಭವನಗಳಲ್ಲೂ ಉಚಿತ ವಾಚನಾಲಯವನ್ನು ನಡೆಸಲಾಗುತ್ತಿದೆ. ಈ ಭವನಗಳನ್ನು ಮಾದರಿ ಕವಿಸ್ಮಾರಕವನ್ನಾಗಿ ರೂಪಿಸುವ ಕನಸು ಪ್ರತಿಷ್ಠಾನದ್ದು. ಬಿ.ಎಂ.ಶ್ರೀ.ಯವರ ಎಲ್ಲ ಗ್ರಂಥಗಳು, ಸಾಧನೆಗಳು ಮತ್ತು ವಸ್ತುಗಳನ್ನು, ಬೆಳ್ಳೂರಿನಲ್ಲಿ ಪ್ರಾಚೀನ ಹಸ್ತಪ್ರತಿಗಳು, ವಸ್ತುಗಳು ಮತ್ತು ಬಿ.ಎಂ.ಶ್ರೀ., ಎಂ.ವಿ.ಸೀ. ಅವರ ಸಾಧನೆಗಳು, ಪುಸ್ತಕಗಳನ್ನು ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸಿ ಪ್ರಮುಖ ಸಾಂಸ್ಕೃತಿಕ ಪ್ರವಾಸಿ ಕೇಂದ್ರವಾಗಿ, ಕವಿಸ್ಮಾರಕವಾಗಿ ಮಾಡಲು ಪ್ರಯತ್ನಿಸಲಾಗುತ್ತಿದೆ. ಇದಕ್ಕೆ ಸಾರ್ವಜನಿಕರ, ಸರ್ಕಾರದ ನೆರವಿಗಾಗಿ ವಿನಂತಿಸಿದೆ.

(೯) ಅಧ್ಯಯನ ಕೇಂದ್ರದ ನಿರ್ವಹಣೆ :

ಈ ಎಲ್ಲ ಚಟುವಟಿಕೆಗಳೊಂದಿಗೆ ಇನ್ನು ಹಲವು ಸಾಂದರ್ಭಿಕ ಕಾರ್ಯಕ್ರಮಗಳನ್ನು ರೂಪಿಸಲು ಪ್ರತಿಷ್ಠಾನದಲ್ಲಿ ಒಂದು ವ್ಯವಸ್ಥಿತ ಅಧ್ಯಯನ ಕೇಂದ್ರವೇ ಕಾರ್ಯಪ್ರವೃತ್ತವಾಗಿದೆ. ಇಲ್ಲಿ ನಡೆಯುವ ಎಲ್ಲ ಚಟುವಟಿಕೆಗಳೂ ಸಂಶೋಧನೆಗೆ ವಿದ್ವತ್ತಿಗೆ ಪೂರಕವಾದವುಗಳೇ ಆಗಿರುತ್ತವೆ. ಈ ಕೇಂದ್ರದ ಮೂಲಕ ಈವರೆಗೆ ನಡೆಸಿರುವ ಕೆಲವು ಕಾರ್ಯಕ್ರಮಗಳನ್ನು ಹೀಗೆ ಪಟ್ಟಿಮಾಡಬಹುದು.

(೧) ಸಹೃದಯ ಗೋಷ್ಠಿ : ಇದು ಪ್ರತಿ ತಿಂಗಳೂ ನಡೆಯುವ ಯುವ ವೇದಿಕೆ. ಯುವ ವಿದ್ವಾಂಸರು, ಕವಿ, ಲೇಖಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಸಂಶೋಧನೆ ಮತ್ತು ಸೃಜನಶೀಲತೆ ಬರಹಗಳಿಗೆ, ವಾಚನ ಚರ್ಚೆಗೆ ಈ ವೇದಿಕೆಯಲ್ಲಿ ಅವಕಾಶವಿರುತ್ತದೆ. ಇದು ನಿರಂತರವಾಗಿ ನಡೆಯುವ ಕಾರ್ಯಕ್ರಮ. ಇದರ ವ್ಯವಸ್ಥೆಗೆ ಸಂಚಾಲಕರಿರುತ್ತಾರೆ.

(೨) ಸಾಹಿತ್ಯೋಪಾಸಕರು : ಸಾಹಿತ್ಯ ಸಂಶೋಧನಾ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದ ವಿದ್ವಾಂಸರ (೧೯ನೇ ಶತಮಾನ) ಉತ್ಸವಗಳನ್ನು ಪ್ರತಿಷ್ಠಾನ ವಿಶೇಷವಾಗಿ ಆಚರಿಸಿ ಆ ಮೂಲಕ ಪ್ರತಿ ತಿಂಗಳೂ ಒಬ್ಬೊಬ್ಬ ವಿದ್ವಾಂಸರನ್ನು ಕುರಿತು ಉಪನ್ಯಾಸ - ವಿಚಾರಗೋಷ್ಠಿಯನ್ನು ನಡೆಸಲಾಯಿತು. ಸುಮಾರು ೫೦ ಜನ ವಿದ್ವಾಂಸರನ್ನು ಕುರಿತು ನಡೆದ ವಿಶೇಷ ಕಾರ್ಯಕ್ರಮ ಹೆಚ್ಚು ಜನಪ್ರಿಯ ಕಾರ್ಯಕ್ರಮವೂ ಆಗಿತ್ತು. ಈ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ರಜತೋತ್ಸವ ಸಂದರ್ಭದಲ್ಲಿ ಹೊರತರಲಾಗುತ್ತಿದೆ.

(೩) ಶತಮಾನೋತ್ಸವಗಳು : ಪ್ರತಿಷ್ಠಾನ ಉದ್ದೇಶಿತ ಕ್ಷೇತ್ರದಲ್ಲಿ ಸಾಧನೆ ಮಾಡಿ ಸ್ಮರಣೀಯರಾಗಿದ್ದ ವಿದ್ವಾಂಸರ ಶತಮಾನೋತ್ಸವಗಳನ್ನು ಪ್ರತಿಷ್ಠಾನ ನಿಷ್ಠೆಯಿಂದ ಆಚರಿಸಿ ಅವರ ಜೀವನ-ಸಾಧನೆಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ವಚನ ಪಿತಾಮಹ ಫ.ಗು. ಹಳಕಟ್ಟಿ, ಕನ್ನಡದ ಆಚಾರ್ಯ ಪುರುಷ ಬಿ.ಎಂ. ಶ್ರೀಕಂಠಯ್ಯ, ಕನ್ನಡದ ಅಶ್ವಿನಿ ದೇವತೆಗಳೆನಿಸಿದ್ದ ಪ್ರೊ॥ ಟಿ.ಎಸ್. ವೆಂಕಣ್ಣಯ್ಯ ಮತ್ತು ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿ ಕರ್ನಾಟಕ ಐತಿಹಾಸಿಕ ರತ್ನ ಎಸ್. ಶ್ರೀಕಂಠಯ್ಯ, ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳಾಗಿದ್ದ ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ಕುವೆಂಪು ಇನ್ನೂ ಮುಂತಾದವರನ್ನು ಈ ಮಾಲೆಯಲ್ಲಿ ಸ್ಮರಿಸಲಾಗಿದೆ.

ಈ ಸಂಬಂಧದಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸಲಾಗಿದ್ದು ಅವುಗಳಲ್ಲಿ ಕೆಲವು ಹೀಗಿವೆ.

(೧) ಮಣಿಹ (ಫ.ಗು. ಹಳಕಟ್ಟಿ ಸಂಸ್ಮರಣ ಸಂಪುಟ)
(೨) ಶ್ರೀನಿಧಿ (ಬಿ.ಎಂ.ಶ್ರೀ. ಸಂಸ್ಮರಣ ಸಂಪುಟ)
(೩) ಬಿ.ಎಮ್.ಎಸ್. ದಿ ಮ್ಯಾನ್ ಆಫ್ ಇನ್ ಮಿಷನ್ (ಇಂಗ್ಲಿಷ್)
(೪) ಆಚಾರ್ಯ ಬಿ.ಎಂ.ಶ್ರೀ (ಜೀವನ ಚರಿತ್ರೆ)
(೫) ಕನ್ನಡದ ಕಣ್ವ ಬಿ.ಎಂ.ಶ್ರೀ. (ಮಕ್ಕಳಿಗಾಗಿ)
(೬) ಶ್ರೀವಾಣಿ (ಬಿ.ಎಂ.ಶ್ರೀ. ಅವರ ಸೂಕ್ತಿ ಸಂಕಲನ)
(೭) ಟಿ.ಎಸ್. ವೆಂಕಣ್ಣಯ್ಯ (ಜೀವನ ಚರಿತ್ರೆ)
(೮) ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರೆ)
(೯) ಕಾರಂತ ಕಾರಣ

(೪) ಸಂಸ್ಮರಣಗಳು : ಸಾಹಿತ್ಯ ಸಂಸೋಧನೆಗೆ ಗಣನೀಯ ಸೇವೆ ಸಲ್ಲಿಸಿದ ಖ್ಯಾತಿವೆತ್ತ ಹಿರಿಯ ವಿದ್ವಾಂಸರ ಸಾಧನೆಗಳನ್ನು ಜನತೆಗೆ ಪರಿಚಯಿಸುವ ವಿಶೇಷ ಸಂಸ್ಮರಣೆಯ ಕಾರ್ಯಕ್ರಮಗಳನ್ನು ಪ್ರತಿಷ್ಠಾನ ಹಮ್ಮಿಕೊಂಡು ಸಾಹಿತ್ಯ-ಸಂಶೋಧನ ಚಟುವಟಿಕೆಗಳನ್ನು ಜನಮನದಲ್ಲಿ ಬೇರೂರಿರುವಂತೆ ಮಾಡಲಾಗುತ್ತಿದೆ. ಇಡೀ ವರ್ಷ ಪ್ರತಿತಿಂಗಳೂ ಉಪನ್ಯಾಸ ಮಾಲೆ ವಿಚಾರಗೋಷ್ಠಿ

ಗಳನ್ನು ನಡೆಸಿ ಕೊನೆಯಲ್ಲಿ ಇವನ್ನೆಲ್ಲ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ಈವರೆಗೆ ಪ್ರಕಟವಾಗಿರುವ ಪುಸ್ತಕಗಳು ಈ ರೀತಿ ಇವೆ.

(೧) ಬೇಂದ್ರೆ ಸ್ಮೃತಿ
(೨) ಮಾಸ್ತಿ ಸ್ಮರಣೆ
(೩) ನವ್ಯಸ್ಫೂರ್ತಿ (ಗೋಕಾಕ್ ಕುರಿತು)
(೪) ಶಂಬಾ ಕೃತಿಸಮೀಕ್ಷೆ
(೫) ಎಂ.ವಿ.ಸೀ. ಸಂಸ್ಮರಣೆ

(೧೦) ಸಾಂಸ್ಕೃತಿಕ ಚಟುವಟಿಕೆಗಳು :

(೧) ಸುಗಮ ಸಂಗೀತ ಸ್ಪರ್ಧೆ : ರಾಜ್ಯಮಟ್ಟದಲ್ಲಿ ಪ್ರತಿ ವರ್ಷ ಬಿ.ಎಂ.ಶ್ರೀ. ಜನ್ಮದಿನದ ಸಂದರ್ಭದಲ್ಲಿ ಭಾವಗೀತೆ ಮತ್ತು ಜನಪದ ಗೀತೆ ವಿಭಾಗದಲ್ಲಿ ಹಿರಿಯರು ಮತ್ತು ಕಿರಿಯರಿಗೆ ಬಿ.ಎಂ.ಶ್ರೀ. ಮತ್ತು ಪಿ. ಕಾಳಿಂಗರಾವ್ ಹೆಸರಿನಲ್ಲಿ ಸುಗಮ ಸಂಗೀತ ಸ್ಪರ್ಧೆಯನ್ನು ೨೦೦೦ ದಿಂದ ನಡೆಸಲಾಗುತ್ತಿದೆ.

(೨) ಬಿ.ಎಂ.ಶ್ರೀ. ಸ್ಪರ್ಧೆಗಳು : ಬೆಳ್ಳೂರು ಭವನದ ಮೂಲಕ ಬಿ.ಎಂ.ಶ್ರೀ. ಸ್ಮಾರಕ ಚರ್ಚಾಸ್ಪರ್ಧೆ ಮತ್ತು ಇತರ ಸ್ಪರ್ಧೆಗಳನ್ನು ಶಾಲಾಕಾಲೇಜು ವಿದ್ಯಾರ್ಥಿಗಳಿಗಾಗಿ ೧೯೬೫ರಿಂದ ನಡೆಸಲಾಗುತ್ತಿದೆ.

(೩) ಸಾಹಿತ್ಯ ಪ್ರಶಸ್ತಿಗಳು, ಬಹುಮಾನಗಳು : ಪ್ರತಿಷ್ಠಾನ ದಲ್ಲಿರುವ ಕೆಲವು ದತ್ತಿನಿಧಿಗಳ ಮೂಲಕ ಈ ಕೆಲವು ಸಾಹಿತ್ಯ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

(೧) **ಸಾವಿತ್ರಮ್ಮ ದತ್ತಿ ಸಾಹಿತ್ಯ ಪ್ರಶಸ್ತಿ :** ಸಂಸ್ಥಾಪಕ ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿರುವ ಈ ದತ್ತಿಯಿಂದ ೧,೦೦೦ ರೂ. ಮೌಲ್ಯದ ಪ್ರಶಸ್ತಿಯನ್ನು ಕ್ರಮವಾಗಿ ಮಕ್ಕಳ ಸಾಹಿತ್ಯ ಮತ್ತು ಮಹಿಳಾ ಸೃಜನೇತರ ಸಾಹಿತ್ಯ ಕೃತಿಗಾಗಿ ನೀಡುತ್ತ ಬಂದಿದೆ. ಈ ಎರಡೂ ಸಾಹಿತ್ಯ ಪ್ರಕಾರಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಇದರ ಮುಖ್ಯವಾದ ಉದ್ದೇಶ.

(೨) **ರಾಸ ಸಾಹಿತ್ಯ ವಿಮರ್ಶಾ ಬಹುಮಾನ :** ಸಮೇತನ ಹಳ್ಳಿ ರಾಮರಾಯರು ಸ್ಥಾಪಿಸಿರುವ ದತ್ತಿಯಿಂದ ಅವರ ಸಾಹಿತ್ಯದ ವಿಮರ್ಶಾ ಲೇಖನಕ್ಕೆ ೫೦೦ ರೂ.ಗಳ ಬಹುಮಾನವನ್ನು ನೀಡಲಾಗುತ್ತಿದೆ.

(೩) **ಅನಂತರಂಗ ಸಂಶೋಧನ ಸಾಹಿತ್ಯ ಪ್ರಶಸ್ತಿ :** ಕಟ್ಟೆ ನಾಗರಾಜ್ ಅವರು ಸ್ಥಾಪಿಸಿರುವ ಅನಂತರಂಗ ಪ್ರತಿಷ್ಠಾನದ ಈ ದತ್ತಿಯಿಂದ ಪ್ರತಿವರ್ಷ ಉತ್ತಮ ಸಂಶೋಧನ ಕೃತಿಗೆ ಈ ಪ್ರಶಸ್ತಿಯನ್ನು ೨೦೦೨ನೇ ಸಾಲಿನಿಂದ ನೀಡಲಾಗುತ್ತಿದೆ.

(೪) **ಎಂ.ವಿ.ಸೀ. ಪುರಸ್ಕಾರ :** ಸಂಸ್ಥಾಪಕರೂ, ವಿದ್ವಾಂಸರೂ, ಕವಿಗಳೂ, ಸಂಘಟಕರೂ ಆದ ಪ್ರೊ। ಎಂ.ವಿ. ಸೀತಾರಾಮಯ್ಯನವರ ಹೆಸರಿನಲ್ಲಿ ಪ್ರತಿವರ್ಷ ಪ್ರಮುಖ ವಿದ್ವಾಂಸ-ಲೇಖಕ ಸಂಘಟಕರನ್ನು ವರ್ಷಕ್ಕೆ ಒಬ್ಬರಂತೆ ಗುರುತಿಸಿ ಗೌರವಿಸುವ ಈ ವಿಶೇಷ ಪ್ರಶಸ್ತಿ ೫೦೦೦ ರೂ.ಗಳ ಮೌಲ್ಯದ್ದಾಗಿದೆ. ಇದನ್ನು ಎಂ.ವಿ.ಸೀ. ಅವರ ಮಕ್ಕಳು ನಡೆಸಿಕೊಡುತ್ತಾರೆ.

(೧೧) ಗ್ರಂಥ ಪ್ರಕಟನೆ :

ಪ್ರತಿಷ್ಠಾನ ಈವರೆಗೆ ೬೦ಕ್ಕೂ ಹೆಚ್ಚಿನ ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ. ಎಲ್ಲವೂ ಸಾಹಿತ್ಯ ಸಂಶೋಧನೆ, ಪಾಂಡಿತ್ಯ ಸಂವರ್ಧನೆಗೆ ಸಂಬಂಧಿಸಿದ ಆಕರ ಗ್ರಂಥಗಳಾಗಿವೆ. ಜನಪ್ರಿಯವಲ್ಲದ, ಸಾಹಿತ್ಯ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧಕರಿಗೆ ಸಹಾಯವಾಗುವ ಗ್ರಂಥಗಳನ್ನು ಪ್ರಕಟಿಸುತ್ತ ವಿದ್ವತ್‌ವಲಯದಲ್ಲಿ ಮುಖ್ಯವೆನಿಸಿದೆ. ಪ್ರಾಚೀನ ಗ್ರಂಥಮಾಲೆ, ದತ್ತಿ ಉಪನ್ಯಾಸ ಮಾಲೆ, ಶತಮಾನೋತ್ಸವ ಮಾಲೆ, ವಿಚಾರಗೋಷ್ಠಿ ಮಾಲೆ, ದಶಮಾನೋತ್ಸವ ಮಾಲೆ, ದ್ವಿದಶಮಾನೋತ್ಸವ ಮಾಲೆ ಮುಂತಾದ ಮಾಲೆಗಳಲ್ಲಿ ಹಲವು ಮಹತ್ವದ ಕೃತಿಗಳನ್ನು ಪ್ರಕಟಿಸಲಾಗಿದೆ. 'ರಾಘವ ಪ್ರಕಾಶನ ದತ್ತಿ ಮಾಲೆ'ಯ ಮೂಲಕ ಎಂ.ವಿ.ಸೀ. ಸಮಗ್ರ ಸಾಹಿತ್ಯವನ್ನು ಪ್ರಕಟಿಸಲಾಗುತ್ತಿದೆ. ಈ ಎಲ್ಲ ಪುಸ್ತಕಗಳನ್ನು ಪ್ರಕಟನೆಗಳ ಮಾರಾಟದಿಂದ ಬಂದ ಹಣದಿಂದ ಮತ್ತು ಆಯಾ ಯೋಜನೆಗಳ ಮೂಲಕ ಪ್ರಕಟಿಸಲಾಗುತ್ತಿದೆ. ಈಚೆಗೆ ಹೈದರಾಬಾದಿನ ಕನ್ನಡ ಪ್ರಾಧ್ಯಾಪಕರೂ ಬಿ.ಎಂ.ಶ್ರೀ. ಶಿಷ್ಯರೂ, ಎಂ.ವಿ.ಸೀ. ಸಹಪಾಠಿ ಗಳೂ ಶ್ರೇಷ್ಠ ವಿದ್ವಾಂಸರೂ ಆದ ಪ್ರೊ। ಬಿ. ರಾಮಸ್ವಾಮಿಗಳ ಸಂಸ್ಮರಣ ಸಂಪುಟ 'ಮಧುರಸ್ಮೃತಿ' ವಿಶೇಷ ಸಂಪುಟವನ್ನು ಪ್ರಕಟಿಸಲಾಗಿದೆ.

(೧೨) ಹಳಗನ್ನಡ ಕಾವ್ಯಾಭ್ಯಾಸ ಶಿಬಿರ :

ಪ್ರತಿಷ್ಠಾನದ ಹತ್ತು ವರ್ಷಗಳ ಹಸ್ತಪ್ರತಿಶಾಸ್ತ್ರ ವಿದ್ಯಾರ್ಥಿ ಗಳು ಸೇರಿ ರೂಪಿಸಿರುವ 'ಸಿರಿಕಂಟ' ಎಂಬ ಅಧ್ಯಯನ ಗೋಷ್ಠಿಯ ಮೂಲಕ ೨೦೦೧ನೇ ಸಾಲಿನಿಂದ ಪ್ರತಿವರ್ಷ ಹಳಗನ್ನಡ ಕಾವ್ಯಾಭ್ಯಾಸ ಶಿಬಿರವನ್ನು ನಡೆಸಲಾಗುತ್ತಿದೆ. ಈ ಶಿಬಿರದಲ್ಲಿ ಅಧ್ಯಯನ ಆಸಕ್ತರಿಗೆ, ಪ್ರಾಚೀನ ಸಾಹಿತ್ಯ ಪ್ರಿಯರಿಗೆ,

ವಿದ್ಯಾರ್ಥಿಗಳಿಗೆ ಮತ್ತು ಕನ್ನಡ ಅಧ್ಯಾಪಕರಿಗೆ ಹಳಗನ್ನಡ ಕಾವ್ಯಗಳನ್ನು ಓದುವ ಆಸ್ವಾದಿಸುವ ಹಾಗೂ ಅರ್ಥೈಸುವುದಕ್ಕೆ ಅನುಕೂಲವಾಗುವಂತೆ ಅಭ್ಯಾಸವನ್ನು ಪ್ರಾಯೋಗಿಕವಾಗಿ ಕಲಿಸಲಾಗುತ್ತಿದೆ. ಡಾ॥ ಕೆ.ಆರ್. ಗಣೇಶ್, ಪ್ರೊ॥ ನಾ. ಗೀತಾಚಾರ್ಯ ಅವರ ಮಾರ್ಗದರ್ಶನದಲ್ಲಿ ನುರಿತ ಪ್ರಾಧ್ಯಾಪಕರು ಈ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿರುತ್ತಾರೆ.

(೧೩) ಹಸ್ತಪ್ರತಿ ಸಂರಕ್ಷಣ ಸೇವಾ ಕೇಂದ್ರ :

ಇದೇ 'ಸಿರಿಕಂಠ' ವಿದ್ಯಾರ್ಥಿಗೋಷ್ಠಿ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಸಂಪ್ರತೀಕರಣ ಸೇವೆಯನ್ನು ನೀಡುವ ಸಂರಕ್ಷಣಾ ಕೇಂದ್ರವನ್ನು ೨೦೦೩ರಿಂದ ಆರಂಭಿಸಿದೆ. ಪ್ರಾಚೀನ ಹಸ್ತಪ್ರತಿಗಳನ್ನು ಉಳ್ಳವರು ಅಪೇಕ್ಷಿಸಿದರೆ ಅವುಗಳನ್ನು ಅವರ ಸ್ಥಳದಲ್ಲೇ ಆಗಲೀ ಅಥವಾ ಪ್ರತಿಷ್ಠಾನದಲ್ಲೇ ಆಗಲೀ ವೈಜ್ಞಾನಿಕವಾಗಿ ಸಂರಕ್ಷಿಸಿಕೊಡಲಾಗುವುದು. ಹಾಗೆಯೇ ಸಂಪ್ರತಿ ಮತ್ತು ಸೂಚಿಗಳನ್ನು ಮಾಡಿಕೊಡಲಾಗುವುದು. ಇದಕ್ಕೆ ಸೂಕ್ತ ಸೇವಾಶುಲ್ಕವನ್ನು ವಿಧಿಸಲಾಗುವುದು. ಪ್ರೊ॥ ನಾ. ಗೀತಾಚಾರ್ಯ ಮತ್ತು ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್ ಅವರ ಮಾರ್ಗದರ್ಶನದಲ್ಲಿ ನುರಿತ ಹಸ್ತಪ್ರತಿ ತಜ್ಞರು ಈ ಸೇವೆಯನ್ನು ಒದಗಿಸುತ್ತಾರೆ.

ಹೀಗೆ ಹಲವು ಯೋಜನೆಯ ಮೂಲಕ ಪ್ರತಿಷ್ಠಾನ ನಿರಂತರವಾದ ಸಾಹಿತ್ಯ-ಸಂಶೋಧನ ಚಟುವಟಿಕೆಗಳನ್ನು ನಡೆಸಿಕೊಂಡು ಬರುವುದರ ಮೂಲಕ ಸಾಮಾನ್ಯ ಜನರಲ್ಲೂ ಸಂಶೋಧನ ಸಾಹಿತ್ಯದತ್ತ ಆಸಕ್ತಿ ಮೂಡುವಂತೆ ಮಾಡಲು ಶ್ರಮಿಸುತ್ತಿದೆ.

ಪ್ರತಿಷ್ಠಾನದಲ್ಲಿ ಇನ್ನು ಹಲವು ಯೋಜನೆಗಳು ಯೋಜನೆಗಳ ಹಂತದಲ್ಲೇ ಇದ್ದು ಕಾರ್ಯಪ್ರಗತಿಗೆ ಸಂಪನ್ಮೂಲದ ಕೊರತೆಯಿದೆ. ಸರ್ಕಾರ ಈವರೆಗೆ ಸಂಸ್ಥೆಯನ್ನು ಕಡೆಗಣಿಸಿದೆ. ಹೇಳಿಕೊಳ್ಳುವಂತಹ ಯಾವುದೇ ಆರ್ಥಿಕ ನೆರವನ್ನು ನೀಡುತ್ತಿಲ್ಲ. ಆಗೊಮ್ಮೆ ಈಗೊಮ್ಮೆ ಕೆಲವು ಯೋಜನೆಗಳಿಗಾಗಿ ಅಲ್ಪ ಸಹಾಯ ಧನವನ್ನು ನೀಡಿರುವುದನ್ನು ಬಿಟ್ಟರೆ ನಿರಂತರ ಅನುದಾನ ಕೊಡುತ್ತಿಲ್ಲ.

ಪ್ರತಿಷ್ಠಾನ ಹಮ್ಮಿಕೊಳ್ಳುವ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸಲು ತಜ್ಞರ ವಿದ್ವಾಂಸರ ಸಂಶೋಧಕರ ಮತ್ತು ಆಸಕ್ತರ ಸಕ್ರಿಯ ಸ್ವಯಂ ಸೇವಾ ತಂಡವೇ ಪ್ರತಿಷ್ಠಾನದಲ್ಲಿ ಕಾರ್ಯನಿರತವಾಗಿದೆ. ಸುಸಜ್ಜಿತ ಕಟ್ಟಡ ಗ್ರಂಥಾಲಯ, ಹಸ್ತಪ್ರತಿ ಭಂಡಾರ, ಸಂಶೋಧನ ಕೇಂದ್ರಗಳ ಸೌಲಭ್ಯವೂ ಇದೆ.

ಯೋಜನೆಗಳನ್ನು ಕಾರ್ಯಗತಗೊಳಿಸಲು ಆರ್ಥಿಕ ಸಂಪನ್ಮೂಲದ ಕೊರತೆಯೊಂದನ್ನು ಬಿಟ್ಟರೆ ಉಳಿದೆಲ್ಲ ಸೌಲಭ್ಯಗಳೂ ಪ್ರತಿಷ್ಠಾನದಲ್ಲಿದೆ. ಈ ಸೌಲಭ್ಯಕ್ಕಾಗಿ ಕೇಂದ್ರ, ರಾಜ್ಯ ಸರ್ಕಾರಗಳನ್ನು ಪ್ರಾರ್ಥಿಸಲಾಗಿದೆ. ವಿಶ್ವವಿದ್ಯಾನಿಲಯದ ಮಾನ್ಯತೆ ದೊರೆತರೆ ವಿಶ್ವವಿದ್ಯಾನಿಲಯಗಳ ಮತ್ತು ಯು.ಜಿ.ಸಿ. ಯನ್ನು ಅನುದಾನಕ್ಕಾಗಿ ಪ್ರಾರ್ಥಿಸಲು ಅನುಕೂಲವಾಗುತ್ತದೆ. ಈ ಉದ್ದೇಶಕ್ಕಾಗಿ ಕನ್ನಡ ವಿಶ್ವವಿದ್ಯಾಲಯವನ್ನು ಸಂಪರ್ಕಿಸಲಾಗಿದೆ. ಪ್ರಾರ್ಥಿಸಲಾಗಿದೆ. ಸರ್ಕಾರವು ತಾನೇ ಸ್ಥಾಪಿಸಿರುವ ಕವಿ ಸ್ಮಾರಕಗಳಿಗೆ ನೀಡುವಂತೆ ಈ ಕವಿಸ್ಮಾರಕಕ್ಕೂ ಉದಾರವಾದ ನೆರವನ್ನು ಪ್ರತಿವರ್ಷದ ಬಜೆಟ್‌ನಲ್ಲಿ ತೆಗೆದಿರಿಸಬೇಕಾಗಿದೆ.

(೧೪) ರಜತೋತ್ಸವ :

ಮೇ ೬, ೨೦೦೩ಕ್ಕೆ ಪ್ರತಿಷ್ಠಾನಕ್ಕೆ ರಜತೋತ್ಸವ ಸಂಭ್ರಮ. ೨೦೦೪ರ ವರೆಗೆ ರಜತೋತ್ಸವ ವರ್ಷವೆಂದು ಕರೆದಿದ್ದು ಹಲವು ಯೋಜನೆಗಳನ್ನು ರೂಪಿಸಿ ನಡೆಸಿಕೊಂಡು ಬರುತ್ತಿದೆ.

(೧) ರಜತಸಂಪುಟ 'ಸಾಹಿತ್ಯೋಪಾಸಕರು' : ಈ ಉಪನ್ಯಾಸಗಳನ್ನೆಲ್ಲ ಒಂದೇ ಗ್ರಂಥದಲ್ಲಿ ತರುವುದು. ಇದೊಂದು ಮಹತ್ವದ ಗ್ರಂಥವಾಗಲಿದ್ದು ೧೯ನೇ ಶತಮಾನದ ಪ್ರಾತಿನಿಧಿಕ ಸಾಹಿತ್ಯ ಚರಿತ್ರೆ ಎನಿಸುತ್ತದೆ.

(೨) ರಜತಸಿರಿ - ಸ್ಮರಣ ಸಂಚಿಕೆ : ಪ್ರತಿಷ್ಠಾನದ ೨೫ ವರ್ಷಗಳ ಸಾಧ್ಯತೆಗಳನ್ನು ದಾಖಲಿಸುವ ಮತ್ತು ಯೋಜನೆಗೆ ಜಾಹೀರಾತಿನ ಮೂಲಕ ಹಣ ಸಂಗ್ರಹಿಸುವ ಉದ್ದೇಶದ 'ಸ್ಮರಣಿಕೆ'.

(೩) ರಜತ ಮಹಡಿ : ನಿರ್ಮಾಣ ಹಂತದಲ್ಲಿರುವ ಬಿ.ಎಂ.ಶ್ರೀ. ಕಲಾಭವನವನ್ನು ಪೂರ್ಣಗೊಳಿಸಿ ಕೊನೆಯ ಮಹಡಿಯನ್ನು 'ರಜತ ಮಹಡಿ' ಎಂದು ಕರೆಯಲಾಗುವುದು.

(೪) ಸಿರಿಸಂಗೀತ : ಪ್ರತಿಷ್ಠಾನ ಈಗ ನಡೆಸುತ್ತಿರುವ ರಾಜ್ಯಮಟ್ಟದ ಸುಗಮ ಸಂಗೀತ ಸ್ಪರ್ಧೆಯ ಕಲಾವಿದರ ಮೂಲಕ ಪ್ರತಿ ತಿಂಗಳೂ ದಾಸರ, ವಚನಕಾರರ, ತತ್ವಪದಕಾರರ, ಜಾನಪದ ಕವಿಗಳ ಮತ್ತು ಆಧುನಿಕ ಕವಿಗಳ ರಚನೆಗಳನ್ನು ಸಂಗೀತಕ್ಕಳವಡಿಸಿ ಹಾಡಿಸುವ ವಿನೂತನ ಕಾರ್ಯಕ್ರಮವಾಗಿ 'ಸಿರಿಸಂಗೀತ'ವನ್ನು ಸಾಂಸ್ಕೃತಿಕ ಸಮಿತಿ ಆರಂಭಿಸಲು ಯೋಚಿಸಿದೆ.

ಮೇ ೬ರಿಂದ ಹಸ್ತಪ್ರತಿ-ಪುಸ್ತಕ ಪ್ರದರ್ಶನ ಆರಂಭಿಸಿ ಮೇ ೧೧ರಂದು ರಜತೋತ್ಸವ ವರ್ಷದ ಉದ್ಘಾಟನೆ ಮಾಡುವ ಮೂಲಕ ಈ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. □

ಈವರೆಗೆ ಪ್ರತಿಷ್ಠಾನದ ಪದಾಧಿಕಾರಿಗಳು

ಸ್ಥಾಪನೆ : ಮೇ ೬, ೧೯೭೯

ಸಂಸ್ಥಾಪಕರು : ಎಂ.ವಿ. ಸೀತಾರಾಮಯ್ಯ

ಉದ್ಘಾಟನೆ : ೧೦-೩-೧೯೮೦, ರಾಷ್ಟ್ರಕವಿ ಕುವೆಂಪು ಅವರಿಂದ

ಪೋಷಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್ (೬-೬-೧೯೮೬ರವರೆಗೆ)

ಗೌರವಾಧ್ಯಕ್ಷರು : ನಿಟ್ಟೂರು ಶ್ರೀನಿವಾಸರಾವ್ (೮-೧೦-೧೯೮೬ರಿಂದ ೧೨-೮-೨೦೦೪ರವರೆಗೆ)

ಸಂಸ್ಥಾಪಕ ಕಾರ್ಯದರ್ಶಿ : ಎಂ.ವಿ. ಸೀತಾರಾಮಯ್ಯ (೮-೧೦-೧೯೮೬ರವರೆಗೆ)

ಅಧ್ಯಕ್ಷರು :

ನಿಟ್ಟೂರು ಶ್ರೀನಿವಾಸರಾವ್ (೮-೧೦-೧೯೮೬ರವರೆಗೆ)

ಎಂ.ವಿ. ಸೀತಾರಾಮಯ್ಯ (೮-೧೦-೧೯೮೬ ರಿಂದ ೧೨-೩-೯೦)

ಎಲ್.ಎಸ್. ಶೇಷಗಿರಿರಾವ್ (೧೨-೩-೯೦ ರಿಂದ ೧೫-೩-೧೯೯೨)

ಎನ್. ಬಸವಾರಾಧ್ಯ (೧೫-೩-೯೨ ರಿಂದ ೫-೧೦-೨೦೦೧)

ಟಿ.ವಿ. ವೆಂಕಟಾಚಲ ಶಾಸ್ತ್ರೀ (೯-೧೦-೨೦೦೧ ರಿಂದ)

ಕೋಶಾಧಿಕಾರಿಗಳು :

ಎಂ.ವಿ. ಸೀತಾರಾಮಯ್ಯ (೧೦-೧೦-೮೨)

ಪಿ.ವಿ. ನಾರಾಯಣ (೧೦-೧೦-೮೨ ರಿಂದ ೧೩-೧೦-೮೩)

ಕೆ.ಆರ್. ಗಣೇಶ್ (೧೩-೧೦-೮೯ ರಿಂದ ೨೦-೧೦-೯೨)

ಕೆ. ರಾಜಾರಾವ್ (೩೦-೯-೮೬ ರಿಂದ ೧೩-೧೦-೮೯)

ಎಸ್.ಎಸ್. ರಾಮಸ್ವಾಮಿ ಅಯ್ಯರ್ (೧೩-೧೦-೮೩ ರಿಂದ ೩೦-೯-೮೬ ಹಾಗೂ ೨೦-೧೦-೯೨ ರಿಂದ ೨೭-೯-೨೦೦೩)

ಡಿ. ಲಿಂಗಯ್ಯ (೨೮-೯-೨೦೦೩ ರಿಂದ)

ಗೌರವ ಕಾರ್ಯದರ್ಶಿಗಳು :

ಕೆ.ಆರ್. ಗಣೇಶ್ (೧೦-೧೦-೮೨ರ ವರೆಗೆ)

ಕೆ.ಎಸ್. ಮಧುಸೂದನ (೨-೮-೮೧ರ ವರೆಗೆ)

ಗೋವಿಂದ ಅ. ಜಾಲಿಹಾಳ (೨-೮-೮೧ರಿಂದ ೨೫-೯-೮೩)

ದೊಡ್ಡರಂಗೇಗೌಡ (೧೦-೧೦-೮೨ರಿಂದ ೨೫-೯-೮೩)

ಎಂ.ವಿ. ಸತ್ಯನಾರಾಯಣ (೨೫-೯-೮೩ರಿಂದ ೨೦-೧೦-೯೨)

ಜಿ.ಎಸ್. ವೆಂಕಟರಾಜು (೨೫-೯-೮೩ ರಿಂದ)

ನಾ. ಗೀತಾಚಾರ್ಯ (೨೦-೧೦-೯೨ ರಿಂದ ೬-೧೨-೮೦ರಿಂದ ಸಹಾಯಕ ಸದಸ್ಯರಾಗಿ)

ಜಿ. ಚನ್ನವೀರಸ್ವಾಮಿ (೨೦-೧೦-೯೩ ರಿಂದ; ೬-೧೨-೯೨ ನಾಮಕರಣ ಸದಸ್ಯರು)

ವ್ಯವಸ್ಥಾಪಕ ಕಾರ್ಯದರ್ಶಿಗಳು :

ಡಿ. ಲಿಂಗಯ್ಯ (೧೯-೧೦-೯೭ರಿಂದ ೨೭-೯-೨೦೦೩ ನಾಮಕರಣದ ಸದಸ್ಯರಾಗಿ)

ಕೆ.ಆರ್. ಇಕ್ಬಾಲ್ ಅಹಮದ್ (೧೯-೧೦-೯೭ರಿಂದ ೨೭-೯-೨೦೦೩ ನಾಮಕರಣ ಸದಸ್ಯರಾಗಿ)

ಕಾರ್ಯಸಮಿತಿ ಸದಸ್ಯರು

ಆಯ್ಕೆ ಸದಸ್ಯರು

ಎಂ. ಚಿದಾನಂದಮೂರ್ತಿ

ಜಿ. ವೆಂಕಟಸುಬ್ಬಯ್ಯ (೧೩-೧೦-೧೯೮೯ರ ವರೆಗೆ)

ಕೆ.ಕೆ. ಗೌಡ, ಮದರಾಸು (೨೩-೯-೯೦ರ ವರೆಗೆ)

ಕೆ.ಎಂ. ಕೃಷ್ಣರಾವ್ (೨೫-೯-೮೩ರ ವರೆಗೆ)

ಎಂ.ಎಂ. ಕಲಬುರ್ಗಿ, ಧಾರವಾಡ (೨೫-೯-೮೮ರ ವರೆಗೆ)

ಗೊರೂರು ರಾಮಸ್ವಾಮಿ ಅಯ್ಯಂಗಾರ್ (೧೩-೧೦-೮೯ರ ವರೆಗೆ)

ಗರ್ಗೇಶ್ವರಿ ವೆಂಕಟಸುಬ್ಬಯ್ಯ (೧೩-೧೦-೮೯ರ ವರೆಗೆ)

ಶ್ರೀ ಡಿ.ವಿ.ಕೆ. ಮೂರ್ತಿ, ಮೈಸೂರು (೨೫-೯-೮೩ರ ವರೆಗೆ)

ಚಿ.ನ. ಮಂಗಳ (೨೦-೭-೧೯೮೧ರ ವರೆಗೆ)

ಸಿದ್ಧಯ್ಯ ಪುರಾಣಿಕ (೨೦-೭-೮೧ ರಿಂದ ೨೦-೧೦-೯೩ರ ವರೆಗೆ)

ಕೆ.ಆರ್. ಗಣೇಶ್ (೧೦-೧೦-೮೨ ರಿಂದ ೧೩-೧೦-೮೯,
೨೦-೧೦-೯೨ ರಿಂದ)

ಟಿ.ವಿ. ವೆಂಕಟಾಚಲಶಾಸ್ತ್ರೀ (೨೩-೯-೯೦ರಿಂದ)

ಎಲ್.ಎಸ್. ಶೇಷಗಿರಿರಾವ್ (೮-೧೦-೮೬ರಿಂದ ನಾಮಕರಣ,
೧೩-೧೦-೮೯ ರಿಂದ ೧೨-೩-೯೦ ಮತ್ತು ೧೫-೩-೯೨ರಿಂದ)

ಅ.ರಾ. ಮಿತ್ರ (೨೧-೯-೯೧ರಿಂದ)

ತಿ.ಶ್ರೀ. ನಾಗಭೂಷಣ (೧೨-೧೦-೮೭ರಿಂದ ನಾಮಕರಣ;
೧೩-೧೦-೮೯ರಿಂದ)

ವಸಂತ ಕುಷ್ಟಗಿ (೨೫-೯-೮೮ ರಿಂದ ೨೧-೯-೯೧ರ ವರೆಗೆ)

ಎನ್.ಎಸ್. ರಾಮಸ್ವಾಮಿ ಅಯ್ಯರ್
(೩೦-೯-೮೬ರಿಂದ ೨೧-೧೦-೯೨)

ಪಿ.ವಿ. ನಾರಾಯಣ (೩೦-೯-೮೬ರಿಂದ)

ಕೆ. ಸುಬ್ಬರಾಯನ್ (೧೩-೧೦-೮೯ರಿಂದ ೨೧-೯-೯೧)

ಎಂ.ವಿ. ಸತ್ಯನಾರಾಯಣ (೨೦-೧೦-೯೨ರಿಂದ)

ಎ. ನರಸಿಂಹಮೂರ್ತಿ (೨೦-೧೦-೯೩ರಿಂದ ೨೫-೯-೯೬)

ಎಂ.ಎಲ್. ಲಲಿತಮ್ಮ (೧೧-೧೧-೯೦ರಿಂದ ನಾಮಕರಣ
೨೯-೯-೯೬ರಿಂದ)

ನಾಮಕರಣ ಸದಸ್ಯರು

ಆರ್. ಶೇಷಶಾಸ್ತ್ರಿ (೧೦-೧೦-೮೨ರಿಂದ ೮-೧೦-೮೬)

ಎಸ್. ರಾಮಚಂದ್ರ (೮-೧೦-೮೬ರಿಂದ ೧೩-೧೦-೮೯)

ಎಂ.ಎಸ್. ಭಾಸ್ಕರ್ (೧೫-೩-೯೦ರಿಂದ ನಾಮಕರಣ)

ಎಸ್.ವಿ. ಪ್ರಭಾವತಿ (೧೩-೧೦-೮೯ರಿಂದ ೧೧-೧೧-೯೦)

ಎಂ.ಎಚ್. ಕೃಷ್ಣಯ್ಯ (೨೦-೧೦-೯೨ರಿಂದ)

ಎಸ್. ವಿ. ಶ್ರೀನಿವಾಸರಾವ್ (೨೧-೯-೯೧ರಿಂದ)

ಬೆಳ್ಳೂರು ಭವನದ ಕಾರ್ಯಾದ್ಯಕ್ಷ/ಕಾರ್ಯದರ್ಶಿ
(೧೩-೬-೯೪ರಿಂದ)

ಗೌರವ ಸದಸ್ಯರು

೭-೧೦-೧೯೭೯ರ ಕಾರ್ಯ ಸಮಿತಿಯಲ್ಲಿ ತೀರ್ಮಾನಿಸಿದ "ಸುಪ್ರಸಿದ್ಧ ವಿದ್ವಾಂಸರೂ ಸಾಹಿತಿಗಳೂ ಆದ ಹತ್ತು ಜನ ಹಿರಿಯ ಮಹನೀಯರನ್ನು ಗೌರವ ಸದಸ್ಯರನ್ನಾಗಿ ಸ್ವೀಕರಿಸುವುದು" ಎಂಬ ನಿಯಮದಂತೆ ಕಾಲಕಾಲಕ್ಕೆ ಪುನರ್‌ರಚಿಸಲಾಗುತ್ತಿದೆ. ಸದಸ್ಯತ್ವ ಜೀವಿತಾವಧಿಯವರೆಗೆ ಇರುತ್ತದೆ.

೧. ಎ.ಎನ್. ಮೂರ್ತಿರಾವ್
೨. ಕುವೆಂಪು (೧೦-೧೧-೯೪)
೩. ಪು.ತಿ.ನ. (೧೩-೮-೯೮)
೪. ವಿ. ಸೀತಾರಾಮಯ್ಯ (೪-೯-೮೩)
೫. ಎಸ್.ವಿ. ರಂಗಣ್ಣ (೧೭-೨-೮೭)
೬. ಎಂ. ಮರಿಯಪ್ಪಭಟ್ಟ (೧೯೯೦)
೭. ಬಿ. ಪುಟ್ಟಸ್ವಾಮಯ್ಯ (ಡಿ. ೮೩)
೮. ಎಲ್. ಗುಂಡಪ್ಪ (ಡಿ. ೮೬)
೯. ಆದ್ಯರಂಗಾಚಾರ್ಯ (೧೭-೧೦-೮೦)
೧೦. ಕೆ. ವೆಂಕಟರಾಮಪ್ಪ (೨-೯-೯೧)
೧೧. ಸೇಡಿಯಾಪು ಕೃಷ್ಣಭಟ್ಟ (೯-೬-೯೬)
೧೨. ರಂ. ಶ್ರೀ. ಮುಗಳಿ (೨೦-೨-೯೩)
೧೩. ವಿ.ಕೃ. ಗೋಕಾಕ್ (೨೫-೪-೯೨)
೧೪. ಆರ್.ಎಸ್. ಪಂಚಮುಖಿ (ಜೂನ್ ೮೩)
೧೫. ಗೊರೂರು ರಾಮಸ್ವಾಮಿ ಅಯ್ಯಂಗಾರ್ (೧೨-೧೦-೮೭ ರಿಂದ ೨೮-೯-೯೧)
೧೬. ಶಂ.ಬಾ. ಜೋಶಿ (೨೮-೯-೯೧)
೧೭. ತ.ಸು. ಶಾಮರಾವ್ (೬-೧೨-೯೨ರಿಂದ ೨೧-೮-೯೮)
೧೮. ಸಿಂಪಿ ಲಿಂಗಣ್ಣ (೧೨-೧-೯೧ರಿಂದ ೪-೫-೯೩)
೧೯. ಎಸ್.ವಿ. ಪರಮೇಶ್ವರಭಟ್ಟ (೧೨-೨-೯೧ರಿಂದ)
೨೦. ಗೋಪಾಲಕೃಷ್ಣ ಅಡಿಗ (೨೧-೧೦-೮೭ರಿಂದ ೪-೧-೯೨)
೨೧. ಜಿ.ಎಸ್. ದೀಕ್ಷಿತ್ (೧೨-೧-೧೯೯೧ರಿಂದ)
೨೨. ಎನ್. ರಂಗನಾಥ ಶರ್ಮಾ (೩-೫-೯೪ರಿಂದ)
೨೩. ಸಿದ್ಧಯ್ಯ ಪುರಾಣಿಕ (೩-೫-೯೪ರಿಂದ ೪-೯-೯೪)
೨೪. ಜಿ.ಎಸ್. ಗಾಯಿ (೬-೧೨-೧೯೯೨ರಿಂದ ೬-೨-೯೫)
೨೫. ಗರ್ಗೇಶ್ವರಿ ವೆಂಕಟಸುಬ್ಬಯ್ಯ (೨-೯-೯೫ರಿಂದ)
೨೬. ಆರ್.ಸಿ. ಹಿರೇಮಠ (೨-೯-೯೫ರಿಂದ ೩-೧೧-೯೮)
೨೭. ಎಚ್.ವಿ. ಸಾವಿತ್ರಮ್ಮ (೨-೯-೯೫ರಿಂದ ೨೭-೧೨-೯೫)
೨೮. ಗೌರೀಶ ಕಾಯ್ಕಿಣಿ (೨-೬-೧೯೯೭ರಿಂದ ೧೪-೧೧-೨೦೦೨)
೨೯. ಶಾಂತಾದೇವಿ ಮಾಳವಾಡ (೨-೬-೧೯೯೭ರಿಂದ)

❑

ಬಿ.ಎಂ.ಶ್ರೀ. ಪ್ರತಿಷ್ಠಾನದ ಶಾಖಾ ಕಚೇರಿ : ಬೆಳ್ಳೂರು

ಬೆಳ್ಳೂರು ಭವನದ ಸ್ಥಾನಿಕ ಸಮಿತಿ

ಭವನ ಹೆಸರು :

ಆಚಾರ್ಯ ಬಿ.ಎಂ.ಶ್ರೀ. ಶತಮಾನ ಭವನ

ನಿರ್ಮಾಣ :

ಕರ್ನಾಟಕ ಸರ್ಕಾರದ ಮಂಡ್ಯ ಜಿಲ್ಲಾ ಪಂಚಾಯಿತಿಯ ಮೂಲಕ ಭೂಸೇನಾ ನಿಗಮ

ನಿರ್ಮಾಣ ವೆಚ್ಚ :

೬,೦೦,೦೦೦-೦೦ (ಎರಡು ಮಹಡಿ ೫೫ x ೧೮)

ಭವನದಲ್ಲಿರುವ ಸೌಲಭ್ಯ :

ಶ್ರೀ ಸಭಾಂಗಣ, ಶ್ರೀ ಶತಮಾನ ಗ್ರಂಥಾಲಯ,
ಶ್ರೀ ವಸ್ತು ಸಂಗ್ರಹಾಲಯ, ಪ್ರತಿಷ್ಠಾನದ ಕಚೇರಿ

ಸ್ಥಳ ದಾನಿಗಳು :

ಎಸ್. ಚಂದ್ರಶೇಖರಯ್ಯ (ಬಿ.ಎಂ.ಶ್ರೀ. ಬಂಧುಗಳು)

ಸಂಸ್ಥಾಪಕರು :

ಎಂ.ವಿ. ಸೀತಾರಾಮಯ್ಯ
(ಶತಮಾನೋತ್ಸವ ಸಮಿತಿ ಉಪಾಧ್ಯಕ್ಷರು)

ಶಂಕುಸ್ಥಾಪನೆ :

೩-೧-೧೯೮೪ (ಬಿ.ಎಂ.ಶ್ರೀ. ಜನ್ಮಶತಮಾನೋತ್ಸವದಲ್ಲಿ)
(ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎ.ಎನ್. ಮೂರ್ತಿರಾವ್, 'ಶ್ರೀ' ಅವರ ಸಹೋದರ ಬಿ.ಎಂ. ಶಿವರಾಮಯ್ಯ, ಮರಿಮಗಳು-ವಿಶಾಲಾಕ್ಷಿ ಮುಂತಾದವರ ಉಪಸ್ಥಿತಿಯಲ್ಲಿ)

ಉದ್ಘಾಟನೆ :

೧೩-೬-೧೯೯೪ ಎ.ಎನ್. ಮೂರ್ತಿರಾವ್ ಅವರಿಂದ

ಮಹಾ ಪೋಷಕರು :

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ

ಗೌರವಾಧ್ಯಕ್ಷರು :

ನಿಟ್ಟೂರು ಶ್ರೀನಿವಾಸರಾವ್
(ಶತಮಾನೋತ್ಸವ ಸಮಿತಿ ಅಧ್ಯಕ್ಷರು)

ಪೋಷಕರು :

ಕೆ. ಸಿಂಗಾರಿಗೌಡ (ಶತಮಾನೋತ್ಸವ ಸ್ವಾಗತ ಸಮಿತಿ ಅಧ್ಯಕ್ಷರು)
ಜಿ. ನಾರಾಯಣ (ಶತಮಾನೋತ್ಸವ ಸಮಿತಿ ಕಾರ್ಯಾಧ್ಯಕ್ಷರು)

ಕಾರ್ಯಾಧ್ಯಕ್ಷರು :

ಎಸ್. ಕೃಷ್ಣಮೂರ್ತಿ
(ಶತಮಾನೋತ್ಸವ ಸ್ವಾಗತ ಸಮಿತಿ ಕಾರ್ಯದರ್ಶಿಗಳು)

ಕಾರ್ಯದರ್ಶಿಗಳು :

ಬಿ.ಜಿ. ಸುನಿಲ್‌ಕುಮಾರ್, ಬಿ.ಸಿ. ಫಣಿರಾಜ್
ಎಚ್.ಕೆ. ಸುರೇಶ್, (ಸ್ಥಳೀಯ)
ಸೋಮಸುಂದರ್
ನಾ. ಗೀತಾಚಾರ್ಯ, ರಮೇಶ್‌ಗೌಡ

ಕೋಶಾಧಿಕಾರಿ

ಬಿ.ಜಿ. ಸುನಿಲ್‌ಕುಮಾರ್

ಇಂದಿನ ಕಾರ್ಯಕಾರಿ ಸಮಿತಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಂಡ್ಯ
ಜಿಲ್ಲಾಧಿಕಾರಿಗಳು, ಮಂಡ್ಯ
ಮಾನ್ಯ ಶಾಸಕರು, ನಾಗಮಂಗಲ
ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷರು, ಮಂಡ್ಯ
ತಾಲ್ಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷರು, ನಾಗಮಂಗಲ
ಪ್ರಾಚಾರ್ಯರು, ಬೆಳ್ಳೂರು ಪದವಿಪೂರ್ವ ಕಾಲೇಜು
ಮಂಡಲ ಪ್ರಧಾನರು, ಬೆಳ್ಳೂರು
ಬಿ. ಬಸವರಾಜು, ಮಾಜಿ ಜಿಲ್ಲಾಪರಿಷತ್ ಅಧ್ಯಕ್ಷರು
ಹೊ. ಶ್ರೀನಿವಾಸಯ್ಯ, ಬೆಂಗಳೂರು
ಎಚ್.ಎಲ್. ನಾಗೇಗೌಡ, ಬೆಂಗಳೂರು
ಎನ್. ಬಸವಾರಾಧ್ಯ, ಬೆಂಗಳೂರು
ಜಿ. ಚೆನ್ನವೀರಸ್ವಾಮಿ, ಬೆಂಗಳೂರು
ಎಸ್.ವಿ. ಶ್ರೀನಿವಾಸರಾವ್, ಬೆಂಗಳೂರು
ಎನ್.ಎಸ್. ಕೃಷ್ಣಸ್ವಾಮಿ, ಬೆಂಗಳೂರು

ಕರ್ನಾಟಕ ಲೋಚನ

ಧ್ಯೇಯೋದ್ದೇಶ, ಸ್ವರೂಪ

೧೯-೧೦-೧೯೮೨ರಂದು ನಡೆದ ಪ್ರತಿಷ್ಠಾನದ ಕಾರ್ಯಸಮಿತಿಯಲ್ಲಿ ಅಂಗೀಕೃತವಾದ ನಿರ್ಣಯ : "ಸಂಸ್ಥಾಪಕ ಕಾರ್ಯದರ್ಶಿಯವರ ಸೂಚನೆಯಂತೆ, ಬರುವ ೧೯೮೩ನೆಯ ವರ್ಷದಿಂದ ಸಂಶೋಧನಾತ್ಮಕ ಪಾಂಡಿತ್ಯ ಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರಸಾಹಿತ್ಯದ ಗ್ರಂಥಗಳು-ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ ಇವುಗಳಿಗೆ ಸಂಬಂಧಿಸಿದ ಟೀಕೆ ಟಿಪ್ಪಣಿಗಳು-ಇವುಗಳಿಗೆ ಮೀಸಲಾದ ವಿದ್ವತ್ ಪತ್ರಿಕೆಯನ್ನು ವರ್ಷಕ್ಕೆ ಎರಡು ಸಲ (ಜೂನ್ ಮತ್ತು ಡಿಸೆಂಬರ್) ಪ್ರಕಟಿಸಬಹುದೆಂದೂ ಈ ಪತ್ರಿಕೆಗೆ "ಲೋಚನ" ಎಂಬ ಹೆಸರನ್ನು ಇಡಬಹುದೆಂದೂ ತೀರ್ಮಾನಿಸಲಾಯಿತು. ಪ್ರಾರಂಭದಲ್ಲಿ ಪತ್ರಿಕೆ ಗಾತ್ರ ಡೆಮಿ ೧/೮ ಆಕಾರದ ೬೪ ಪುಟಗಳಷ್ಟು ಇರಬಹುದೆಂದು ಸೂಚಿಸ ಲಾಯಿತು.

'ಲೋಚನ' ವಿದ್ವತ್ ಪತ್ರಿಕೆಯಲ್ಲಿ 'ವಸ್ತು ಸಂಗ್ರಹ' ಒಂದು ವಿಶಿಷ್ಟ ಅಂಕಣ. ಆಯಾ ಅವಧಿಯಲ್ಲಿ ಬಂದ ಸಾಹಿತ್ಯ-ಪಾಂಡಿತ್ಯ-ಸಂಶೋಧನೆಗೆ ಸಂಬಂಧಿಸಿದ ಸುದ್ದಿಗಳ-ಟಿಪ್ಪಣಿಗಳ-ವಿಶೇಷ ಸಂಗತಿಗಳನ್ನು ಅದರಲ್ಲಿ ಸಂಕಲಿಸಿದೆ. ಈ ಅಂಕಣದಲ್ಲಿ ಕೆಲವೊಮ್ಮೆ ದೀರ್ಘ ಲೇಖನಗಳೂ ವಿವರಣಾತ್ಮಕ ಟಿಪ್ಪಣಿಗಳೂ ಇರುತ್ತವೆ. ಇವೂ ಸಹ ಸಂಶೋಧಕರಿಗೆ ಉತ್ತಮ ಆಕರವಾಗ ಬಹುದೆಂಬ ಆಶಯದಿಂದ ಇಲ್ಲಿ ಅಂತಹ ಟಿಪ್ಪಣಿಗಳ ಸೂಚಿಯನ್ನು ನೀಡಲಾಗುತ್ತಿದೆ. ಸಾಮಾನ್ಯವಾಗಿ ಈ ಟಿಪ್ಪಣಿಗಳನ್ನು ಎಂ.ವಿ.ಸೀ. ಅವರು ಇರುವವರೆಗೆ ಅವರೇ ಸಿದ್ಧಪಡಿಸುತ್ತಿದ್ದರು. ಅನಂತರ ನಾ. ಗೀತಾಚಾರ್ಯ ಅವರು ಅದನ್ನು ಮುಂದುವರಿಸಿದ್ದಾರೆ. ಬೇರೆ ಬೇರೆಯವರೂ ಕೆಲವೊಮ್ಮೆ ನೀಡಿದ್ದಾರೆ. ಇಂಥ ದೊಂದು ಸದುದ್ದೇಶ ನಿಂತುಹೋಗಬಾರದೆಂಬ ಕಾರಣದಿಂದ ಸಣ್ಣಸಣ್ಣ ಟಿಪ್ಪಣಿಗಳಲ್ಲಿ ಉಳಿಸಿಕೊಂಡು ಬರಲಾಗಿದೆ. ಸಂಶೋಧನಾ ಪತ್ರಿಕೆಯೊಂದು ಸಂಶೋಧನಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಮಕಾಲೀನ ಸಂಗತಿಗಳನ್ನು ಗಮನಿಸುತ್ತಿತ್ತು ಎಂಬ ಅಂಶ ಇದರಿಂದ ದಾಖಲೆಯಾಗುತ್ತದೆ.

ಸಂಪಾದಕ ಮಂಡಲಿ

ಅಧ್ಯಕ್ಷರು :

ನಿಟ್ಟೂರು ಶ್ರೀನಿವಾಸರಾವ್ (೧೯೮೩ರಿಂದ ೧೯೮೬ರ ವರೆಗೆ)
ಎಂ.ವಿ. ಸೀತಾರಾಮಯ್ಯ (೧೯೮೬ರಿಂದ ೧೯೯೦ರ ವರೆಗೆ)
ಎಲ್.ಎಸ್. ಶೇಷಗಿರಿರಾವ್ (೧೯೯೦ರಿಂದ ೧೯೯೨ರ ವರೆಗೆ)
ಎನ್. ಬಸವಾರಾಧ್ಯ (೧೯೯೨ ರಿಂದ ೨೦೦೧)
ಟಿ.ವಿ. ವೆಂಕಟಾಚಲ ಶಾಸ್ತ್ರೀ (೨೦೦೧ ರಿಂದ)

ಪ್ರಧಾನ ಸಂಪಾದಕರು :

ಜಿ. ವೆಂಕಟಸುಬ್ಬಯ್ಯ (೧೯೮೮ರ ವರೆಗೆ)

ವ್ಯವಸ್ಥಾಪಕ ಸಂಪಾದಕರು :

ಎಂ.ವಿ. ಸೀತಾರಾಮಯ್ಯ (೧೯೯೦ರ ವರೆಗೆ)
ನಾ. ಗೀತಾಚಾರ್ಯ (೧೯೯೦ ರಿಂದ)

ಸಂಪಾದಕರು :

ಟಿ.ಆರ್. ಮಹದೇವಯ್ಯ (೮-೧೦-೧೯೮೬ರ ವರೆಗೆ)
ಟಿ. ಕೇಶವಭಟ್ಟ (೮-೧೦-೧೯೮೬ ರಿಂದ ಜೂನ್ ೧೯೯೯)
ಎಸ್.ವಿ. ಶ್ರೀನಿವಾಸರಾವ್ (ಡಿಸೆಂಬರ್ ೧೯೯೯ ರಿಂದ)
ಡಾ. ಎನ್. ಸುಬ್ರಹ್ಮಣ್ಯಂ ಡಿಸೆಂಬರ್ ೨೦೦೧ ರಿಂದ)

ಸಹಾಯಕ ಸಂಪಾದಕರು :

ಎನ್.ಎಸ್. ರಾಮಸ್ವಾಮಿ ಅಯ್ಯರ್

ಮಂಡಲಿ ಸದಸ್ಯರು

ಬೆಂಗಳೂರು :

೧. ಗರ್ಗೇಶ್ವರಿ ವೆಂಕಟಸುಬ್ಬಯ್ಯ
೨. ಜಿ. ವೆಂಕಟಸುಬ್ಬಯ್ಯ (೧೯೮೮ ರಿಂದ)
೩. ಎಲ್.ಎಸ್. ಶೇಷಗಿರಿರಾವ್ (೧೯೯೨ ರಿಂದ)
೪. ಆರ್. ಶೇಷಶಾಸ್ತ್ರಿ (೧೯೮೬ ರಿಂದ)
೫. ಎಸ್. ಶಿವಣ್ಣ
೬. ಪಿ.ವಿ. ನಾರಾಯಣ
೭. ಅನಂತಪದ್ಮನಾಭರಾವ್
೮. ಕೆ.ಆರ್. ಗಣೇಶ್
೯. ಜಿ. ಅಬ್ದುಲ್ ಬಷೀರ್ (೧೩-೧೦-೮೯ ರಿಂದ)

ಹೊರ ಊರು :

ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಮೈಸೂರು
ಎಸ್.ಪಿ. ಪಾಟೀಲ, ಧಾರವಾಡ
ಶ್ರೀನಿವಾಸ ಹಾವನೂರ, ಮಂಗಳೂರು (೧೯೮೭ ರಿಂದ; ಮುಂಬಯಿ, ೧೯೯೨ ರಿಂದ; ಪುಣೆ, ೧೯೯೬ ರಿಂದ; ಬೆಂಗಳೂರು)
ವಸಂತ ಕುಷ್ಟಗಿ (೧೯೮೭ ಜೂನ್‌ನಿಂದ)

ಹೊರನಾಡು :

ಎ. ಶ್ರೀಕೃಷ್ಣಭಟ್ ಅರ್ತಿಕಜೆ, ಮದರಾಸು
ಕೆ.ಕೆ. ಗೌಡ, ಮದರಾಸು (೧೯೯೦ರ ವರೆಗೆ)
ಬಿ. ರಾಮಚಂದ್ರರಾವ್, ಹೈದರಾಬಾದು

ಪ್ರತಿಷ್ಠಾನದ ಕಾರ್ಯಪಡೆ

ಪದಾಧಿಕಾರಿಗಳ, ಕಾರ್ಯಸಮಿತಿ ಸದಸ್ಯರ, ಸಂಪಾದಕ ವರ್ಗದ ಮತ್ತು ಸಂಚಾಲಕರ ಒಂದು ಸಮರ್ಥ ವಿದ್ವಾಂಸರ ತಂಡವೇ ಈ ಸಂಸ್ಥೆಯ ಬೆಳವಣಿಗೆಯ ಹಿಂದೆ ಇದೆ. ಇದು ದಾಖಲೆಯಲ್ಲಿ ನಿಲ್ಲುವ ಅಂಶ. ದಾಖಲೆಯಾಗದ ಇನ್ನೊಂದು ಅಂಶವೂ ಈ ಸಂಸ್ಥೆಯ ದಾಖಲೆಗಳ ಪುಟಗಳಲ್ಲಿರುವುದನ್ನು ಯಾರೂ ಮರೆಯಲಾಗುವುದಿಲ್ಲ.

ಸಂಸ್ಥಾಪಕ ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿದ ಈ ಸಂಸ್ಥೆಗೆ ತಾವಿರುವವರೆಗೂ ತಮ್ಮ ಮನೆಯನ್ನೇ ಆಶ್ರಯವಾಗಿ ನೀಡಿ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದರು. ದಿನನಿತ್ಯದ ವ್ಯವಹಾರಗಳನ್ನು ಸಭೆ-ಸಮಾರಂಭಗಳ ಪೂರ್ವಸಿದ್ಧತೆಗಳನ್ನು ನೋಡಿಕೊಳ್ಳಲು ಒಂದು ಸಮರ್ಥ ಕಾರ್ಯಕರ್ತರ ತಂಡವೇ ಸೀತಾರಾಮಯ್ಯನವರೊಂದಿಗಿತ್ತು. ಕೆ.ಆರ್. ಗಣೇಶ್, ಕೆ.ಎಸ್. ಮಧುಸೂಧನ, ಆರ್. ಶೇಷಶಾಸ್ತ್ರಿ ಅವರುಗಳು ೧೯೮೫ರ ವರೆಗೆ; ವಿ. ವೆಂಕಟರಾವ್ (೧೯೮೮ರ ವರೆಗೆ), ನಾ. ಗೀತಾಚಾರ್ಯ, ಎನ್.ಎಸ್. ರಾಮಸ್ವಾಮಿ ಅಯ್ಯರ್, ಜಿ. ಶಂಬಣ್ಣ ಅವರು ಈಗಲೂ ನಿರಂತರವಾಗಿ ಯಾವುದೇ ಸಂಭಾವನೆಯನ್ನು ತೆಗೆದುಕೊಳ್ಳದೆ-ಸಂಬಳದ ನೌಕರರಂತೆ-ಪ್ರತಿನಿತ್ಯ ಕಚೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇರುತ್ತಿದ್ದ ಒಬ್ಬರೇ ಅಲ್ಪ ಸಂಬಳದ ನೌಕರರು ತಪ್ಪುತ್ತಿದ್ದರೂ ಇವರು ತಪ್ಪುತ್ತಿರಲಿಲ್ಲ, ತಪ್ಪುತ್ತಿಲ್ಲ. ಇವರೊಂದಿಗೆ ೧೯೮೬ರಿಂದ ಡಿ.ವಿ. ಪರಮಶಿವ ಮೂರ್ತಿ (೧೯೯೫ರವರೆಗೆ); ವರದರಾಜು, ೧೯೮೯ರಿಂದ ಎಂ. ಕೃಷ್ಣಯ್ಯ, ಶಶಿಧರ್, ಕುಮಾರ್, ೧೯೯೩ರಿಂದ ಸೋಮಯ್ಯ ಅವರುಗಳೂ ಸಕ್ರಿಯವಾಗಿ ಪ್ರತಿ ಸಂಜೆ ಸೇರಿ ಸಂಸ್ಥೆಯ ಚಟುವಟಿಕೆಗಳಲ್ಲಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರೆಲ್ಲ ಯಾವ ಕೆಲಸಕ್ಕೂ ಹಿಂಜರಿಯದೆ-ಧೂಳು ಹೊಡೆಯುವುದಿರಲಿ, ಪುಸ್ತಕ ಹೊರುವುದಿರಲಿ, ರಾತ್ರಿ ವೇಳೆ ಪುಸ್ತಕ ಮಳಿಗೆ, ಪೀಠೋಪಕರಣಗಳಿರುವ ಸಭೆಯ ಪೆಂಡಾಲ್ ಕಾಯುವುದಿರಲಿ; ಕಾರ್ಯಕ್ರಮ ನಿರ್ವಹಣೆ, ಅತಿಥಿಗಳ ಸ್ವಾಗತ, ವೇದಿಕೆಯ ಸಿದ್ಧತೆ, ಕಚೇರಿ ವ್ಯವಹಾರ-ಎಲ್ಲವನ್ನೂ ಸಂಕೋಚವಿಲ್ಲದೆ, ತಮ್ಮ ಮನೆಯ ಕೆಲಸವೆಂಬಂತೆ ನಿರ್ವಹಿಸುತ್ತಿದ್ದಾರೆ. ಸಂಸ್ಥೆಯ ಬೆಳವಣಿಗೆಗೆ ಪದಾಧಿಕಾರಿಗಳು, ಸಮಿತಿ ಸದಸ್ಯರು ಎಷ್ಟು ಮುಖ್ಯರಾಗುತ್ತಾರೊ ಅಷ್ಟೇ ಮುಖ್ಯ ಈ ಕಾರ್ಯಕರ್ತರ ಸ್ವಯಂ ಸೇವೆ. ಅದಕ್ಕಾಗಿಯೇ ಯಾವ ಪಟ್ಟಿಯಲ್ಲೂ ದಾಖಲಾಗದ ಇವರುಗಳ ಸೇವೆಯನ್ನು ಇಲ್ಲಿ ದಾಖಲಿಸಲಾಗಿದೆ.

ಪ್ರತಿಷ್ಠಾನ ೧೯೮೦ ರಿಂದ 'ಸಹೃದಯ ಗೋಷ್ಠಿ', ೧೯೯೩ರಿಂದ '**ಸಾಹಿತ್ಯೋಪಾಸಕರು**' ಎಂಬ ಎರಡು ವಿಶೇಷ ಕಾರ್ಯಕ್ರಮ ಮಾಲಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ೧೯೯೦ ರಿಂದ **ಹಸ್ತಪ್ರತಿಶಾಸ್ತ್ರ ತರಗತಿ**ಯನ್ನು, ೧೯೯೪ ರಿಂದ ಬಿ.ಎಂ.ಶ್ರೀ.ಯವರ ಸ್ವಸ್ಥಳವಾದ ಬೆಳ್ಳೂರಿನಲ್ಲಿ "**ಆಚಾರ್ಯ ಬಿ.ಎಂ.ಶ್ರೀ. ಶತಮಾನ ಭವನವನ್ನು**" ನಿರ್ವಹಿಸಿಕೊಂಡು ಬರುತ್ತಿದೆ. ೨.೨.೨೦೦೦ ದಿಂದ 'ಬಿ.ಎಂ.ಶ್ರೀ. ಕಲಾಭವನ' ಸ್ವಂತ ಕಟ್ಟಡಕ್ಕೆ ಬಂದು ಉಚಿತ ವಾಚನಾಲಯವನ್ನು ನಡೆಸಲಾಗುತ್ತಿದೆ. '**ಸಿರಿಕಂಟ**' ವೇದಿಕೆ ಆರಂಭವಾಗಿದೆ. ಇದರ ಮೂಲಕ 'ಹಳಗನ್ನಡ ಕಾವ್ಯಾಭ್ಯಾಸ ಶಿಬಿರ' ಮತ್ತು '**ಹಸ್ತಪ್ರತಿ ಸೇವಾಕೇಂದ್ರ**'ಗಳನ್ನು ನಡೆಸಲಾಗುತ್ತಿದೆ.

ವಿವಿಧ ಕಾರ್ಯಕ್ರಮ ಮಾಲಿಕೆಗಳ ಪದಾಧಿಕಾರಿಗಳು

೧. **'ಸಹೃದಯ ಗೋಷ್ಠಿ' ಸಂಚಾಲಕರು**

ಕೆ.ಆರ್. ಗಣೇಶ್ (೧೭-೮-೮೦ ರಿಂದ ೪-೧-೮೧ ಮತ್ತು ೧೦-೧೦-೮೨ ರಿಂದ ೧೩-೧೦-೮೩)
ಗೋವಿಂದ ಅ. ಜಾಲಿಹಾಳ (೪-೧-೮೧ ರಿಂದ ೧೦-೧೦-೮೨)
ಕೆ.ಎಂ. ಮುನಿಕೃಷ್ಣಪ್ಪ (೧೩-೧೦-೮೩ ರಿಂದ ೧೬-೧೧-೮೫)
ನಾ. ಗೀತಾಚಾರ್ಯ (೧೬-೧೧-೮೫ ರಿಂದ ೧೨-೧೦-೮೭)
ರಾ. ನಂ. ಚಂದ್ರಶೇಖರ (೧೨-೧೦-೮೭ ರಿಂದ ೧೬-೨-೮೯)
ಪಿ.ವಿ. ಕೃಷ್ಣಮೂರ್ತಿ (೧೬-೨-೮೯ ರಿಂದ ೧-೧೨-೯೧)
ಕೆ.ಬಿ. ಲೋಕೇಶ್ವರಪ್ಪ (೧-೧೨-೯೧ ರಿಂದ ೨೦-೧೦-೯೨)
ಕೆ.ಎಸ್. ಮಧುಸೂದನ (೨೦-೧೦-೯೨ ರಿಂದ ೨೦-೦೩-೯೩)
ಮುತ್ತುರಾಜು, ಕೆ. ಬಸವರಾಜಪ್ಪ (೨೦-೩-೯೩ ರಿಂದ ೧-೧೨-೯೬)
ಜಯಮ್ಮ ಕರಿಯಣ್ಣ (೧೯೯೬ ರಿಂದ)

೨. **'ಸಾಹಿತ್ಯೋಪಾಸಕರು' ಸಂಚಾಲಕರು**

ಕೆ.ಬಿ. ಲೋಕೇಶ್ವರಪ್ಪ (೧೦-೯-೯೩ ರಿಂದ ೨೧-೧೧-೯೫)
ಜಿ. ಶಂಭಣ್ಣ (೨೧-೧೧-೯೫ ರಿಂದ)
ಡಿ.ವಿ. ಪರಮಶಿವಮೂರ್ತಿ (೨೧-೧೧-೯೫ ರಿಂದ ೧೦-೧೦-೯೭)

೩. **'ಹಸ್ತಪ್ರತಿಶಾಸ್ತ್ರ' ತರಗತಿ ನಿರ್ದೇಶಕರು**

ನಾ. ಗೀತಾಚಾರ್ಯ (೧೯೯೦ ರಿಂದ)

ಪ್ರತಿಷ್ಠಾನದ ಪ್ರಕಟನೆಗಳು

೬-೫-೧೯೭೯ ರಿಂದ ೨೦೦೪ ರವರೆಗೆ

ಪ್ರತಿಷ್ಠಾನದ ಪ್ರಕಟನೆಗಳ ಪಟ್ಟಿಯನ್ನೂ ಇಲ್ಲಿ ಕೊಟ್ಟಿದೆ. ಪ್ರಕಟಿತ ಪುಸ್ತಕಗಳ ವರ್ಷವಾರು, ಲೇಖಕರು/ಸಂಪಾದಕರ ಹೆಸರುಗಳೊಂದಿಗೆ ಕ್ರಮವಾಗಿ ನೀಡಿದೆ. ಮೊದಲ ೧೦ ವರ್ಷಗಳಲ್ಲಿ ವರ್ಷಕ್ಕೆ ೩-೪ ಪುಸ್ತಕಗಳನ್ನು ಪ್ರಕಟಿಸಿ, ಈವರೆಗೆ ೭೦ ಪ್ರಕಟನೆಗಳನ್ನು ಸಮೀಪಿಸಿರುವುದು ವಿಶೇಷವಾಗಿ ಗಮನಕ್ಕೆ ಬರುತ್ತದೆ. ಒಂದು ಸಂಶೋಧನಾ ಸಂಸ್ಥೆ, ಸಂಶೋಧನೆಗೇ ಮೀಸಲಾದ-ಕಥೆ, ಕವನ, ಕಾದಂಬರಿಗಳಂತಹ ಸೃಜನಶೀಲ ಪ್ರಕಾರಕ್ಕೆ ಹೊರತಾಗಿ-ಪಾಂಡಿತ್ಯ ಪ್ರಧಾನ ಗ್ರಂಥಗಳನ್ನೇ ಪ್ರಕಟಿಸುತ್ತಿರುವುದು ಗಮನಾರ್ಹ.

ಕ್ರ.ಸಂ.	ಪುಸ್ತಕ	ಪ್ರಕಾರ	ಪ್ರ.ವರ್ಷ	ಸಂಪಾದಕ/ಲೇಖಕ	ಬೆಲೆ
೧.	ಕೀರ್ತನ ಕುಸುಮಾಂಜಲಿ	ಕೀರ್ತನೆ	೧೯೮೦	ಎಂ.ವಿ. ಸೀತಾರಾಮಯ್ಯ	೧೦-೦೦
೨.	ಸರ್ವಜ್ಞ ವಚನಗಳು	ತ್ರಿಪದಿ	೧೯೮೨	ಪ್ರ. ಸಂ. : ಎಂ.ವಿ. ಸೀತಾರಾಮಯ್ಯ ಸಂ. : ಕೆ.ಆರ್. ಗಣೇಶ್ ವಿ. ವೆಂಕಟರಾವ್	೧೫-೦೦
೩.	ಮಣಿಹ	ಹಸ್ತಪ್ರತಿಶಾಸ್ತ್ರ (ಫ.ಗು. ಹಳಕಟ್ಟಿ ಸಂಸ್ಮರಣ ಸಂಪುಟ)	೧೯೮೨	ಪ್ರ. ಸಂ : ಎಂ.ವಿ. ಸೀತಾರಾಮಯ್ಯ ಸಂ : ಸಿದ್ಧಯ್ಯ ಪುರಾಣಿಕ ಆರ್. ಶೇಷಶಾಸ್ತ್ರಿ	೫೦-೦೦
೪.	ಬೇಂದ್ರೆ ಸ್ಮೃತಿ	ಸ್ಮರಣ ಗ್ರಂಥ	೧೯೮೨	ಪ್ರ. ಸಂ. : ಎಂ.ವಿ. ಸೀತಾರಾಮಯ್ಯ ಸಂ. : ಗೋವಿಂದ ಅ. ಜಾಲಿಹಾಳ	೫-೦೦
೫.	ಸೂತ ಭಾರತ	ಷಟ್ಪದಿ	೧೯೮೨	ಪ್ರ. ಸಂ. : ಎಂ.ವಿ. ಸೀತಾರಾಮಯ್ಯ ಸಂ. : ಶ್ರೀಕೃಷ್ಣಭಟ್, ಎಂ.ಜಿ. ಹೆಗಡೆ	೧೫-೦೦
೬.	ಶ್ರೀಕೃಷ್ಣದೇವರಾಯ ದಿನಚರಿ	ಗದ್ಯ	೧೯೮೩	ಪ್ರ. ಸಂ. : ಎಂ.ವಿ. ಸೀತಾರಾಮಯ್ಯ ಸಂ. : ವಿ.ಎಸ್.ಎಸ್. ಆಚಾರ್ಯ	೧೦-೦೦
೭.	ಹಸ್ತಪ್ರತಿಶಾಸ್ತ್ರ	ಹಸ್ತಪ್ರತಿಶಾಸ್ತ್ರ	೧೯೮೩	ಸಂ. : ಎಂ.ವಿ. ಸೀತಾರಾಮಯ್ಯ ಎಂ. ಚಿದಾನಂದಮೂರ್ತಿ	೧೫-೦೦
೮.	ಮೂರು ದತ್ತಿ ಉಪನ್ಯಾಸಗಳು	ಸಾಹಿತ್ಯ ಸಮೀಕ್ಷೆ	೧೯೮೩	ಎ.ಎನ್. ಮೂರ್ತಿರಾವ್ ಎಸ್.ವಿ. ರಂಗಣ್ಣ, ಎಚ್.ಎಸ್. ಬಿಳಿಗಿರಿ	೧೦-೦೦
೯.	ಧ್ರುವ ಚರಿತ್ರೆ	ಸಾಂಗತ್ಯ	೧೯೮೩	ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ	೧೫-೦೦
೧೦.	ಆಚಾರ್ಯ ಬಿ.ಎಂ.ಶ್ರೀ.	ವ್ಯಕ್ತಿ ಚಿತ್ರ	೧೯೮೪	ಎಲ್.ಎಸ್. ಶೇಷಗಿರಿರಾವ್	೨-೦೦
೧೧.	ಶ್ರೀವಾಣಿ	ಸೂಕ್ತಿ	೧೯೮೪	ಹಾ.ಮಾ. ನಾಯಕ	೧-೦೦
೧೨.	ಕನ್ನಡದ ಕಣ್ವ ಬಿ.ಎಂ.ಶ್ರೀ.	ಮಕ್ಕಳ ಜೀವನ ಚಿತ್ರ	೧೯೮೪	ಹೋ. ಶ್ರೀನಿವಾಸಯ್ಯ	೧-೫೦
೧೩.	ಶ್ರೀಯವರ ಆಯ್ದ ಕವನಗಳು	ಕವನ	೧೯೮೪	ಸಂ.: ನಾ.ಗೀತಾಚಾರ್ಯ	೨-೦೦
೧೪.	ಶ್ರೀನಿಧಿ	ಸಂಸ್ಮರಣ ಸಂಪುಟ	೧೯೮೫	ಸಂ: ಜಿಎಸ್. ಶಿವರುದ್ರಪ್ಪ	೬೦-೦೦
೧೫.	B.M.S. The Man and his Mission	ಜೀವನ ಚರಿತ್ರೆ	೧೯೮೫	ಸಂ: ಬಿ.ಸಿ. ರಾಮಚಂದ್ರ ಶರ್ಮ	೨೫-೦೦
೧೬.	ಶ್ರೀಗಂಧ	ಸ್ಮರಣ ಸಂಚಿಕೆ	೧೯೮೫	ಜಿ. ಶ್ರೀನಿವಾಸರಾಜು ಹಾಗೂ ಇತರರು	೧೦-೦೦
೧೭.	ಇಂಗ್ಲೀಷ್ ಗೀತಗಳು (ಆಂಗ್ಲ ಮೂಲ ಕವನಗಳೊಂದಿಗೆ)	ಕವನ	೧೯೮೫	'ಶ್ರೀ'	೨೦-೦೦
೧೮.	ವೈವಸ್ವತ ಮನು	ವೈಚಾರಿಕ	೧೯೮೫	ಎಸ್.ಕೆ. ರಾಮಚಂದ್ರರಾವ್	೫-೦೦
೧೯.	ಮೂರು ದತ್ತಿ ಉಪನ್ಯಾಸಗಳು-೧೯೮೪	ಸಾಹಿತ್ಯ ಸಮೀಕ್ಷೆ	೧೯೮೫	ಜಿ. ವೆಂಕಟಸುಬ್ಬಯ್ಯ ಎಲ್.ಎಸ್. ಶೇಷಗಿರಿರಾವ್ ಸೂರ್ಯನಾಥ ಕಾಮತ್	೧೦-೦೦

ಕ್ರ.ಸಂ.	ಪುಸ್ತಕ	ಪ್ರಕಾರ	ಪ್ರ.ವರ್ಷ	ಸಂಪಾದಕ/ಲೇಖಕ	ಬೆಲೆ
೨೦.	ಪ್ರೊ॥ ಟಿ.ಎಸ್. ವೆಂಕಣ್ಣಯ್ಯ	ವ್ಯಕ್ತಿಚಿತ್ರ	೧೯೮೬	ಜಿ. ವೆಂಕಟಸುಬ್ಬಯ್ಯ	೪-೦೦
೨೧.	ಭಾರತದ ಶ್ರೀಕೃಷ್ಣ	ವೈಚಾರಿಕ	೧೯೮೬	ಕೆ. ರಾಜಾರಾವ್	೬-೦೦
೨೨.	ಶ್ರೀಕೃಷ್ಣ ಬಾಲಲೀಲೆ (ಭಾಗ-೧)	ಕೀರ್ತನ ಕಾವ್ಯ	೧೯೮೬	ಸಂ.: ಎಂ.ವಿ. ಸೀತಾರಾಮಯ್ಯ	೭೫-೦೦
೨೩.	ಸ್ವಾಯಂಭುವ ಮನು: ವೈವಸ್ವತ ಮನು-ತೌಲನಿಕ ಅಧ್ಯಯನ	ವೈಚಾರಿಕ	೧೯೮೬	ಮಲ್ಲೇಪುರಂ ಜಿ. ವೆಂಕಟೇಶ್	೫-೦೦
೨೪.	The Improvement of Kannada	ವೈಚಾರಿಕ	೧೯೮೭	ಬಿ.ಎಂ.ಶ್ರೀ.	೬-೦೦
೨೫.	ಮಾಸ್ತಿ ಸ್ಮರಣೆ	ಸ್ಮರಣ ಗ್ರಂಥ	೧೯೮೭	ಸಂ.: ನಾ. ಗೀತಾಚಾರ್ಯ	೧೫-೦೦
೨೬.	ಅಶ್ವತ್ಥಾಮ (ಅನುವಾದ)	ನಾಟಕ	೧೯೮೭	ಪಿ.ವಿ. ನಾರಾಯಣ	೬-೦೦
೨೭.	ದತ್ತಿ ಉಪನ್ಯಾಸಗಳು-೧೯೮೬	ಸಾಹಿತ್ಯ ಸಮೀಕ್ಷೆ	೧೯೮೭	ಜಿ.ಎಸ್. ದೀಕ್ಷಿತ್, ಪಿ.ವಿ. ಜೋಶಿ ಎಸ್. ರಾಮಸ್ವಾಮಿ	೧೦-೦೦
೨೮.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (ಸಂಪುಟ-೧)	ಸೂಚಿ	೧೯೮೭	ಸಂ.: ಕೆಳದಿ ಗುಂಡಾ ಜೋಯಿಸ್ ನಾ. ಗೀತಾಚಾರ್ಯ	೨೦-೦೦
೨೯.	Sevenior of Vijayanagar Seminar	ಸ್ಮರಣ ಸಂಚಿಕೆ	೧೯೮೭	ವಿವಿಧ ಲೇಖಕರು	೧೦-೦೦
೩೦.	Early Vijayanagar : Studies-its History & Culture	ಐತಿಹಾಸಿಕ	೧೯೮೮	ಸಂ.: ಜಿ.ಎಸ್. ದೀಕ್ಷಿತ್	೬೦-೦೦
೩೧.	ಶ್ರೀನಿವಾಸ ಕಲ್ಯಾಣ	ಕಾವ್ಯ	೧೯೮೮	ಸಂ.: ಕೆ.ಎಂ. ಕೃಷ್ಣರಾವ್	೧೦-೦೦
೩೨.	ಮರುನ್ನಂದನ ಶತಕ	ಶತಕ	೧೯೮೯	ಆರ್. ತಾತಾ	೫-೦೦
೩೩.	ಚಂದ್ರಚೂಡಾಮಣಿ ಶತಕ	ಶತಕ	೧೯೮೯	ಸಂ.: ಎಂ.ವಿ. ಸೀತಾರಾಮಯ್ಯ	೧೦-೦೦
೩೪.	ದತ್ತಿ ಉಪನ್ಯಾಸಗಳು-೧೯೮೮	ಸಾಹಿತ್ಯ ಸಮೀಕ್ಷೆ	೧೯೮೯	ಆರ್.ಜಿ. ಕುಲಕರ್ಣಿ, ಅ.ರಾ. ಮಿತ್ರ ವಿ.ಎಸ್. ಸಂಪತ್ಕುಮಾರಾಚಾರ್ಯ ಟಿ. ಕೇಶವಭಟ್ಟ	೧೦-೦೦
೩೫.	ಭಾಷಾಂತರ ಕಲೆ	ಅನುವಾದ ಶಾಸ್ತ್ರ	೧೯೮೯	ಪ್ರಧಾನ ಗುರುದತ್	೧೫-೦೦
೩೬.	ಸೃಜನಶೀಲತೆ ಮತ್ತು ಪಾಂಡಿತ್ಯ	ವೈಚಾರಿಕ	೧೯೮೯	ಕೆ. ಕೃಷ್ಣಮೂರ್ತಿ	೧೦-೦೦
೩೭.	ಕನ್ನಡ ಸಾಹಿತ್ಯದಲ್ಲಿ ಅದ್ವೈತ	ಸಮೀಕ್ಷೆ	೧೯೯೦	ವಿವಿಧ ಲೇಖಕರು	೧೦-೦೦
೩೮.	ಕುಮಾರವ್ಯಾಸ ಭಾರತ ಸಂಗ್ರಹ	ಷಟ್ಪದಿ	೧೯೯೦	ಸಂ.: ಎಂ.ವಿ. ಸೀತಾರಾಮಯ್ಯ	೭೫-೦೦
೩೯.	ಹೊಸಗನ್ನಡದ ವ್ಯಾಕರಣ	ವ್ಯಾಕರಣಶಾಸ್ತ್ರ	೧೯೯೦	ಟಿ.ವಿ. ವೆಂಕಟಾಚಲ ಶಾಸ್ತ್ರೀ	೧೫-೦೦
೪೦.	ಸಂಗಮರ ಕಾಲದ ವಿಜಯನಗರ	ಇತಿಹಾಸ	೧೯೯೧	ಸಂ.: ಜಿ.ಎಸ್. ದೀಕ್ಷಿತ್	೭೫-೦೦
೪೧.	ವೈಚಾರಿಕ ಜಾಗೃತಿ	ವೈಚಾರಿಕ	೧೯೯೨	ಜಿ. ರಾಮಕೃಷ್ಣ	೧೫-೦೦
೪೨.	ವೈಚಾರಿಕ ಜಾಗೃತಿ	"	೧೯೯೨ (ಪುನರ್ಮುದ್ರಣ)		೨೧-೦೦
೪೩.	ಇಂಗ್ಲಿಷ್ ಗೀತಗಳು		೧೯೯೨	'ಶ್ರೀ'	೧೨-೦೦
೪೪.	ಸಂವಿಧಾನ ಮತ್ತು ಕಾನೂನು	ಕಾನೂನು ಶಾಸ್ತ್ರ	೧೯೯೨	ವಿ. ಸೀತಾರಾಮಯ್ಯ	೧೫-೦೦
೪೫.	ಶಂಬಾ ಕೃತಿ ಸಮೀಕ್ಷೆ	ಸಮೀಕ್ಷೆ	೧೯೯೨	ಮಲ್ಲೇಪುರಂ ಜಿ. ವೆಂಕಟೇಶ್	೩೫-೦೦
೪೬.	ಮಾಸ್ತಿ ಕಥಾ ಸಮೀಕ್ಷೆ	ಸಮೀಕ್ಷೆ	೧೯೯೨	ಪಿ.ವಿ. ಜೋಶಿ, ಬಿ.ಎಸ್. ರಾಮಪ್ರಸಾದ್	೧೫-೦೦

ಕ್ರ.ಸಂ.	ಪುಸ್ತಕ	ಪ್ರಕಾರ	ಪ್ರ.ವರ್ಷ	ಸಂಪಾದಕ/ಲೇಖಕ	ಬೆಲೆ
೪೭.	ಕಾವ್ಯ-ಇತಿಹಾಸ	ಸಮೀಕ್ಷೆ	೧೯೯೨	ಶಂಕರ ಮೊಕಾಶಿ ಪುಣೇಕರ, ಬಿ. ರಾಮಸ್ವಾಮಿ, ಸಿ. ಓಂಕಾರಪ್ಪ	೧೦-೦೦
೪೮.	ಎಂ.ವಿ.ಸೀ. ಸಂಸ್ಮರಣೆ	ಸ್ಮರಣ ಗ್ರಂಥ	೧೯೯೨	ಸಂ.: ನಾ. ಗೀತಾಚಾರ್ಯ	೨೫-೦೦
೪೯.	ಹಸ್ತಪ್ರತಿಶಾಸ್ತ್ರ ಪರಿಚಯ	ಹಸ್ತಪ್ರತಿಶಾಸ್ತ್ರ	೧೯೯೩	ಬಿ.ಎಸ್. ಸಣ್ಣಯ್ಯ	೧೫-೦೦
೫೦.	ಕದಂಬ (ಎಂ.ವಿ.ಸೀ. ಸಮಗ್ರ ಸಾಹಿತ್ಯ-೧)	ಸಂಶೋಧನೆ	೧೯೯೩	ಎಂ.ವಿ. ಸೀತಾರಾಮಯ್ಯ	೧೦೦-೦೦
೫೧.	ಮಾಸ್ತಿ ವೆಂಕಟೇಶ ಅಯ್ಯಂಗಾರ್	ಜೀವನ ಚರಿತ್ರೆ	೧೯೯೪	ಆರ್.ಎಸ್. ರಾಮರಾವ್	೧೫-೦೦
೫೨.	ಕವಿರಾಜಮಾರ್ಗಂ (ಎಂ.ವಿ.ಸೀ. ಸಮಗ್ರ ಸಾಹಿತ್ಯ-೨)	ಕಂದ	೧೯೯೪	ಎಂ.ವಿ. ಸೀತಾರಾಮಯ್ಯ	೧೦೦-೦೦
೫೩.	ಕವಿರಾಜಮಾರ್ಗ ವಿವಕ್ಷೆ (ಎಂ.ವಿ.ಸೀ. ಸಮಗ್ರ ಸಾಹಿತ್ಯ-೩)	ಸಂಶೋಧನೆ	೧೯೯೫	ಎಂ.ವಿ. ಸೀತಾರಾಮಯ್ಯ	೧೦೦-೦೦
೫೪.	ಪದ್ಮಿನೀ ಕಲ್ಯಾಣ	ಸಾಂಗತ್ಯ	೧೯೯೫	ಸಂ: ಎಸ್. ಶಿವಣ್ಣ	೧೫-೦೦
೫೫.	ನವ್ಯ ಸ್ಫೂರ್ತಿ	ಸ್ಮರಣ ಗ್ರಂಥ	೧೯೯೫	ಸಂ.: ನಾ. ಗೀತಾಚಾರ್ಯ	೩೫-೦೦
೫೬.	ಬಸವಪ್ಪಶಾಸ್ತ್ರಿಗಳು	ಸಮೀಕ್ಷೆ	೧೯೯೫	ಸಿ. ಮಹದೇವಪ್ಪ, ವಿಜಯಾ ಸುಬ್ಬರಾಜ್ ಎಂ.ಆರ್. ಲಕ್ಷ್ಮೀದೇವಿ ಅಷ್ಟಾವಧಾನಿ ಆರ್. ಗಣೇಶ್	೨೫-೦೦
೫೭.	ಬೇಟೆರಾಯ ದೀಕ್ಷಿತರ ದೇವರ ನಾಮಗಳು ಮತ್ತು ಸಂಪ್ರದಾಯದ ಹಾಡುಗಳು	ಕೀರ್ತನೆ	೧೯೯೬	ಬಿ. ರಾಮಸ್ವಾಮಿ	೨೫-೦೦
೫೮.	ಶ್ರೀಕೃಷ್ಣ ಬಾಲಲೀಲೆ ಭಾಗ-೨ (ಎಂ.ವಿ.ಸೀ. ಸಮಗ್ರ ಸಾಹಿತ್ಯ-೪)	ಕೀರ್ತನ ಕಾವ್ಯ	೧೯೯೬	ಎಂ.ವಿ. ಸೀತಾರಾಮಯ್ಯ	೧೦೦-೦೦
೫೯.	ಲೋಚನ ಲೇಖನ ಸೂಚಿ	ಸೂಚಿ	೧೯೯೯	ಸಂ. : ಪಿ.ವಿ. ಕೃಷ್ಣಮೂರ್ತಿ ನಾ. ಗೀತಾಚಾರ್ಯ	೨೫-೦೦
೬೦.	ಅಂತರ ಶಿಸ್ತೀಯ ಸಂಶೋಧನಾ ವಿಧಿವಿಧಾನ	ಸಂಶೋಧನಾಶಾಸ್ತ್ರ	೧೯೯೯	ಸಂ.: ನಾ. ಗೀತಾಚಾರ್ಯ	೨೫-೦೦
೬೧.	ಸೋಸಲೆ ಅಯ್ಯ ಶಾಸ್ತ್ರಿಗಳು - ಜೀವನ ಚರಿತ್ರೆ		೨೦೦೦	ಸಂ.: ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ ಪ್ರೊ. ನಾ. ಗೀತಾಚಾರ್ಯ	೨೫೧-೦೦
೬೨.	ಶ್ರೀಕೃಷ್ಣ ಬಾಲಲೀಲೆ-೧	ಕಾವ್ಯ	೨೦೦೧	ಎಂ.ವಿ. ಸೀತಾರಾಮಯ್ಯ	೨೫೦-೦೦
೬೩.	ಶಂಬಾ ಸಾಹಿತ್ಯದಲ್ಲಿ ಗ್ರಾಮದೇವತೆ-ಸಮೀಕ್ಷೆ		೨೦೦೧	ಡಾ. ನಿಂಗಣ್ಣ ಎನ್. ಸಣ್ಣಕ್ಕಿ	೧೫-೦೦
೬೪.	ಆಧುನಿಕ ಸಾಹಿತ್ಯ ಸಮೀಕ್ಷೆ - ಸಮೀಕ್ಷೆ, ಭಾಗ-೧ (ಎಂ.ವಿ.ಸೀ. ಸಮಗ್ರ ಸಾಹಿತ್ಯ - ೬)		೨೦೦೧	ಎಂ.ವಿ. ಸೀತಾರಾಮಯ್ಯ	೧೫೦-೦೦
೬೫.	ನಾಲ್ವರು ಸಾಹಿತ್ಯೋಪಾಸಕರು - ಸಮೀಕ್ಷೆ		೨೦೦೧	ವಿವಿಧ ಲೇಖಕರು	೪೦-೦೦
೬೬.	ಸೋಸಲೆ ಅಯ್ಯಾ ಶಾಸ್ತ್ರಿಗಳ ಜೀವನ-ಸಾಹಿತ್ಯ - ಸಮೀಕ್ಷೆ		೨೦೦೨	ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ ನಾ. ಗೀತಾಚಾರ್ಯ	೪೦-೦೦
೬೭.	ಅಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳು	ಸೂಚಿ	೨೦೦೨	ಎ.ಆರ್. ಗುರು	೫೦-೦೦
೬೮.	ಮಧುರಸ್ಮೃತಿ ಸಂಸ್ಮರಣ ಸಂಪುಟ		೨೦೦೩	ಸಂ. : ಸಾವಿತ್ರಮ್ಮ ರಾಮಸ್ವಾಮಿ, ನಾ. ಗೀತಾಚಾರ್ಯ	೩೦೦-೦೦
೬೯.	ಶ್ರೀವಾಸವಾಂಬಾ ಪುರಾಣಂ -	ಪುರಾಣ (ಅನುವಾದ)	೨೦೦೪	ಸಾವಿತ್ರಮ್ಮ ರಾಮಸ್ವಾಮಿ, ಲಕ್ಷ್ಮೀ	೧೫೦-೦೦

ಹಸ್ತಪ್ರತಿ ಭಂಡಾರ

● *ನಾ. ಗೀತಾಚಾರ್ಯ*

ಆಚಾರ್ಯ ಬಿ.ಎಂ.ಶ್ರೀ.ಯವರ ವಾಣಿಯಾದ "ದೇಶದಲ್ಲಿ ಹುಳು ತಿಂದು ಹೋಗದೆ ಇರುವ ಗ್ರಂಥಗಳನ್ನೆಲ್ಲ ಸಂಗ್ರಹಿಸಿ ಕೊನೆಮಟ್ಟ ಶೋಧಿಸಿ ಒಂದನ್ನೂ ಬಿಡದಂತೆ ಅಚ್ಚು ಹಾಕಿಸುವುದು" ಎಂಬುದನ್ನೇ ಧ್ಯೇಯವಾಕ್ಯವಾಗಿಟ್ಟುಕೊಂಡು ಈ ಸಂಸ್ಥೆಯನ್ನು ಸ್ಥಾಪಿಸಿದ ಎಂ.ವಿ. ಸೀತಾರಾಮಯ್ಯನವರು ತಮ್ಮ ವಂಶಸ್ಥರಲ್ಲಿದ್ದ ಸುಮಾರು ೩೦೦ ಹಸ್ತಪ್ರತಿಗಳನ್ನು ದಾನಮಾಡಿ ಈ ಸಂಸ್ಥೆಯ ಪ್ರಾರಂಭಿಕ ಹಸ್ತಪ್ರತಿ ಭಂಡಾರವನ್ನು ರೂಪಿಸಿದರು. ಕ್ಷೇತ್ರಕಾರ್ಯ, ವಿಚಾರಗೋಷ್ಠಿ, ಪುಸ್ತಕ ಪ್ರಕಟನೆಗಳೊಂದಿಗೆ ನಿರಂತರವಾಗಿ ಸಂಗ್ರಹ ಸಂರಕ್ಷಣೆ ಕಾರ್ಯ ನಡೆಯುತ್ತಲೇ ಇರುವುದರಿಂದ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹವಾಗಿರುವ ಒಟ್ಟು ಓಲೆಗರಿ-ಕಾಗದದ ಹಸ್ತಪ್ರತಿಗಳ ಸಂಖ್ಯೆ ೧೬೦೦ ಆಗಿದೆ. ಇವುಗಳಲ್ಲಿರುವ ಗ್ರಂಥ ಪ್ರತಿಗಳ ಸಂಖ್ಯೆ ಸುಮಾರು ೩,೦೦೦. ಕೆ.ಆರ್.ಗಣೇಶ್, ಕೆ.ಎಸ್. ಮಧುಸೂದನ್ ಮತ್ತು ವಿ. ವೆಂಕಟಾರಾವ್ ಅವರುಗಳು ರೂಪಿಸಿದ್ದ ಈ ಭಂಡಾರವನ್ನು ಈ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಹಸ್ತಪ್ರತಿ ಭಂಡಾರದ ವ್ಯವಸ್ಥಾಪಕರೂ ಆದ ಶ್ರೀ ನಾ. ಗೀತಾಚಾರ್ಯ ಅವರು ಪ್ರಾರಂಭದಿಂದಲೂ ಸಂಸ್ಥಾಪಕರೊಂದಿಗಿದ್ದು ಉತ್ತಮ ರೀತಿಯಲ್ಲಿ ಬೆಳೆಸಿದ್ದಾರೆ. ಯಾವುದೇ ನಿರ್ದಿಷ್ಟ ಹಣಕಾಸಿನ ಸಹಾಯವಿಲ್ಲದೆ ಒಂದು ಖಾಸಗಿ ಸಂಸ್ಥೆಯಾಗಿ ಈ ಇಪ್ಪತ್ತು ವರ್ಷಗಳಲ್ಲಿ ಪ್ರತಿಷ್ಠಾನ ಹಸ್ತಪ್ರತಿ ಕ್ಷೇತ್ರದಲ್ಲಿ ನಡೆಸಿರುವ ಸಾಧನೆ ಸಣ್ಣದೇನಲ್ಲ. ದಾಖಲೆಯಾಗಿ ನಿಲ್ಲುವಂತಹದು. ಕರ್ನಾಟಕದಲ್ಲಿ ನಿರ್ಲಕ್ಷಿಸಲ್ಪಟ್ಟಿದ್ದ ಈ ವಿಭಾಗ ಮತ್ತೆ ಚೇತರಿಸಿಕೊಂಡು 'ಹಸ್ತಪ್ರತಿ ಶಾಸ್ತ್ರ' ಹಸ್ತಪ್ರತಿ ಅಧ್ಯಯನ ಎಂಬ ನೂತನ ಪರಿಕಲ್ಪನೆಯಾಗಿ ಬೆಳೆಯಲು ಈ ಸಂಸ್ಥೆಯೇ ಮೂಲ ಕಾರಣ ಮತ್ತು ಮುಖ್ಯ ಪ್ರೇರಣೆ ಎನ್ನುವಷ್ಟರ ಮಟ್ಟಿಗೆ ಇದರ ಸಾಧನೆಯಿದೆ. ಈ ಸಾಧನೆಗಳನ್ನು ಜಾಗೃತಿಕಾರ್ಯ, ಪ್ರಕಟನಾಕಾರ್ಯ ಮತ್ತು ಅಧ್ಯಯನ ಶಿಸ್ತಿನ ನಿರ್ಮಾಣಕಾರ್ಯ ಎಂದು ಮೂರು ವಿಧದಲ್ಲಿ ಗುರುತಿಸಬಹುದು.

೧) ಜಾಗೃತಿ ಕಾರ್ಯ :

ಪ್ರತಿಷ್ಠಾನ ಪ್ರಾರಂಭವಾದ ಕಾಲದಲ್ಲಿ ವಚನ ಪಿತಾಮಹ ಫ.ಗು. ಹಳಕಟ್ಟಿ ಜನ್ಮಶತಮಾನೋತ್ಸವ ಬಂದುದನ್ನು (೧೯೮೨) ಬಳಸಿಕೊಂಡು ಅದನ್ನು 'ಹಸ್ತಪ್ರತಿವರ್ಷ' ಎಂದು ಘೋಷಿಸಿ ಒಂದು ಕಡೆ ರಾಜ್ಯದಾದ್ಯಂತ ಹಸ್ತಪ್ರತಿಶಾಸ್ತ್ರ ಪ್ರದರ್ಶನ, ಹಸ್ತಪ್ರತಿ ವರ್ಷಾಚರಣೆಯ ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ಸಾಮಾನ್ಯ ವರ್ಗದಲ್ಲಿ ಈ ಕ್ಷೇತ್ರದ ಬಗ್ಗೆ ಆಸಕ್ತಿ ಬೆಳೆಸಿದರೆ ಇನ್ನೊಂದು ಕಡೆ ರಾಜ್ಯ-ರಾಷ್ಟ್ರಮಟ್ಟದ ವಿಚಾರ ಗೋಷ್ಠಿಗಳನ್ನು ನಡೆಸಿ ವಿದ್ವಾಂಸವಲಯದ ಗಮನವನ್ನು ಇತ್ತ ಸೆಳೆಯಲಾಯಿತು. ಇದರ ಪರಿಣಾಮವಾಗಿ ಅನೇಕರು ಸ್ವಯಂ ಪ್ರೇರಿತರಾಗಿ ಹಸ್ತಪ್ರತಿಗಳನ್ನು ಸಂಗ್ರಹಾಲಯಗಳಿಗೆ ನೀಡಿದರು. ಸಂಗ್ರಹಾಲಯಗಳು ತಮ್ಮಲ್ಲಿರುವ ಹಸ್ತಪ್ರತಿಗಳನ್ನು ಕತ್ತಲ ಕೋಣೆಯಿಂದ ಹೊರತೆಗೆದವು; ಮಠಮಾನ್ಯಗಳು ಧೂಳು ಕೊಡವಿ ಮೇಲೆದ್ದವು. ತಮ್ಮಲ್ಲಿದ್ದ ಹಸ್ತಪ್ರತಿಗಳನ್ನು ಸಂರಕ್ಷಿಸಲು ಕಾಳಜಿ ವಹಿಸಿದ್ದಲ್ಲದೆ ಸೂಚಿಗಳ ತಯಾರಿಕೆಗೆ ಮುಂದಾದವು. ವಿಶ್ವವಿದ್ಯಾನಿಲಯಗಳು ತಮ್ಮ ಪಠ್ಯ ವಿಷಯಗಳಲ್ಲಿ ಗ್ರಂಥ ಸಂಪಾದನೆಯ ಜೊತೆಗೆ 'ಹಸ್ತಪ್ರತಿಶಾಸ್ತ್ರ'ವನ್ನೂ ಸೇರಿಸಿದವು. ಪ್ರತಿಷ್ಠಾನ ಪ್ರತಿವರ್ಷ ಹಸ್ತಪ್ರತಿ ಪ್ರದರ್ಶನಗಳನ್ನು ಏರ್ಪಡಿಸಿ ಜನಜಾಗೃತಿ ಮೂಡಿಸುವ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ೧೯೮೨ರಲ್ಲಿ ನಡೆಸಿದ ರಾಷ್ಟ್ರಮಟ್ಟದ ವಿಚಾರಗೋಷ್ಠಿಯಲ್ಲಿ ತಜ್ಞರೆಲ್ಲ ಒಂದು ಕಡೆ ಸೇರಿ ಜನರಲ್ಲಿನ ಈ ಜಾಗೃತಿಯನ್ನು ಇನ್ನಷ್ಟು ಮೂಡಿಸಲು ಕೆಲವು ಉಪಯುಕ್ತ ನಿರ್ಣಯಗಳನ್ನು ಕೈಗೊಂಡರು. ಇವುಗಳನ್ನು ಪ್ರತಿಷ್ಠಾನ ತನ್ನ ಮಿತಿಯಲ್ಲಿ ಜಾರಿಗೊಳಿಸುತ್ತಿದ್ದರೂ ಇವು ಸಾರ್ವಜನಿಕವಾಗಿ, ಸಾಂಸ್ಥಿಕವಾಗಿ ಜಾರಿಗೊಳ್ಳುವ ಅಗತ್ಯವಿದೆ. ಆ ನಿರ್ಣಯಗಳನ್ನು ಈಗ ಮತ್ತೆ ನೆನಪಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಇದರಲ್ಲಿ ಅನೇಕ ತಜ್ಞರ ಚಿಂತನೆ ಅಡಗಿದೆ. "ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ

ಸಂಯುಕ್ತಾಶ್ರಯದಲ್ಲಿ ೩೦-೧-೧೯೮೧ರಿಂದ ಮೂರು ದಿನ ಬೆಂಗಳೂರು ಗೋಖಲೆ ಸಾರ್ವಜನಿಕ ಸಂಸ್ಥೆಯ ಸಭಾಂಗಣದಲ್ಲಿ ಹಸ್ತಪ್ರತಿಶಾಸ್ತ್ರ ವಿಚಾರಗೋಷ್ಠಿ ನಡೆಯಿಸಿತು. ೧-೨-೧೯೮೧ರಂದು ಅಪರಾಹ್ನ ಸಮಾರೋಪ ಸಮಾರಂಭ ನಡೆಯಿತು. ಪ್ರತಿಷ್ಠಾನದ ಅಧ್ಯಕ್ಷರಾದ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಅಂದಿನ ಸಭೆಗೆ ಆಗಮಿಸಿದ್ದ ವಿದ್ವಾಂಸರ ಸಭೆಯ ಬಹಿರಂಗಾಧಿವೇಶನದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಅಧ್ಯಕ್ಷರು ಸೂಚಿಸಿ, ಸಭೆಯ ಮುಂದಿಟ್ಟರು. ಡಾ॥ ಕೆ. ಕೃಷ್ಣಮೂರ್ತಿ ಮತ್ತು ಶ್ರೀ ಎನ್. ಬಸವಾರಾಧ್ಯರು ಅನುಮೋದಿಸಿದರು. ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದವು" * (ನಿರ್ಣಯಗಳಿಗೆ ನೋಡಿ: ಪರಿಶಿಷ್ಟ-೧)

ಹಸ್ತಪ್ರತಿ ಪ್ರದರ್ಶನಗಳು : ಪ್ರತಿಷ್ಠಾನದ ಪ್ರಾರಂಭದ ದಿನಗಳಿಂದಲೂ ಪ್ರತಿವರ್ಷ 'ಸರಸ್ವತಿ ಪೂಜಾ' ದಿನದಿಂದ ೩-೪ ದಿನಗಳವರೆಗೆ ಪ್ರತಿಷ್ಠಾನದಲ್ಲಿ ಹಸ್ತಪ್ರತಿ ಪ್ರದರ್ಶನವನ್ನು ತಪ್ಪದೇ ನಡೆಸಲಾಗುತ್ತಿದೆ. ಕನ್ನಡ ಸಾಹಿತ್ಯಪರಿಷತ್ತಿನ ಸಾಹಿತ್ಯ ಸಮ್ಮೇಳನಗಳಲ್ಲೂ ಹಸ್ತಪ್ರತಿ ಪುಸ್ತಕ ಪ್ರದರ್ಶನ ಮಳಿಗೆ ತೆರೆದು ಪ್ರದರ್ಶಿಸಲಾಗುತ್ತದೆ. ಇದೀಗ ರಜತೋತ್ಸವ ವರ್ಷದಲ್ಲಿ 'ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ' ಎಂಬ ವಿಶೇಷ ಯೋಜನೆ ರೂಪಿಸಿ ಕರ್ನಾಟಕದಾದ್ಯಂತ ಕರೆದಲ್ಲಿಗೆ ಹೋಗಿ ಶಾಲೆ-ಕಾಲೇಜು-ಸಂಘ ಸಂಸ್ಥೆಗಳಲ್ಲಿ ಈ ಪ್ರದರ್ಶನಗಳನ್ನು ನಡೆಸಲಾಗುತ್ತಿದೆ. ಈ ಪ್ರದರ್ಶನಗಳು ಜನರಲ್ಲಿ ಅಚ್ಚರಿಯ ಜಾಗೃತಿ ಮೂಡಿಸುವಲ್ಲಿ ಸಫಲವಾಗಿದೆಯಲ್ಲದೆ ಅನೇಕ ಹಸ್ತಪ್ರತಿಗಳು ಹೊರಬರಲು ಪ್ರತಿಷ್ಠಾನ ಮತ್ತು ಚರ ಭಂಡಾರಗಳನ್ನು ಸೇರಲು ಸಹಾಯಕವಾಗಿವೆ. ಈ ಮೂಲಕ ನಿರಂತರವಾಗಿ ಜಾಗೃತಿ ಕಾರ್ಯವನ್ನು ಪ್ರತಿಷ್ಠಾನ ಸಣ್ಣ ಪ್ರಮಾಣದಲ್ಲಾದರೂ ನಡೆಸುತ್ತಲೇ ಬಂದಿದೆ.

ಹಸ್ತಪ್ರತಿ ಶಿಬಿರ ಮತ್ತು ಕಾರ್ಯಗಾರಗಳು : ಒಂದು ವಾರ ಅಥವಾ ಮೂರು ದಿನಗಳ ಹಸ್ತಪ್ರತಿ ಕಾರ್ಯಾಗಾರ ಹಾಗೂ ಶಿಬಿರಗಳನ್ನು 'ಸಿರಿಕಂಟ' ವೇದಿಕೆ ಇದರಿಂದಲೂ ಜಾಗೃತಿಕಾರ್ಯ ನಡೆಯುತ್ತಿದೆ. ನಾಡಿನ ಬೇರೆ ಬೇರೆ ಭಾಗದ ಆಸಕ್ತರೂ ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಹಸ್ತಪ್ರತಿ ಸಮ್ಮೇಳನ : ಪ್ರತಿವರ್ಷ ಕರ್ನಾಟಕದ ಬೇರೆ ಬೇರೆ ಜಿಲ್ಲೆ ಅಥವಾ ಹಸ್ತಪ್ರತಿಗಳಿರುವ ಊರುಗಳಲ್ಲಿ ಹಸ್ತಪ್ರತಿಗಳ ವಿಚಾರವಾಗಿಯೇ ಪ್ರತ್ಯೇಕ ಸಮ್ಮೇಳನಗಳನ್ನು ನಡೆಸಲು 'ಸಿರಿಕಂಟ' ಆಲೋಚಿಸುತ್ತಿದೆ. ಹಸ್ತಪ್ರತಿಶಾಸ್ತ್ರ ಇಂದು ಬಹುಶಾಸ್ತ್ರೀಯ ಅಧ್ಯಯನವಾಗಿ ರೂಪಗೊಳ್ಳುತ್ತಿದ್ದು ಅದನ್ನು ಇನ್ನಷ್ಟು ಬೆಳೆಸುವ ಸಲುವಾಗಿ ಈ ಸಮಾವೇಶಗಳನ್ನು ನಡೆಸಲಾಗುತ್ತದೆ. ಇದು ಪ್ರತಿಷ್ಠಾನದ ರಜತೋತ್ಸವ ಯೋಜನೆಯಾಗಿ ಜನ್ಮತಾಳಲಿದೆ. ಹಸ್ತಪ್ರತಿಗಳ ಸಂಗ್ರಹಾನುಭವ, ಶೋಧಕಾರ್ಯ, ದೊರೆತ ಹಸ್ತಪ್ರತಿಗಳ ಪರಿಚಯ, ಹಸ್ತಪ್ರತಿಗಳ ಸಂರಕ್ಷಣೆ; ಹಸ್ತಪ್ರತಿ ವಿಚಾರ, ಹಸ್ತಪ್ರತಿಗಳಲ್ಲಿರುವ ವಸ್ತು ವಿವೇಚನೆ, ಪರಿಷ್ಕರಣೆ, ಪುನಾಪರಿಷ್ಕರಣೆ, ಪಾಠಾಂತರಗಳು, ಸಾಹಿತ್ಯಗಳು, ಕವಿಕಾವ್ಯ ವಿಚಾರ, ಹಸ್ತಪ್ರತಿಗಳಲ್ಲಿರುವ ಭಾಷೆ, ಸಂಸ್ಕೃತಿ, ಲಿಪಿ, ಚಿತ್ರಗಳ ವಿವರಣೆ, ಸಾಹಿತ್ಯ, ಇತಿಹಾಸ, ಸಾಮಾಜಿಕ, ರಾಜಕೀಯ, ವೈದ್ಯ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ವಿಚಾರಗಳತ್ತ ಬೆಳಕು ಚೆಲ್ಲುವಂತಹ ಲೇಖನಟಿಪ್ಪಣಿಗಳನ್ನು ಮಂಡಿಸುವ ಆಸ್ತಕರಿಗೆ ವೇದಿಕೆ ರೂಪಿಸುವುದು ಇದರ ಉದ್ದೇಶವಾಗಿರುತ್ತದೆ.

೨. ಪ್ರಕಟನಾ ಕಾರ್ಯ :

ಫ.ಗು. ಹಳಕಟ್ಟಿ ಶತಮಾನೋತ್ಸವ ಸ್ಮರಣೆಗಾಗಿ ಪ್ರಕಟಿಸಿದ ಸಂಸ್ಮರಣ ಗ್ರಂಥ 'ಮಣಿಹ' (೧೯೮೨) ಮತ್ತು ರಾಷ್ಟ್ರಮಟ್ಟದಲ್ಲಿ ನಡೆಸಿದ ವಿಚಾರಗೋಷ್ಠಿಲೇಖನಗಳ ಸಂಕಲನ 'ಹಸಪ್ರತಿ ಶಾಸ್ತ್ರ' (೧೯೮೩), ಈ ಕ್ಷೇತ್ರದಲ್ಲಿ ಪ್ರತಿಷ್ಠಾನ ಪ್ರಕಟಿಸಿದ ಪ್ರಮುಖ ಕೃತಿಗಳು. ಇವು ಹಸ್ತಪ್ರತಿಶಾಸ್ತ್ರದಲ್ಲಿ ಮುಂದೆ ನಡೆದ ಎಲ್ಲ ಪ್ರಕಟನೆಗಳಿಗೂ ಪ್ರಾಥಮಿಕ ಮತ್ತು ಆಕರ ಗ್ರಂಥಗಳಾಗಿ ಸ್ಥಾನ ಪಡೆದಿವೆ. ಸುಮಾರು ೫೦ಕ್ಕೂ ಹೆಚ್ಚು ಜನ ಲೇಖಕರಿಂದ ಲೇಖನ ಪಡೆಯುವುದರ ಮೂಲಕ ಇದರ ಮಹತ್ವವನ್ನು ಹೆಚ್ಚಿಸಿರುವರಲ್ಲದೆ ನವ ಆಸಕ್ತರಿಗೆ ಪ್ರೇರಣೆಯಾಗಿಯೂ ಈ ಕೃತಿಗಳು ನಿಂತಿವೆ. ಪ್ರತಿಷ್ಠಾನ ಈವರೆಗೆ ಸಿದ್ಧಪಡಿಸಿರುವ ಸೂಚಿಗಳು ಮೂರಾದರೂ ಪ್ರಕಟಿಸಿರುವುದು ಕೇವಲ ಒಂದು ಮಾತ್ರ, ಕೆಳದಿ ಗುಂಡಾಜೋಯಿಸ್ ಮತ್ತು ನಾ. ಗೀತಾಚಾರ್ಯರ ಸಂಪಾದಕತ್ವದಲ್ಲಿ

ಪ್ರಕಟವಾಗಿರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಭಾಗ-

---

* ವಾರ್ತಾಪತ್ರ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ಸಂ: ೪, ಮಾರ್ಚ್ ೮೧.ಪು. ೪೫ (ಅನುಬಂಧ)- ಇದರಲ್ಲಿ ಈ ಟಿಪ್ಪಣಿಯೊಂದಿಗೆ ೧೭ ನಿರ್ಣಯಗಳಿವೆ.

೧ರಲ್ಲಿ (೧೯೮೭), ೭೯ ಓಲೆಗರಿ ಹಸ್ತಪ್ರತಿ ಕಟ್ಟುಗಳಲ್ಲಿರುವ ೯೬ ಕೃತಿಗಳು ದಾಖಲಾಗಿವೆ. ಭಾಗ-೨ರಲ್ಲಿ ೮೦ ಕಾಗದ ಹಸ್ತಪ್ರತಿಗಳಿದ್ದು ೧೦೪ ಕೃತಿಗಳು ದಾಖಲಾಗಿವೆ. ಇದನ್ನು ನಾ.ಗೀತಾಚಾರ್ಯ ಸಂಪಾದಿಸಿದ್ದಾರೆ. ಭಾಗ-೩ರಲ್ಲಿ ೯೦ ಹಸ್ತಪ್ರತಿ ಕಟ್ಟುಗಳಲ್ಲಿರುವ ೧೫೦ ಕೃತಿಗಳ ಸೂಚಿ ಪ್ರಕಟನೆಗೆ ಸಿದ್ಧವಾಗುತ್ತಿದೆ. ಇದನ್ನು ನಾ. ಗೀತಾಚಾರ್ಯ ಎಸ್.ಎಸ್. ರಾಮಸ್ವಾಮಿ ಅಯ್ಯರ್ ಜಿ. ಶಂಭಣ್ಣ ಅವರ ಮಾರ್ಗದರ್ಶನದಲ್ಲಿ ಹಸ್ತಪ್ರತಿ ವಿದ್ಯಾರ್ಥಿಗಳು ಸಿದ್ಧಪಡಿಸುತ್ತಿದ್ದಾರೆ.

ಈ ಕ್ಷೇತ್ರದಲ್ಲಿ ಪ್ರತಿಷ್ಠಾನದ ಇನ್ನೊಂದು ಮುಖ್ಯ ಪ್ರಕಟನೆಯೆಂದರೆ 'ಹಸ್ತಪ್ರತಿಶಾಸ್ತ್ರ ಪರಿಚಯ'. ಪ್ರತಿಷ್ಠಾನ ನಡೆಸುತ್ತಿರುವ 'ಹಸ್ತಪ್ರತಿಶಾಸ್ತ್ರ ತರಗತಿ'ಯ ಪಠ್ಯವನ್ನಾಗಿ ಈ ಗ್ರಂಥವನ್ನು ಪರಿಗಣಿಸಲಾಗಿದ್ದು ಈ ಶಾಸ್ತ್ರದ ಅಧ್ಯಯನದ ಸ್ಥೂಲ ಸ್ವರೂಪವವನ್ನು ಇದು ಒಳಗೊಂಡಿದೆ. ಈಚೆಗೆ ಪ್ರಸಿದ್ಧ ವಿದ್ವಾಂಸರೂ ಪ್ರತಿಷ್ಠಾನದ ಅಧ್ಯಕ್ಷರೂ ಆದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀಗಳ 'ಗ್ರಂಥ ಸಂಪಾದನ ಪರಿಭಾಷಾಕೋಶ' ಎಂಬ ಮೌಲಿಕ ಕೃತಿಯನ್ನು, ಎ.ಆರ್. ಗುರು ಅವರ ಅಲಿಗೆ ಕೆಳಗಣ ಹಸ್ತ ಪ್ರತಿಗಳು ಎಂಬ ಸೂಚಿ ಗ್ರಂಥವನ್ನು ಪ್ರಕಟಿಸಲಾಗಿದೆ.

ಪ್ರತಿಷ್ಠಾನ ಈವರೆಗೆ ೧೫ ಪ್ರಾಚೀನ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದೆ. ಇವುಗಳಲ್ಲಿ ಭಿನ್ನಪಾಠ ಪರಂಪರೆ ಇರುವ ಸರ್ವಜ್ಞ ವಚನಗಳು (೧೯೮೨) 'ಸೂತಭಾರತ' (೧೯೮೨) 'ಕುಮಾರವ್ಯಾಸ ಭಾರತ ಸಂಗ್ರಹ' (೧೯೯೦) ಗಮನಾರ್ಹವಾಗಿವೆ. ಅಪ್ರಕಟಿತ ಕೃತಿಗಳಾದ ತಿಮ್ಮಪ್ಪದಾಸರ 'ಕೃಷ್ಣಬಾಲಲೀಲೆ' ಭಾಗ-೧, ೨ (೧೯೮೬, ೯೬) 'ಧ್ರುವಚರಿತ್ರೆ' (೧೯೮೩)ಗಳಲ್ಲದೆ ಇನ್ನೂ ಅನೇಕ ಕೃತಿಗಳನ್ನು ಪರಿಚಯಿಸಲಾಗಿದೆ. ಶ್ರೀಕೃಷ್ಣಬಾಲಲೀಲೆ ಕೀರ್ತನ ಪ್ರಕಾರದಲ್ಲಿರುವ ೨ ಸಂಪುಟಗಳ ಬೃಹತ್ ಕಾವ್ಯವಾಗಿದೆ. ಕೀರ್ತನ ಕುಸುಮಾಂಜಲಿ (೧೯೮೦) ಬೇಟೆರಾಯದೀಕ್ಷಿತರ ಕೀರ್ತನೆಗಳು (೧೯೯೬) ಮುಂತಾದ ನೂತನ ಕೀರ್ತನೆಗಳನ್ನೂ ಸಂಪಾದಿಸಿ ಪ್ರಕಟಿಸಲಾಗಿದೆ. 'ಶ್ರೀಕೃಷ್ಣದೇವರಾಯನ ದಿನಚರಿ' (೧೯೮೩) ಪ್ರತಿಷ್ಠಾನದ ಮಹತ್ವದ ಪ್ರಕಟನೆಗಳಲ್ಲಿ ಇನ್ನೊಂದು. ಇದು ಕೃಷ್ಣದೇವರಾಯನ ಇತಿಹಾಸದ ಮೇಲೆ ಬೆಳಕು ಚೆಲ್ಲಿರುವ ಐತಿಹಾಸಿಕ ಕೃತಿ. 'ಶ್ರೀನಿವಾಸ ಕಲ್ಯಾಣ' (೧೯೮೬) 'ಪದ್ಮಿನಿ ಕಲ್ಯಾಣ' (೧೯೯೫) 'ಚಂದ್ರಚೂಡಾಮಣಿಶತಕ' (೧೯೮೯) 'ಮರುನ್ನಂದನಶತಕ' (೧೯೮೯) ಮುಂತಾದ ಕೃತಿಗಳನ್ನೂ ಇಲ್ಲಿ ಹೆಸರಿಸಬಹುದು. ಈಚೆಗೆ ತಿಮ್ಮಪ್ಪದಾಸರ ಕೀರ್ತನೆಗಳನ್ನು ಪ್ರಕಟಿಸಲಾಗಿದೆ. ತಿಮ್ಮಪ್ಪದಾಸರು ಮತ್ತು ಅವರ ಪೀಳಿಗೆಯ ಇತರ ದಾಸರ ಕೀರ್ತನೆಗಳು ಇದರಲ್ಲಿದ್ದು ಮಹತ್ವದ ಪ್ರಕಟನೆಯಾಗಿದೆ.

೩. ಶಾಸ್ತ್ರ ನಿರ್ಮಾಣ ಕಾರ್ಯ :

'ಹಸ್ತಪ್ರತಿಶಾಸ್ತ್ರ'ದ ಪದದ ನಿಷ್ಪತ್ತಿಯಿಂದ ಹಿಡಿದು ಅದರ ವ್ಯಾಪ್ತಿ, ವ್ಯಾಖ್ಯೆ, ಪಠ್ಯ ವಿಷಯದ ನಿರ್ಮಾಣ ಮತ್ತು ಪ್ರಾಯೋಗಿಕವಾಗಿ ಬೋಧನೆಯ ಶಿಸ್ತನ್ನಾಗಿಸುವವರೆಗೆ ಈ ಕ್ಷೇತ್ರದಲ್ಲಿ ಪ್ರತಿಷ್ಠಾನದ ಕೊಡುಗೆಯಿದೆ. ಮೊದಲ ಬಾರಿಗೆ 'ಹಸ್ತಪ್ರತಿಶಾಸ್ತ್ರ' ಪದವನ್ನು ಚಲಾವಣೆ ಮಾಡಿ ಅದರ ಪರ್ಯಾಯ ಪದವಾಗಿ ಇಂಗ್ಲೀಷ್‌ನಲ್ಲಿ 'ಮ್ಯಾನ್‌ಸ್ಕ್ರಿಪ್ಟಾಲಜಿ'ಯನ್ನು ಠಂಕಿಸಿ ನಿಘಂಟಿಗೆ ಸೇರಿದ ಕೀರ್ತಿ ಪ್ರತಿಷ್ಠಾನದ್ದು. ಕೇವಲ ಸಂಪಾದನೆಯ ದೃಷ್ಟಿಯಲ್ಲಿ ಮಾತ್ರ ಗ್ರಹಿಸಿದ್ದ ಹಸ್ತಪ್ರತಿಗಳನ್ನು ಅದರ ಸಂರಕ್ಷಣೆ ಮತ್ತು ವಿವಿಧ ಮುಖಗಳ ಅಧ್ಯಯನ ದೃಷ್ಟಿಯತ್ತ ಹೊರಳಿಸಿದುದು ಹಸ್ತಪ್ರತಿಶಾಸ್ತ್ರದ ವೈಶಿಷ್ಟ್ಯ. ನೂತನ ಅಧ್ಯಯನ ಶಾಸ್ತ್ರವನ್ನಾಗಿ ಪರಿವರ್ತಿಸಿದ ಪ್ರತಿಷ್ಠಾನದ ಪ್ರಯತ್ನ ಹಲವು ವಿಶ್ವವಿದ್ಯಾಲಯಗಳಲ್ಲಿ ಅಸ್ತಿತ್ವವನ್ನು ಪಡೆಯಿತು. ಉನ್ನತ ಅಧ್ಯಯನದಲ್ಲಿ ಪಠ್ಯ ವಿಷಯದಿಂದ ಜಾರುತ್ತಿದ್ದ ಗ್ರಂಥ ಸಂಪಾದನೆ ಈ ಕಾರಣದಿಂದ ಹೊಸ ಆವಿಷ್ಕಾರ ಪಡೆದು ಮತ್ತೆ ಉಳಿಯುವಂತಾಯಿತು. ಕನ್ನಡ ವಿಶ್ವವಿದ್ಯಾನಿಲಯ 'ಹಸ್ತ ಪ್ರತಿಶಾಸ್ತ್ರ' ವಿಭಾಗವನ್ನೇ ತೆಗೆಯುವಂತಾಯಿತು.

ಪ್ರತಿಷ್ಠಾನ ನಡೆಸಿದ ಈ ಕ್ಷೇತ್ರದ ಬಗೆಗಿನ ಚಿಂತನೆ ಮತ್ತು ಪ್ರಕಟಿಸಿದ 'ಮಣಿಹ' ಹಾಗೂ ಹಸ್ತಪ್ರತಿಶಾಸ್ತ್ರ ಆಕರ ಗ್ರಂಥಗಳ ಮೂಲಕ ಇದರ ಭೂಮಿಕೆ ರೂಪುಗೊಂಡು ಡಾ॥ ಎಂ.ಎ. ಕಲಬುರ್ಗಿಯವರ ಕನ್ನಡ ಹಸ್ತಪ್ರತಿಶಾಸ್ತ್ರ (೧೯೯೩) ಮತ್ತು ಬಿ.ಎಸ್. ಸಣ್ಣಯ್ಯ ಅವರ ಹಸ್ತಪ್ರತಿಶಾಸ್ತ್ರ ಪರಿಚಯ (೧೯೯೩) ಎಂಬ ಶಾಸ್ತ್ರಬದ್ಧ ಕೃತಿಗಳ ರಚನೆಯವರೆಗೂ ಈ ಶಿಸ್ತು ಅಧಿಕೃತತೆಯನ್ನು ಪಡೆಯಿತು. ಪ್ರತಿಷ್ಠಾನವೇ 'ಹಸ್ತಪ್ರತಿಶಾಸ್ತ್ರ ಪರಿಚಯ' ಪುಸ್ತಕವನ್ನು ಪ್ರಕಟಿಸಿದ್ದಲ್ಲದೆ ನಿರ್ದಿಷ್ಟ ಪಠ್ಯವಿಷಯವನ್ನು ರೂಪಿಸಿದೆ. ೧೯೯೦ರಿಂದಲೂ "ಹಸ್ತಪ್ರತಿಶಾಸ್ತ್ರ ತರಗತಿ"ಗಳನ್ನು ನಡೆಸುತ್ತ ನವಪೀಳಿಗೆಯಲ್ಲಿ ಈ ಕ್ಷೇತ್ರದತ್ತ ಆಸಕ್ತಿ ಹೊರಳಿಸಲಾಗುತ್ತಿದೆ. ಪ್ರತಿ ವರ್ಷ ಕನಿಷ್ಠ ೫ ಜನ ಆಸಕ್ತರಿಗೆ ಹಸ್ತಪ್ರತಿಗಳ ಮಹತ್ವ-ಸಂಗ್ರಹ-ಸಂರಕ್ಷಣೆ-ಸಂಪ್ರತೀಕರಣ ಹಾಗೂ ದಾಖಲೀಕರಣ ಮತ್ತು ಗ್ರಂಥ ಸಂಪಾದನೆಯ ತರಬೇತಿ ನೀಡಿ ಪರಿಣಿತರನ್ನಾಗಿ ರೂಪಿಸುತ್ತಿದೆ.

ಇದು ಕರ್ನಾಟಕದಲ್ಲೇ ಏಕೈಕ ಪ್ರಯತ್ನವಾಗಿದೆ. ಈವರೆಗೆ ೧೫ ತಂಡಗಳಾಗಿದ್ದು ೧೦ನೇ ವರ್ಷದ ಸಂದರ್ಭದಲ್ಲಿ ಎಲ್ಲ ವಿದ್ಯಾರ್ಥಿಗಳ ವೇದಿಕೆ 'ಸಿರಿಕಂಟ'ವನ್ನು ಆರಂಭಿಸಿದ್ದು ಇದು ಹಸ್ತಪ್ರತಿ ಸೇವಾ ಕೇಂದ್ರವನ್ನು ನಡೆಸುತ್ತಿದೆ. ಇದರ ಮೂಲಕ ಹಸ್ತಪ್ರತಿಗಳ ಸಂರಕ್ಷಣೆ-ಸಂಪ್ರತಿ ಮಾಡಿಕೊಡಲಾಗುತ್ತಿದೆ.

೪. ಹಸ್ತಪ್ರತಿ ಭಂಡಾರ :

ಪ್ರತಿಷ್ಠಾನದ ಹಸ್ತಪ್ರತಿ ಭಂಡಾರ ತಕ್ಕಮಟ್ಟಿಗೆ ಸುಸಜ್ಜಿತವಾಗಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸಲು ವಿಶೇಷ ತಂತ್ರಜ್ಞಾನದಿಂದ ತಯಾರಿಸಿರುವ ಬೀರುಗಳು, ಹಸ್ತಪ್ರತಿಗಳಿಗೆ ರಾಸಾಯನಿಕ ಚಿಕಿತ್ಸೆ ನೀಡುವ ವೈಜ್ಞಾನಿಕ ಸಾಧನವಾದ ಫ್ಯೂಮಿಗೇಷನ್ ಛೇಂಬರ್ (ಪ್ರಧೂಮನ ಕಪಾಟು), ಮೈಕ್ರೊಫಿಲಂ ರೀಡರ್‌ಗಳ ಸೌಲಭ್ಯಗಳಿದ್ದು ಹಸ್ತಪ್ರತಿಗಳನ್ನು ಸಂರಕ್ಷಿಸಲು ಆಧುನಿಕವಾದ ಸಿಟ್ರನೆಲ್ಲ ಆಯಿಲ್ ಅನ್ನು ಉಪಯೋಗಿಸಲಾಗುತ್ತಿದೆ. ಇದೀಗ ಸ್ವಂತ ಕಟ್ಟಡ 'ಬಿ.ಎಂ.ಶ್ರೀ. ಕಲಾಭವನ'ವು ಸಿದ್ಧವಾಗಿದ್ದು ಅದರಲ್ಲಿ ಪ್ರತ್ಯೇಕ ಸುಸಜ್ಜಿತ ಹಸ್ತಪ್ರತಿ ಸಂಗ್ರಹಾಲಯ ವ್ಯವಸ್ಥೆಗೊಳ್ಳುತ್ತದೆ. ಇದಕ್ಕೆ 'ಅತಿಮಬ್ಬೆ ಹಸ್ತಪ್ರತಿ ಸಂಗ್ರಹಾಲಯ ಎಂದು ಹೆಸರಿಸಲು ನಿರ್ಧರಿಸಿದ್ದು ಇದನ್ನು ಸಂಪೂರ್ಣವಾಗಿ ಸಜ್ಜುಗೊಳಿಸಲು ಅತ್ತಿಮಬ್ಬೆ ಪ್ರತಿಷ್ಠಾನದ ಶ್ರೀಮತಿ ಮನೋಹರಿ ಪಾರ್ಥಸಾರಥಿ ಅವರು ಮುಂದೆ ಬಂದಿದ್ದಾರೆ.

೫. ಕೆಲವು ಮುಖ್ಯ ಹಸ್ತಪ್ರತಿಗಳು :

ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿರುವ ಅತಿ ಸಣ್ಣ ಹಸ್ತಪ್ರತಿಯಾದ 'ಗೌಳಿಶಕುನ' (ಓ.೪೭೫) ಎಂಟು ಸೆಂ.ಮೀ. ಉದ್ದ ಎರಡೂವರೆ ಸೆಂ.ಮೀ. ಅಗಲವಿದೆ. ಅತಿ ದೊಡ್ಡ ಹಸ್ತಪ್ರತಿ 'ಶ್ರೀಮದ್ಭಾಗವತ ಭಾವಾರ್ಥ ದೀಪಿಕಾ ಶ್ರೀಧರೀಯ ವ್ಯಾಖ್ಯಾನ' (ಓ. ೫೧೧) ಇದ್ದು ೯೦ ಸೆಂ.ಮೀ. ಉದ್ದ ೫ ಸೆಂ.ಮೀ. ಅಗಲವಿದ್ದು ಸರಾಸರಿ ಒಂದು ಗರಿಯಲ್ಲಿ ೯ ಸಾಲುಗಳು, ಒಂದು ಸಾಲಿನಲ್ಲಿ ೧೯೫ ಅಕ್ಷರಗಳಿವೆ: ಅತ್ಯಂತ ಒತ್ತಟ್ಟಾದ ಆದರೆ ಸ್ಫುಟವಾದ ಸಣ್ಣ ಬರವಣಿಗೆ ಇರುವ ಹಸ್ತಪ್ರತಿ 'ಶ್ರೀಮದ್ರಾಮಾಯಣ' (ಓ. ೫೧೭) ೫ ಸೆಂ.ಮೀ. ಅಗಲ ೨೪ ಸೆಂ.ಮೀ. ಉದ್ದದ ಪ್ರತಿ ಗರಿಯಲ್ಲಿ ೧೬ ಸಾಲುಗಳೂ ಪ್ರತಿ ಸಾಲಿನಲ್ಲಿ ೮೦ ಅಕ್ಷರಗಳೂ ಇವೆ.

ಪ್ರತಿಷ್ಠಾನದ ಭಂಡಾರದಲ್ಲಿರುವ ವಿಶೇಷ ಹಸ್ತಪ್ರತಿಗಳೆಂದರೆ (೧) ಕುಮಾರವ್ಯಾಸಭಾರತ ಸಂಗ್ರಹದ ಕಾಗದದ ಹಸ್ತಪ್ರತಿ. (ಕಾ.೬೭) ಇದರಲ್ಲಿ ಆಚಾರ್ಯ ಬಿ.ಎಂ.ಶ್ರೀ., ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಡಿ.ಎಲ್. ನರಸಿಂಹಾಚಾರ್ ಮುಂತಾದವರು ಪರಿಶೀಲಿಸಿರುವ ಪಾಠಾಂತರ ಸೂಚನೆಗಳಿವೆ. (೨) ಮೈಸೂರು ಶೈಲಿಯ ವರ್ಣಚಿತ್ರಗಳಿರುವ ಹಸ್ತಪ್ರತಿ 'ಸ್ತೋತ್ರರತ್ನಾಕರ ಅಥವಾ ದೇವತಾನಾಮ ಕುಸುಮ ಮಂಜರಿ' (ಕಾ. ೧೩೮) ಇದರಲ್ಲಿ ೯೮ ಪುಟಗಳಿದ್ದು ೨೦೦ಕ್ಕೂ ಹೆಚ್ಚು ವರ್ಣಚಿತ್ರಗಳಿವೆ. (೩) ತಿಮ್ಮಪ್ಪದಾಸರ ಸ್ವಹಸ್ತಾಕ್ಷರವಿರುವ ೨೦ ಹಸ್ತಪ್ರತಿಗಳು ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದ ಆಸ್ತಿಯಾಗಿದೆ. ಇವುಗಳಲ್ಲಿ ಇನ್ನೂ ಸುಮಾರು ೫೦೦ ಕೀರ್ತನೆಗಳು ಮತ್ತು ಅವರ ಎಲ್ಲ ಕೃತಿಗಳೂ ಅಪ್ರಕಟಿತವಾಗಿವೆ. ಕೀರ್ತನೆಗಳನ್ನು ಪೂರ್ತಿ ಪ್ರತಿ ಮಾಡಲಾಗಿದ್ದು ಪ್ರಕಟಣೆಗೆ ಹಸ್ತಪ್ರತಿಯನ್ನು ಸಿದ್ಧಪಡಿಸಲಾಗಿದೆಯಲ್ಲದೆ ಸರ್ಕಾರದ ಸಮಗ್ರ ದಾಸ ಸಾಹಿತ್ಯ ಪ್ರಕಟನೆ ಯೋಜನೆಗೂ ನೀಡಿದೆ. (೪) 'ಶ್ರೀ ಕೃಷ್ಣದೇವ ರಾಯ ದಿನಚರಿ' ಓಲೆಗರಿಯಲ್ಲಿರುವ ಕೈಫಿಯತ್ತಿನ ರೂಪದ ಹಸ್ತಪ್ರತಿಯಾಗಿದ್ದು ವಿಶೇಷವಾಗಿದೆ. ಈಗಾಗಲೇ ಈ ಕೃತಿ ವಿದ್ವಾಂಸರ ಅಭಿಪ್ರಾಯದಲ್ಲಿ ವಿಜಯನಗರ ಕಾಲದ ಇತಿಹಾಸ ಪುನಾರಚನೆಗೆ ಒಂದು ಮುಖ್ಯ ಆಕರವಾಗಿ ಪರಿಣಮಿಸಿದೆ.

ದಂತದ ಕೆತ್ತನೆಯಿರುವ, ವರ್ಣಚಿತ್ರಗಳಿರುವ ಪಟ್ಟಿಕೆಗಳು; ವೈವಿಧ್ಯಮಯ ಕಂಠಗಳು; ಗ್ರಂಥ, ಅರವ, ತಿಗಳಾರಿ, ಮೋಡಿ, ನಾಗರಿ, ತಮಿಳು, ತೆಲುಗು ಲಿಪಿಯಲ್ಲಿರುವ ಹಸ್ತಪ್ರತಿಗಳು; ಕಡತ, ಸನ್ನದು, ನಿರೂಪಗಳು ಹೀಗೆ ವೈವಿಧ್ಯಮಯವಾದ ಹಸ್ತಪ್ರತಿಗಳು ಪ್ರತಿಷ್ಠಾನದ ಭಂಡಾರದಲ್ಲಿವೆ.

❑

> ಹಸ್ತಪ್ರತಿ ಭಂಡಾರ ಸದ್ಯದಲ್ಲೆ 'ಅತ್ತಿಮಬ್ಬೆ ಹಸ್ತಪ್ರತಿ ಭಂಡಾರ' ಎಂಬ ಹೆಸರಿನಲ್ಲಿ ಸುಸಜ್ಜಿತಗೊಳ್ಳಲಿದೆ. ಇಡೀ ಭಂಡಾರವನ್ನು ಸುಸಜ್ಜಿತಗೊಳಿಸಲು ಅತ್ತಿಮಬ್ಬೆ ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕಿ ಶ್ರೀಮತಿ ಮನೋಹರಿ ಪಾರ್ಥಸಾರಥಿ ಅವರು ಕೃಪೆಯಿಟ್ಟು ಮುಂದೆ ಬಂದಿದ್ದಾರೆ.

'ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ' - ವರದಿ

● *ಜೆ.ಎಸ್.ಎಸ್. ರಾವ್, ಧೀರೇಂದ್ರ ವಿ. ಜಾಗೀರ್‌ದಾರ್*

'ಪುಸ್ತಕ ಶಕ್ತಿ'ಯವರು ಸಾಹಿತಿಗಳ, ಪತ್ರಕರ್ತರ, ಚಿತ್ರಕಾರರ, ಗಮಕಿಗಳ ಒಂದು ತಂಡವನ್ನು ರಚಿಸಿ ಪ್ರಸಿದ್ಧ ಸಾಹಿತಿಗಳಾದ ಡಾ|| ಟಿ.ವಿ. ವೆಂಕಟಾಚಲಶಾಸ್ತ್ರೀಗಳವರ ಸಾರಥ್ಯದಲ್ಲಿ ಈ 'ಕವಿನಮನ ಪ್ರವಾಸ' ಹೊರಡಲು ಯೋಜಿಸಿದ್ದರು.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಪ್ರೊ|| ನಾ. ಗೀತಾಚಾರ್ಯರು ಈ ಕವಿನಮನದ ಜೊತೆಗೆ ನಮ್ಮ ಪ್ರತಿಷ್ಠಾನದ ರಜತಮಹೋತ್ಸವದ ಅಂಗವಾಗಿ ಪ್ರಾರಂಭವಾಗಿರುವ "ಮನೆ ಬಾಗಿಲಿಗೆ ಪ್ರಾಚೀನ ಹಸ್ತಪ್ರತಿ ಪ್ರದರ್ಶನ" ಎಂಬ ಕಾರ್ಯಕ್ರಮವನ್ನು ಜೋಡಿಸಿದ್ದರು.

ಹೀಗಾಗಿ 'ಸಿರಿಕಂಟ'ದ ಸಂಚಾಲಕರಲ್ಲಿ ಒಬ್ಬನಾದ ನನಗೆ ಕವಿಗಳ ಹುಟ್ಟೂರಿನಲ್ಲಿ ಪ್ರಾಚೀನ ಹಸ್ತ ಪ್ರತಿಗಳ ಪ್ರದರ್ಶನಗಳನ್ನು ಏರ್ಪಡಿಸುವಂತಹ ಸುವರ್ಣಾವಕಾಶ ಲಭಿಸಿತು.

ಹಸ್ತಪ್ರತಿಗಳು ನಮ್ಮ ನಾಡಿನ ಆಸ್ತಿಯಾಗಿದ್ದು ಜ್ಞಾನದ ಗಣಿಯಾದ ಇವುಗಳ ಬಗ್ಗೆ ಜನರಿಗೆ ಸರಿಯಾದ ತಿಳಿವಳಿಕೆ ಇಲ್ಲದ್ದು ಬಹಳ ವಿಷಾದನೀಯ. ಪ್ರದರ್ಶನವನ್ನು ವೀಕ್ಷಿಸಿದವರಲ್ಲಿ ಅನೇಕ ಜನರು ನಮ್ಮನ್ನು ಭವಿಷ್ಯ ಹೇಳುವವರು ಎಂದೂ, ಮನೆಮದ್ದುಗಳನ್ನು ಮಾರುವ ನಾಟಿ ವೈದ್ಯರೆಂದು ಭಾವಿಸಿದರೆ ಇನ್ನು ಕೆಲವರು ಇಂತಹ ಅಮೂಲ್ಯ ವಸ್ತುಗಳ ಮಾರಾಟಗಾರರು ಎಂದು ಭಾವಿಸಿದರು. ಇನ್ನು ಹಸ್ತಪ್ರತಿಗಳನ್ನು ಹೊಂದಿರುವವರ ಆಲೋಚನೆಯೋ ಭಿನ್ನವಾಗಿದ್ದು, ಹಸ್ತಪ್ರತಿಗಳಲ್ಲಿ ನಿಧಿಯ ವಿವರಗಳಿರುತ್ತವೆಂದು ಕೆಲವರು ತಮ್ಮ ಅದೃಷ್ಟ ದೇವತೆಯೇ ಅದರಲ್ಲಿ ಇದೆಯೆಂದು ಇನ್ನು ಕೆಲವರು, ಅದನ್ನು ಕುರಿತು ಮಾತನಾಡಲಿಕ್ಕೂ ಹೆದರುತ್ತಿದ್ದರು. ಅಂತಹವರು ಅವುಗಳನ್ನು ಪೂಜೆಯ ಗೂಡುಗಳಲ್ಲಿ ದೇವರ ಜೊತೆಗಿಟ್ಟು ಪೂಜಿಸುತ್ತಾರೆಯೇ ಹೊರತು ಅದನ್ನು ತೆಗೆದು ನೋಡುವದಾಗಲಿ ಅದರ ಸಂರಕ್ಷಣೆಯ ಬಗೆಗಾಗಲಿ ಆಲೋಚಿಸುವದು ವಿರಳ.

ನಾವು ಹೋದ ಎಲ್ಲ ಕಡೆಗಳಲ್ಲಿ ಒಂದೆರಡನ್ನು ವಿನಾಯಿತಿಗೊಳಿಸಿದರೆ ಹಳ್ಳಿಪಟ್ಟಣ ಎನ್ನದೆ ಎಲ್ಲಿ ಜಾಗಸಿಕ್ಕಿದರೆ ಅಲ್ಲಿ, ಎಲ್ಲಿ ಜನಸಿಕ್ಕಿದರೆ ಅಲ್ಲೆ ಪ್ರದರ್ಶನಗಳನ್ನು ನಡೆಸಿದೆವು. ಅನೇಕರು ಅವುಗಳನ್ನು ನೋಡಿ ಆನಂದಿಸಿದರು. ಹೆಚ್ಚಿನ ವಿಷಯಗಳನ್ನು ಕೇಳಿ ತಿಳಿದುಕೊಂಡರು. ಕೆಲವರು ಹಸ್ತಪ್ರತಿಗಳ ಬಗೆಗಿನ ತಮ್ಮ ಅನುಭವಗಳನ್ನು ಹಂಚಿಕೊಂಡರು. ಹಾಗೂ ಪ್ರದರ್ಶನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಬನವಾಸಿಯಲ್ಲಂತೂ ನಮ್ಮ ಹಸ್ತಪ್ರತಿ ಸಂಗ್ರಹಣೆಗೆ ೨ ಹಸ್ತಪ್ರತಿಗಳು ಸೇರ್ಪಡೆಯಾದವು.

ಹೀಗೆ ವಿಭಿನ್ನ ಅನುಭವಗಳ ಗಣಿಯಾಗಿ ನಮ್ಮ ಈ ಕವಿನಮನ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. 'ಮೊಟ್ಟ ಮೊದಲನೆ ಸ್ಥಳ' ನಾವು ಹಸ್ತಪ್ರತಿಗಳನ್ನು ಪ್ರದರ್ಶಿಸಿದ್ದು ಕನ್ನಡದ ಕಣ್ವ ಆಚಾರ್ಯ ಬಿ.ಎಂ.ಶ್ರೀ.ಯವರ ಹುಟ್ಟೂರಾದ ಬೆಳ್ಳೂರಿನಲ್ಲಿ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದವರಾದ ನಮಗೆ ಇಲ್ಲಿ ಹಸ್ತಪ್ರತಿ ಪ್ರದರ್ಶನ ಏರ್ಪಡಿಸುವಲ್ಲಿ ತವರು ಮನೆಯ ಸಂಭ್ರಮ. ಬೆಳ್ಳೂರಿನ ಮುಖ್ಯ ವೃತ್ತವಾದಂತಹ ಹಾಗೂ ಬಸ್ ಸ್ಟ್ಯಾಂಡ್ ಆದಂತಹ ಬಿ.ಎಂ.ಶ್ರೀ. ವೃತ್ತದಲ್ಲಿ ಅವರ ಪ್ರತಿಮೆಯ ಸುತ್ತಲೂ ಹಸ್ತಪ್ರತಿ ಸಾಮಗ್ರಿಗಳನ್ನು ಇಟ್ಟು ಪ್ರದರ್ಶಿಸಿದೆವು. ಆಗ ಅದನ್ನು ನೋಡಿದ ಜನರಲ್ಲಿ ಮಹಮ್ಮದ್ ಹಿದಾಯತುಲ್ಲಾ ಅವರ ಅಭಿಪ್ರಾಯ ಹೀಗಿದೆ.

> *"ಇಂತಹ ವಸ್ತು ಪ್ರದರ್ಶನ ನಿಜಕ್ಕೂ ಈಗಿನ ಕಾಲಕ್ಕೆ ಒಳ್ಳೆಯದು ಆಗಿದೆ. ಆದ್ದರಿಂದ ಇನ್ನೂ ಹೆಚ್ಚಿನ ಜನರಿಗೆ ಹಿಂದಿನ ಕಾಲದ ವಿಚಾರವನ್ನು ತಿಳಿದುಕೊಳ್ಳುವಲ್ಲಿ ಅವಕಾಶವಾಗುತ್ತದೆ. ಇಂತಹ ವಸ್ತು ಪ್ರದರ್ಶನಗಳಿಂದ ನಾಡಿನ ಕವಿಗಳ ಬರವಣಿಗೆಯ ಕಾಲವು ನಮ್ಮ ಮುಂದೆ ನಡೆದಂತೆ ಕಾಣುತ್ತದೆ".*

ಬೆಳ್ಳೂರಿನ ಹಸ್ತಪ್ರತಿ ಪ್ರದರ್ಶನವನ್ನು ವೀಕ್ಷಿಸಿದ ಅನೇಕ ಜನರು ಸಂತಸ ವ್ಯಕ್ತಪಡಿಸಿದರು.

ಅಂದು ಸಂಜೆ ಲಕ್ಷ್ಮೀಶನ ಹುಟ್ಟೂರಾದ ದೇವನೂರಿನಲ್ಲಿ ನಮ್ಮ ಎರಡನೇ ಪ್ರದರ್ಶನದ ಏರ್ಪಾಡಾಯಿತು. ಇಲ್ಲಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪಾಧ್ಯಾಯರಾಗಿದ್ದ ಡಿ. ಕೃಷ್ಣಮೂರ್ತಿಯವರು, ತಮ್ಮ ಒಂದು ಅನುಭವವನ್ನು ನಮ್ಮೊಂದಿಗೆ ಹಂಚಿಕೊಂಡರು.

ಅವರು ಸಣ್ಣವರಾಗಿದ್ದಾಗ ಅವರ ಊರಿನಲ್ಲಿ ಹಳೆಯ ಮನೆಗಳನ್ನು ಕೆಡವಿ ಹೊಸದಾಗಿ ನಿರ್ಮಾಣ ಮಾಡುವಾಗ ಮನೆಯಲ್ಲಿದ್ದ ಓಲೆಗರಿ ಕಟ್ಟುಗಳನ್ನು ಕಸಕ್ಕೆಸಮ ಎಂದು ನಿರ್ಣಯಿಸಿ ಅವುಗಳನ್ನು ಬೀದಿಗೆ ಎಸೆಯುತ್ತಿದ್ದರಂತೆ. ಅವರು ಹಾಗೂ ಅವರ ಜೊತೆ ಹುಡುಗರು ಅವುಗಳನ್ನು ಆಯ್ದು ತಂದು ಅವುಗಳಿಗೆ ಬೆಂಕಿ ಹಚ್ಚಿ ಚಳಿಕಾಯಿಸಿಕೊಳ್ಳುತ್ತಿದ್ದರೆಂದು ಅವುಗಳು ಒಣಗಿದ್ದುದರಿಂದ ಚಟ-ಪಟ ಎಂದು ಶಬ್ದ ಮಾಡುತ್ತಾ ಉರಿಯುವುದನ್ನು ನೋಡಿ ಸಂತಸಪಡುತ್ತಿದ್ದರೆಂದೂ ಹೇಳಿದರು. ಮತ್ತು ತಮ್ಮ ಅಂದಿನ ಅಜ್ಞಾನಕ್ಕಾಗಿ ಮರುಗಿದರು. ಈಗ ಮೂರುನಾಲ್ಕು ಕಟ್ಟುಗಳು ತಮ್ಮಲ್ಲಿ ಇರುವುದಾಗಿ, ಅವುಗಳನ್ನು ನಂತರ ತಂದು ಕೊಡುವುದಾಗಿಯೂ ಹೇಳಿದರು.

ದೇವನೂರಿನಲ್ಲಿ ದೇವಾಲಯದ ಪ್ರಾಂಗಣದಲ್ಲಿ ನಮ್ಮ ಹಸ್ತಪ್ರತಿ ಪ್ರದರ್ಶನವನ್ನು ಏರ್ಪಡಿಸಿದ್ದೆವು. ಅದನ್ನ ನೋಡಿದ ವೀಕ್ಷಕರೊಬ್ಬರ ಅಭಿಪ್ರಾಯ: "ಇಂಥ ಚಿಕ್ಕ ಊರಿನಲ್ಲಿ ನಮಗೆ ಇಷ್ಟು ಹಳೆಯ ಹಸ್ತಪ್ರತಿಗಳು, ಓಲೆಗರಿಗಳು ನೋಡಲು ಸಿಕ್ಕಿರುವುದು ತುಂಬಾ ಆಶ್ಚರ್ಯ ಹಾಗೂ ಆನಂದವೆನಿಸುತ್ತದೆ". *- ವಸುಂಧರಾ ಬಿ.ಎಸ್.*

೧೧.೧೨.೦೩ರಂದು ಕುಪ್ಪಳ್ಳಿಗೆ ಹೋದೆವು. ಅಲ್ಲಿ ಹಸ್ತಪ್ರತಿ ಪ್ರದರ್ಶನ ಮಾಡದೇ ಇದ್ದರೂ ಅಲ್ಲಿಯ ಅನುಭವ ವೈಶಿಷ್ಟ್ಯಪೂರ್ಣ. ಕುವೆಂಪು ಅವರ ಮನೆ, ಅದರ ಸುತ್ತಲಿನ ವಾತಾವರಣ, ಕವಿಶೈಲದ ಪರಿಸರ ಇವೆಲ್ಲ ನೋಡಿ ತುಂಬಾ ಆನಂದವಾಯಿತು. ಕವಿಗೆ ಸ್ಫೂರ್ತಿ ಕೊಟ್ಟ ಆ ಸ್ಥಳ ಬಹಳ ರಮಣೀಯವಾದುದು. ಆ ಪರಿಸರ ಕನ್ನಡನಾಡಿಗೆ ನೀಡಿದ ಕೊಡುಗೆ ಎಂದರೆ ಕುವೆಂಪು ಅವರ ಸಾಹಿತ್ಯ. ಮಧ್ಯಾಹ್ನ ವೇಳೆಗೆ ಕೆಳದಿ ಇಕ್ಕೇರಿಗೆ ಹೋದೆವು. ಕೆಳದಿಯಲ್ಲಿ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿರುವ ಪುರಾತನ ವಸ್ತುಗಳೊಡನೆ ಹಸ್ತಪ್ರತಿ ಸಂಗ್ರಹವನ್ನು ನೋಡಿ ಆನಂದ ವಾಯಿತು. ದೂರದ ಹಳ್ಳಿಯಲ್ಲಿ ಹಸ್ತಪ್ರತಿಗಳನ್ನು ನಾಜೂಕಾಗಿ ಕಾಪಾಡಿಕೊಂಡು ಬಂದಿರುವ ನಮ್ಮ ಸೋದರರಿಗೆ ವಂದಿಸಿ ಅಲ್ಲಿಂದ ಹೊರಟೆವು.

ನಂತರ ಬನವಾಸಿಯಲ್ಲಿ ಅಂದೇ ಸಂಜೆ ನಮ್ಮ ೩ನೆಯ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಿದ್ದೆವು. ಅಲ್ಲಿಯ ಮಧುಕೇಶ್ವರ ದೇವಾಲಯದ ಅಂಗಳದಲ್ಲಿ ಅಲ್ಲಿಯ ಪ್ರದರ್ಶನವನ್ನು ನೋಡಿ ವ್ಯಕ್ತವಾದ ಅಭಿಪ್ರಾಯಗಳು ಹೀಗಿವೆ:

"ಇನ್ನೂ ವರೆಗೆ ನೋಡಿರದ ಪ್ರಾಚೀನ ಕೃತಿಗಳನ್ನು ನೋಡಿ ಪರಮಾನಂದವಾಗಿದೆ. ಬಹುಶಃ ನಾನು ನೋಡುತ್ತೇನೆ ಎನ್ನುವ ಕಲ್ಪನೆ ಇರಲಿಲ್ಲ,"- ರಮಾನಂದ

"ಹಸ್ತಪ್ರತಿ ಹಾಗೂ ತಾಡವಾಲೆ ಗ್ರಂಥಗಳನ್ನು ಪ್ರದರ್ಶಿಸುತ್ತಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದ ಈ ಕಾರ್ಯ ನಿಜಕ್ಕೂ ಶ್ಲಾಘನೀಯ" (ನರಸಿಂಹ ದೀಕ್ಷಿತ್ ಅವರು ತಮ್ಮಲ್ಲಿದ್ದ ೨ ತಾಳೆಗರಿಗಳ ಕಟ್ಟನ್ನು ತಂದು ನಮ್ಮ ಸಂಸ್ಥೆಗೆ ದಾನವಾಗಿ ನೀಡಿದರು.)

ಹಾವೇರಿಯಲ್ಲಿ ರಾತ್ರಿ ಕಳೆದ ನಾವು, ಬೆಳಗ್ಗೆ ೧೨-೧೨-೦೩ರಂದು ಕಾಗಿನೆಲೆಗೆ ಹೋದೆವು. ಅಲ್ಲಿಯ ಜೀರ್ಣಗೊಂಡ ದೇವಾಲಯಗಳ ಕುರುಹುಗಳನ್ನು ನೋಡುತ್ತಾ ಹೋಗುತ್ತಿರುವಾಗ ಅಲ್ಲಿಯ ಕೆಲವು ಕನಕ ಗುರುಪೀಠದ ವಿದ್ಯಾರ್ಥಿಗಳ ಪರಿಚಯವಾಯಿತು. ಅವರ ಮೂಲಕವಾಗಿ ಸ್ವಾಮಿಗಳು ಅಲ್ಲೇ ಇರುವುದಾಗಿ ತಿಳಿಯಿತು. ಮಠಕ್ಕೆ ಹೋಗಿ ವಿದ್ಯಾರ್ಥಿಗಳ ಮುಂದೆ ಪ್ರದರ್ಶನ ಏರ್ಪಡಿಸಲು ಅನುಮತಿ ಕೇಳಿದಾಗ ಸ್ವಾಮಿಗಳು ಸಂತಸದಿಂದ ಒಪ್ಪಿಕೊಂಡು ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಟ್ಟರು. ಅಲ್ಲಿಯ ವಿದ್ಯಾರ್ಥಿಗಳಿಗೆಲ್ಲ ವಿದ್ಯಾರ್ಥಿನಿಲಯದ ಒಳಗೇ ಪ್ರದರ್ಶನ ನಡೆಸಿದೆವು. ಎಲ್ಲ ವಿದ್ಯಾರ್ಥಿಗಳನ್ನೂ ಸಾಲಾಗಿ ಕರೆತಂದು ತೋರಿಸುವಲ್ಲಿ ಅಲ್ಲಿನ ವ್ಯವಸ್ಥಾಪಕರು ಸಹಕರಿಸಿದರು. ವಿದ್ಯಾರ್ಥಿಗಳು ಕುತೂಹಲದ ಕಣ್ಣುಗಳಿಂದ ನೋಡಿ ಆನಂದಿಸಿದರು.

ಮುಂದೆ ಶಿಶುನಾಳಕ್ಕೆ ಹೋದೆವು. ಅಲ್ಲಿ ಷರೀಫರ ತಂದೆತಾಯಿಗಳ ಸಮಾಧಿಯ ಹತ್ತಿರ ಇದ್ದ ಜಾಗದಲ್ಲಿ ಹಸ್ತಪ್ರತಿ ಪ್ರದರ್ಶನ ಮಾಡಿದೆವು. ಅಲ್ಲಿಗೆ ಆಗಮಿಸಿದ ಊರಿನ ಗಣ್ಯರು ಹಾಗೂ ಅಲ್ಲಿಯ ಶಾಲೆಯ ಅಧ್ಯಾಪಕರು ನೋಡಿ ಪುಳಕಿತರಾಗಿ ತಮ್ಮ ಶಾಲೆಯಲ್ಲಿಯೂ ಹಸ್ತಪ್ರತಿ ಪ್ರದರ್ಶನವನ್ನು ಏರ್ಪಡಿಸಲು ನಮ್ಮನ್ನು ಕೇಳಿಕೊಂಡರು. ನಾವು ಅದಕ್ಕೆ ಒಪ್ಪಿಕೊಂಡಿದ್ದೇ ತಡ ತಮ್ಮ ಟಿವಿಎಸ್ ಹಿಂದೆಯೇ ನನ್ನನ್ನೂ ಕೂರಿಸಿಕೊಂಡು ಹೊರಟೇಬಿಟ್ಟರು. ಶಾಲೆಯವರು ಒಂದು ಸಣ್ಣ ಸಮಾರಂಭವನ್ನೇ ಮಾಡಿದರು. ನಮ್ಮ ತಂಡದಲ್ಲಿನ ಸಾಹಿತಿ

ಗಳೆಲ್ಲರೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ನಮ್ಮ ಗೌ॥ ಕಾರ್ಯದರ್ಶಿಗಳಾದ ಗೀತಾಚಾರ್ಯರು ಹಸ್ತಪ್ರತಿ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಅಷ್ಟೊಂದು ಬೇಗನೆ ಏರ್ಪಾಡಾದ ಅಂತಹ ಅಚ್ಚುಕಟ್ಟಾದ ಸಮಾರಂಭವನ್ನು ನಾನು ಎಲ್ಲಿಯೂ ನೋಡಿಲ್ಲ. ವಿದ್ಯಾರ್ಥಿ - ಅಧ್ಯಾಪಕರೆಲ್ಲ ಸಾಲಾಗಿ ಬಂದು ಕಣ್ತುಂಬ ನೋಡಿ ಧನ್ಯರಾದರು. ಶ್ರೀ ಶರೀಫ ಶಿವ ಯೋಗಿಶ್ವರ ಪ್ರೌಢಶಾಲೆಯ ಅಧ್ಯಾಪಕ ವೃಂದದ ಅಭಿಪ್ರಾಯ ಈ ರೀತಿ ಇದೆ.

"ಪುರಾತನ ಹಸ್ತಪ್ರತಿ ಪ್ರದರ್ಶಿಸಿ ಮಹದುಪಕಾರ ಮಾಡಿದ್ದಾರೆ. ನಮ್ಮ ಪುರಾತನ ಸಾಹಿತ್ಯದ ಅರಿವು ಇಂದಿನ ಅಗತ್ಯ."

ಸಂಜೆಯ ಸಮಯದಲ್ಲಿ ಗದಗದಲ್ಲಿಯ ವೀರನಾರಾಯಣನ ದೇವಸ್ಥಾನದ ಮುಂದಿನ ಕಟ್ಟೆಯ ಮೇಲೆ ನಮ್ಮ ಒನೆಯ ಹಸ್ತಪ್ರತಿ ಪ್ರದರ್ಶನ ನಡೆಯಿತು. ದೇವಸ್ಥಾನಕ್ಕೆ ಬರುತ್ತಿದ್ದವರಲ್ಲಿ ಅನೇಕರು ಆಸಕ್ತಿಯಿಂದ ಪ್ರದರ್ಶನ ವೀಕ್ಷಿಸಿದರು. ಅವರಲ್ಲಿ ಒಬ್ಬರಾದ ಗೋಪಾಲಕೃಷ್ಣ ಆ. ಗುಡಿ ಅವರ ಅಭಿಪ್ರಾಯ ಇಂತಿದೆ.

"ಪ್ರಾಚೀನ ವಸ್ತುಗಳು ಬಹಳ ಮುಖ್ಯವಾಗಿ ಬೇಕಾದಂತಹ ವಸ್ತುಗಳು. ಅವುಗಳು ಈ ಬೆಳೆಯುತ್ತಿರುವ ಜನತೆಗೆ ಗೊತ್ತಾಗಬೇಕಾಗಿದೆ. ಈಗಿನ ಜನತೆ ಇದರ ಬಗ್ಗೆ ಲಕ್ಷ್ಯ ಹರಿಸುತ್ತಿಲ್ಲ. ಸಂರಕ್ಷಣೆ ದೂರದ ಮಾತು. ಮುಂಬರುವ ಜನತೆಗೆ ಇವುಗಳನ್ನು ತೋರಿಸಲಿಕ್ಕಾದರೂ ಸಂರಕ್ಷಣೆ ಅಗತ್ಯ. ಇದರಿಂದ ಪ್ರಾಚೀನರ ಸಂಸ್ಕೃತಿ ಹೇಗಿತ್ತೆಂದು ಗೊತ್ತಾಗುತ್ತದೆ."

ಕೊನೆಯದಾಗಿ ಐಹೊಳೆಯಲ್ಲಿ ನಮ್ಮ ಹಸ್ತಪ್ರತಿ ಪ್ರದರ್ಶನ ನಡೆಯಿತು. ಇದಂತೂ ಅದ್ಭುತವಾದ ಅನುಭವ. ಅರಳಿಕಟ್ಟೆಯ ಜಗಲಿಯ ಮೇಲೆ ನಮ್ಮ ಪ್ರದರ್ಶನ ಅರಳಿತು. ಅಕ್ಕಪಕ್ಕದಲ್ಲಿ ಬೇರೆ ಬೇರೆ ಅಂಗಡಿಗಳು. ಜನ ನೋಡಲು ಗುಂಪುಗೂಡಿದರು. ಒಬ್ಬೊಬ್ಬರೂ ವಿವರಗಳನ್ನು ಕೇಳುತ್ತಿದ್ದರು. ಒಬ್ಬರಂತೂ ತಾವು ಯಾವಾಗಲೋ ಬರೆದಿಟ್ಟುಕೊಂಡಿದ್ದ ಒಂದು ಎಕ್ಸರ್ಸೈಜ್ ಹಾಳೆಯ ತುಂಡನ್ನು ಕೊಟ್ಟು ಇದರಲ್ಲೇನಿದೆ ಓದಿ ಹೇಳಿ ಎಂದು ದುಂಬಾಲು ಬಿದ್ದ. ಯಾವುದೋ ಶಾಸನದ ಅಕ್ಷರಗಳು ನಾನು ಮೆಲ್ಲಗೆ ನಮ್ಮ ಕಾರ್ಯದರ್ಶಿಗಳತ್ತ ಸಾಗಹಾಕಿದೆ. ಅಲ್ಲಿನ ಜನರಲ್ಲಿ ಒಬ್ಬರ ಅಭಿಪ್ರಾಯ.

"ಇಂದಿನ ಕಂಪ್ಯೂಟರೀಕರಣ ಮತ್ತು ಜಾಗತೀಕರಣದ ಸಮಯದಲ್ಲಿ ಕವಿನಮನ ತಂಡವು ಕಲೆ, ಸಾಹಿತ್ಯ ಹಾಗೂ ಪ್ರಾಚೀನ ಕಾಲದ ಬರಹಗಳನ್ನು ಪ್ರದರ್ಶಿಸುವುದು ಹೆಮ್ಮೆಯ ಸಂಗತಿ".

"ಐಹೊಳೆಗೆ ಬಂದು ಪ್ರಾಚೀನ ಕಾಲದ ಹಸ್ತಪ್ರತಿಗಳ ಬಗ್ಗೆ ತಿಳುವಳಿಕೆ ನೀಡಿ, ಜನರಿಗೆ ಪ್ರಾಚೀನ ಕಾಲದ ಬರಹ ತೋರಿಸಿ ಅದರ ಬಗ್ಗೆ ಕಾಳಜಿ ಹಾಗೂ ಅಪಾರ ಗೌರವ ಬರುವಂತೆ ಪ್ರದರ್ಶಿಸಿದ್ದೀರಿ, ಧನ್ಯವಾದಗಳು." ಎಂದು ಐಹೊಳೆಯ ಪೊಲೀಸ್ ಗಾರ್ಡ್ ಸಿಬ್ಬಂದಿಯಲ್ಲಿ ಒಬ್ಬರಾದ ಪತ್ತಾರ್ ಅವರು ಹೇಳಿದ್ದಾರೆ.

ಕವಿನಮನ ಭೇಟಿ ನೀಡಿದ ಸ್ಥಳಗಳಲ್ಲೆಲ್ಲಾ ನಮಗೆ ಪ್ರದರ್ಶನ ಏರ್ಪಡಿಸಲಾಗದಿದ್ದರೂ ಅನೇಕ ಕಡೆ ಪ್ರದರ್ಶನ ನೀಡಿ ಜನರಲ್ಲಿ ಜಾಗೃತಿಯನ್ನುಂಟುಮಾಡಲು ಮಾಡಿದ ನಮ್ಮ ಪ್ರಯತ್ನ ಸಫಲವಾಗಿದೆ ಎಂದುಕೊಂಡಿದ್ದೇನೆ. ಇದರ ಫಲ ನಮ್ಮ ಗೌ॥ ಕಾರ್ಯದರ್ಶಿಗಳಿಗೆ ಸಲ್ಲಬೇಕು. ವರದಿಯನ್ನು ದೇವನೂರಿನ ಡಿ. ಕೃಷ್ಣಮೂರ್ತಿ ಅವರ ಅಭಿಪ್ರಾಯದೊಂದಿಗೆ ಮುಗಿಸುತ್ತೇನೆ.

"ಹಸ್ತಪ್ರತಿಗಳು ಅಲಭ್ಯವಾಗಿರುವ ಈ ಕಾಲದಲ್ಲಿ ಅಳಿದುಳಿದಿರುವ ಹಸ್ತಪ್ರತಿಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಕಾಳಜಿ ಹೊಂದಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಈ ಯೋಜನೆಗೆ ಪ್ರೋತ್ಸಾಹಿಸುವುದು ಅಗತ್ಯ. ದೇವರಗೂಡುಗಳಲ್ಲಿ ಪೂಜೆ ಮಾಡಿಸಿಕೊಳ್ಳುತ್ತಿರುವ ಹಸ್ತಪ್ರತಿಗಳು ಹೊರಬಂದು ಅಧ್ಯಯನಕ್ಕೆ ಸಂಶೋಧನೆಗೆ ಒಳಗಾಗುವಂತೆ ಸಹಕರಿಸುವುದು ನಮ್ಮೆಲ್ಲರ ಆದ್ಯಕರ್ತವ್ಯ."

❑

ಶತಮಾನೋತ್ಸವ ಆಚರಣೆಗೆ ಭಾಜನರಾಗಿರುವ ಸಾಹಿತಿಗಳು

(೧೯೦೪-೨೦೦೪)

● *ಎಸ್. ವಿ. ಶ್ರೀನಿವಾಸರಾವ್*

ಪ್ರೊ. ಎನ್. ಅನಂತರಂಗಾಚಾರ್

ಜೀವಿತಕಾಲ : ೪-೬-೧೯೦೪ - ೬-೧೨-೧೯೮೬

ಜನ್ಮಸ್ಥಳ : ತಿರಮಕೂಡಲು ನರಸೀಪುರ

ಹೊಸಗನ್ನಡ ಸಾಹಿತ್ಯದ ಆಚಾರ್ಯತ್ರಯರಾದ ಪ್ರೊ. ಬಿ.ಎಂ. ಶ್ರೀಕಂಠಯ್ಯ, ಪ್ರೊ. ಟಿ.ಎಸ್. ವೆಂಕಣ್ಣಯ್ಯ, ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ಈ ಪ್ರಾತಃಸ್ಮರಣೀಯರ ಆಪ್ತ ಶಿಷ್ಯರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದಿಂದ ಮೊದಲ ವರ್ಷದ ಎಂ.ಎ. ಪಡೆದ ಕುವೆಂಪು, ಡಿ.ಎಲ್. ನರಸಿಂಹಾಚಾರ್, ಕೆ.ವೆಂಕಟರಾಮಪ್ಪ, ಡಿ.ಕೆ. ಭೀಮಸೇನರಾವ್ ಈ ಗಣ್ಯರು ಇವರ ಸಹಪಾಠಿಗಳಾಗಿದ್ದರು. ವರ್ಣರಂಜಿತ ವ್ಯಕ್ತಿತ್ವದ ಶ್ರೀಯುತರದು ಬಹುಮುಖ ವ್ಯಕ್ತಿತ್ವ. ಸಂಸ್ಕೃತ, ತಮಿಳು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ವಿದ್ವಾಂಸರಾಗಿದ್ದಾಗ ಸಂಶೋಧನೆಯಲ್ಲಿ ಅಪಾರ ಆಸಕ್ತಿಯಿದ್ದ ಇವರು ಹಲವಾರು ಪ್ರಾಚೀನ ಕೃತಿಗಳನ್ನು ಸಂಪಾದಿಸಿದ್ದಾರೆ. 'ಸಾಹಿತ್ಯ ಭಾರತಿ' ಬೃಹತ್ ಗ್ರಂಥ ಇವರಿಗೆ ಡಿ.ಲಿಟ್ ದೊರಕಿಸಿಕೊಟ್ಟಿದೆ. ಇದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಹ ಲಭಿಸಿದೆ (೧೯೭೪). ಇವರು ರಚಿಸಿರುವ ಮುಖ್ಯ ಕೃತಿಗಳು; ಸೂಕ್ತಿ-ಸುಧಾರ್ಣವ; ಕಾವ್ಯಸಾರ; ಭಾರತೀಯ ತೀರ್ಥ ಕಲಾಕ್ಷೇತ್ರ ಸಂದರ್ಶಿನಿ; ರಾ. ನರಸಿಂಹಾಚಾರ್ಯ; ಪಂಚಭಾರತ ಗದ್ಯಾನುವಾದ; ಚಂಪೂ ಕಾವ್ಯಗಳ ಅಕಾರಾದ್ಯನುಕ್ರಮಣೆ ಮುಂತಾದವು.

ಸಿದ್ಧವನಹಳ್ಳಿ ಕೃಷ್ಣಶರ್ಮ

ಜೀವಿತ ಕಾಲ : ೪-೭-೧೯೦೪ - ೧೪-೧೦-೧೯೭೩

ಜನ್ಮಸ್ಥಳ : ಸಿದ್ಧವನಹಳ್ಳಿಯ ತಿರುಮಾಳಿಗೆ

ಖ್ಯಾತ ಪತ್ರಕರ್ತರು, ಗಾಂಧಿ ವಿಚಾರವಾದಿಗಳು ಆಗಿದ್ದ ಸಿದ್ಧವನ ಕೃಷ್ಣಶರ್ಮ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಪ್ರಸಿದ್ಧ ಲೇಖಕರಾಗಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿ ಕ್ರಾಂತಿಕಾರಿ ಮನೋಭಾವವನ್ನು ಪ್ರತಿಬಿಂಬಿಸುವ ಲೇಖನಗಳನ್ನು ಆಗಿನ 'ಸಾಧ್ವಿ', ಡೆಕ್ಕನ್ ಕ್ರಾನಿಕಲ್, ಜಯ ಕರ್ನಾಟಕ, ಸರ್ವೋದಯ, ಭೂದಾನ ಮುಂತಾದ ಪತ್ರಿಕೆಗಳಲ್ಲಿ ಬರೆಯತೊಡಗಿದ್ದರು. ಪತ್ರಿಕೋದ್ಯಮದಲ್ಲೇ ಹೆಚ್ಚು ಆಸಕ್ತಿ ಬೆಳೆಸಿಕೊಂಡಿದ್ದ ಇವರು ಮುಂದೆ ತಿ.ತಾ. ಶರ್ಮರೊಡನೆ ನಿಕಟ ಸಂಪರ್ಕ ಇರಿಸಿಕೊಂಡಿದ್ದು, 'ವಿಶ್ವ ಕರ್ನಾಟಕ' ಪತ್ರಿಕೆಗಾಗಿ ಶ್ರಮಿಸಿದರು. ವಿಶ್ವಕರ್ನಾಟಕ ನಿಂತ ಮೇಲೆ ಇವರು 'ವಾಹಿನಿ', ಪ್ರಜಾಮತ, ಭೂದಾನ, ಸರ್ವೋದಯ ಪತ್ರಿಕೆ ನಡೆಸಿದರು. 'ವಾಣಿ' ಪತ್ರಿಕೆಯ 'ಕನ್ನಡ ಕಣ' ಅಂಕಣದಲ್ಲಿ ಖಾರವಾದ ವಿಚಾರಗಳನ್ನು ಮಂಡಿಸಿದರು.

'ವ್ಯಕ್ತಿಚಿತ್ರಣ'ವನ್ನು ಕನ್ನಡದಲ್ಲಿ ಆರಂಭಿಸಿದ ಹೆಗ್ಗಳಿಕೆ ಇವರದು. ಇವರು ಕಟ್ಟಿ ಬೆಳೆಸಿದ ಮುಖ್ಯ ಸಂಸ್ಥೆಗಳು; ಹೈದರಾಬಾದಿನ ನಿಜಾಂ ಕರ್ನಾಟಕ ಪರಿಷತ್ತು; ಆಂಧ್ರ ಮಹಾ ಸಭಾ; ಮಹಾರಾಷ್ಟ್ರ ಪರಿಷತ್ತು; ನೃಪತುಂಗ ಕನ್ನಡ ಶಾಲೆ; ಗಾಂಧಿ ಸಾಹಿತ್ಯ ಸಂಘ; ಭಾರತ ಸೇವಾದಳ; ಶ್ರೀರಾಮ ಕೋ-ಆಪ್‌ರೇಟಿವ್ ಬ್ಯಾಂಕ್; ಮಲ್ಲೇಶ್ವರಂ ಕೋ-ಆಪರೇಟಿವ್ ಸೊಸೈಟಿ, ವರದಾಚಾರ್ ಸ್ಮಾರಕ ಕಲಾ ಸಂಘ ಮುಂತಾದುವು.

ಇವರು ಗಾಂಧಿ ಸಾಹಿತ್ಯ, ವಿನೋಬಾ ಸಾಹಿತ್ಯ, ಸರ್ವೋದಯ ಸಾಹಿತ್ಯ ಈ ವಿಭಾಗಗಳಡಿ ಉಪಯುಕ್ತ ಕೃತಿಗಳನ್ನು ರಚಿಸಿದ್ದಾರೆ. ಇವರು ಸಂಪಾದಿಸಿರುವ ಮುಖ್ಯ ಕೃತಿಗಳು : ಪಂಚವಟಿ; ಭೂದಾನ ಯಜ್ಞ - ಸಮಗ್ರ ದರ್ಶನ; ಸಮಾಜ ಶಿಕ್ಷಣ; ವಿನೋಬಾ ವಿಚಾರ ಲಹರಿ, ಸರ್ವೋದಯ (೮ ಸಂಪುಟ); ಗಾಂಧಿ ಮತ್ತು ಕರ್ನಾಟಕ ಮುಂತಾದವು. ಇವರು ಅನುವಾದ ವಿಭಾಗದಕ್ಕೂ ಸೇವೆ ಸಲ್ಲಿಸಿದ್ದಾರೆ - ಮುಖ್ಯ ಕೃತಿಗಳು: ರಾಜೇಂದ್ರ ಪ್ರಸಾದರ ಆತ್ಮಕಥೆ; ನಮ್ಮ ಹಿಂದೂಸ್ಥಾನ; ತೆಲುಗಿನ ಕಥೆಗಳು; ಅಸಾಮಿ ಕಥೆಗಳು; ಕೃಷ್ಣಾವತಾರ (೫ ಭಾಗಗಳನ್ನು); ಪ್ರಾಚೀನ ಈಜಿಪ್ಟ್ ಸಾಹಿತ್ಯ; ಜಗತ್ ಕಥಾವಲ್ಲರಿ; ಅಮೆರಿಕಾದ ರಾಜಕೀಯ ಪದ್ಧತಿ ಮುಂತಾದವು.

ಸಾಹಿತ್ಯ ಗೊಮ್ಮಟ; ಹಾಸ್ಯಯೋಗಿ 'ಗೊರೂರು'

ಜೀವಿತ ಕಾಲ : ೪-೭-೧೯೦೪ - ೨೮-೯-೧೯೯೧

ಜನ್ಮಸ್ಥಳ : ಹಾಸನ ಜಿಲ್ಲೆಯ ಹೇಮಾವತಿ ನದಿತೀರದ ಗೊರೂರು

'ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ, ವಿಸ್ತಾರಗಳನ್ನು ವೈವಿಧ್ಯ, ವೈಶಿಷ್ಟ್ಯಗಳನ್ನು ತಂದುಕೊಟ್ಟ ಕೆಲವೇ ಗಣ್ಯ ಲೇಖಕರಲ್ಲಿ ಗೊರೂರರು ಪ್ರಮುಖರು. ವಿದ್ಯಾರ್ಥಿ ದೆಸೆಯಲ್ಲಿ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಪಾನ ನಿರೋಧ, ಪರದೇಶಿ ವಸ್ತ್ರ ಬಹಿಷ್ಕಾರ, ಸರಕಾರದೊಡನೆ ಅಸಹಕಾರ, ಶಾಲೆಗಳ ಬಹಿಷ್ಕಾರ ಮುಂತಾದ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ್ದುದು ಇವರ ಕೃತಿಗಳಲ್ಲಿ ಘಟನೆಗಳಾಗಿ, ವ್ಯಕ್ತಿಚಿತ್ರ ರೂಪದಲ್ಲಿ ಪ್ರತಿಮಿಸಿವೆ. ಗೊರೂರರು ಅಹಮದಾಬಾದಿನಲ್ಲಿದ್ದು ಗಾಂಧೀಜಿಯ ನಿಕಟ ಸಂಪರ್ಕ ಹೊಂದಿ ಪ್ರಭಾವಿತರಾದರು. ಕೆಂಗೇರಿಯ ಗುರುಕುಲಾಶ್ರಮ ಸಂಸ್ಥೆ ಸೇರಿ ಗ್ರಾಮ ಪುನರುಜ್ಜೀವನ ಕಾರ್ಯಕ್ರಮದಲ್ಲಿ ತೊಡಗಿಕೊಂಡರು. 'ಹಳ್ಳಿಯಚಿತ್ರಗಳು' ಅಲ್ಲೇ ರೂಪುಗೊಂಡದ್ದು. ಕೆಂಗೇರಿಯಿಂದ ಬೆಂಗಳೂರಿಗೆ ಬಂದ ಇವರು ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಜವಾಬ್ದಾರಿಯನ್ನು ವಹಿಸಿಕೊಂಡಿರು. ೧೯೪೧ರಲ್ಲಿ ವಾರ್ಧಾದಲ್ಲಿ ನಡೆದ ಎ.ಐ.ಸಿ.ಸಿ ಸಭೆಯಲ್ಲಿ ಭಾಗವಹಿಸಿ ರಾಷ್ಟ್ರೀಯ ನಾಯಕರ ಪರಿಚಯ ಪಡೆದರು. ಹಲವು ವರ್ಷ ಸೆರೆಮನೆವಾಸ ಸಹಾ ಅನುಭವಿಸಿದರು. 'ರಾಷ್ಟ್ರೀಯ ಸಾಹಿತ್ಯ ಸಮಿತಿ' ಸ್ಥಾಪಿಸಿ ಹಲವು ಪುಸ್ತಕಗಳನ್ನು ಪ್ರಕಟಿಸಿದರು. ಇವರ ಹಲವಾರು ಕೃತಿಗಳಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಮೈಸೂರು ಸರ್ಕಾರದ ಪುರಸ್ಕಾರ ಲಭಿಸಿವೆ. ೧೯೬೯ರಲ್ಲಿ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೮೨ರಲ್ಲಿ ಶಿರಸಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ ಗಾದಿ ಅಲಂಕರಿಸಿದ ಹಿರಿಮೆ ಇವರದು. ಇವರು ವಿಧಾನಪರಿಷತ್ತಿನ ಸದಸ್ಯರಾಗಿ, ಮೈಸೂರು ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯರಾಗಿ ಶೈಕ್ಷಣಿಕ ಕ್ಷೇತ್ರಕ್ಕೂ ಅಪಾರ ಸೇವೆ ಮಾಡಿರುತ್ತಾರೆ. ಇವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ವಿಶಿಷ್ಟ ಕೊಡುಗೆ 'ಪ್ರಬಂಧ ಸಾಹಿತ್ಯ' ಕನ್ನಡ ಸಾಹಿತ್ಯಕ್ಕೆ ಆಕರ್ಷಕವಾದ ಹಾಸ್ಯ ಮುಖವನ್ನು ಜೋಡಿಸಿದ್ದು ಗೊರೂರರ ಒಂದು ಅದ್ಭುತ ಸಾಧನೆ

(ಹಾ.ಮಾ.ನಾ.)

ಇವರ ಪ್ರಮುಖ ಕೃತಿಗಳು : ಮೆರವಣಿಗೆ, ಹೇಮಾವತಿ, ಮಲೆನಾಡಿನವರು (ಕಾದಂಬರಿಗಳು) ಗರುಡಗಂಬದ ದಾಸಯ್ಯ, ಹಳ್ಳಿಯ ಚಿತ್ರಗಳು, ನಮ್ಮೂರಿನ ರಸಿಕರು, ಬೈಲಹಳ್ಳಿ ಸರ್ವೆ (ಪ್ರಬಂಧಗಳು) ಅನುವಾದ ವಿಭಾಗಕ್ಕೂ ಅಮೂಲ್ಯ ಕೊಡುಗೆಗಳನ್ನು ನೀಡಿರುತ್ತಾರೆ. (ಸಂಖ್ಯೆ ೩೦೦ಕ್ಕೂ ಹೆಚ್ಚು) ಆತ್ಮಕಥೆ ಅಥವಾ ಸತ್ಯಾನ್ವೇಷಣೆ, ಜಗದ್ಗುರುಗಳ ದಿವ್ಯ ಬೋಧೆ, ಭಾಷಣಗಳು ಮತ್ತು ಹೇಳಿಕೆಗಳು - ಮಹಾದೇವ ದೇಸಾಯಿಯವರ ಕೃತಿಗಳು; ಸತ್ಯ ಅಹಿಂಸೆ, ಸಾಹಿತ್ಯದ ಜೀವಾಳ, ಸ್ವಾತಂತ್ರ್ಯವೇ ಧರ್ಮ, ಮಕ್ಕಳ ಪೋಷಣೆ, ಭಕ್ತಿಯೋಗ ಮುಂತಾದವು ಈ ವಿಭಾಗದ ಪ್ರಮುಖ ಕೃತಿಗಳು.

ಎಚ್.ಎಲ್.ಎನ್. ಸಿಂಹ

ಜೀವಿತಕಾಲ : ೨೫-೭-೧೯೦೪ - ೧೯೭೨

ಜನ್ಮಸ್ಥಳ : ಮಳವಳ್ಳಿ

ನಾಟಕ ಕ್ಷೇತ್ರದ ಅವಿಸ್ಮರಣೀಯ ವ್ಯಕ್ತಿ. ಇವರದು ಬಹುಮುಖ ಪ್ರತಿಭೆ. ಚಲನಚಿತ್ರ ಸಾಹಿತಿಯಾಗಿ, ನಿರ್ದೇಶಕರಾಗಿ ಅನೇಕ ನಟರನ್ನು ಹಾಗೂ ನಿರ್ದೇಶಕರನ್ನು ಸೃಷ್ಟಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ನಟನಾ ಕ್ಷೇತ್ರದಲ್ಲಿ ಶ್ರೀ ರಾಜಕುಮಾರ್, ನಿರ್ದೇಶನ ಕ್ಷೇತ್ರದಲ್ಲಿ ಶ್ರೀ ಪಂತಲು ಅವರನ್ನು ಈ ಚಲನಕ್ಷೇತ್ರಕ್ಕೆ ಪರಿಚಯಿಸಿದ ಹೆಗ್ಗಳಿಕೆ ಇವರದು. 'ಸಂಸಾರ ನೌಕೆ' ನಾಟಕವನ್ನು ಬರೆದು ಕನ್ನಡ ಸಿನಿಮಾ ರಂಗ ಮತ್ತು ರಂಗಭೂಮಿ ಕ್ಷೇತ್ರದಲ್ಲಿನ ಸಾಮಾಜಿಕ ವಸ್ತುವನ್ನು ಬಳಸಿ ಯಶಸ್ವಿಯಾದರು. ೨೨-೧೧-೦೩ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಡಾ. ರಾಜಕುಮಾರ್ ಅವರಿಂದ ಎಚ್.ಎಲ್.ಎನ್. ಸಿಂಹ ಶತಮಾನೋತ್ಸವ ಉದ್ಘಾಟಿಸಲ್ಪಟ್ಟಿತು. ಇವರು ಇಂಗ್ಲೀಷಿನಲ್ಲೂ ಕೃತಿಗಳನ್ನು ರಚಿಸಿದ್ದಾರೆ. ಇವರ ಪ್ರಸಿದ್ಧ ಇತರ ಕೃತಿಗಳು : ಅಬ್ಬಾ ಆ ಹುಡುಗಿ, ಗುಣಸಾಗರಿ, ಡೆಸ್ಟಿನಿ ರೂಲ್ಸ್, ಹುಮ್ಯಾನಿಟಿ ಮುಂತಾದವು.

ನಾಟಕ ರಂಗದ ಭೀಷ್ಮ 'ಶ್ರೀರಂಗ'

(ರಂಗಾಚಾರ್ಯ ವಾಸುದೇವಾಚಾರ್ಯ ಜಾಗೀರ್‌ದಾರ್)

ಜೀವಿತ ಕಾಲ : ೨೬-೯-೧೯೦೪ - ೧೭-೧೦-೧೯೮೪

ಜನ್ಮಸ್ಥಳ : ಬಿಜಾಪುರ ಜಿಲ್ಲೆಯ 'ಅಗರಬೇಡ'

'ಪದ್ಮಭೂಷಣ' ಪ್ರಶಸ್ತಿ ವಿಜೇತರಾದ ಶ್ರೀರಂಗರು ಕನ್ನಡ ಸಾರಸ್ವತ ಲೋಕದಲ್ಲಿ ಪ್ರಜ್ವಲಿಸಿದ ತಾರೆ. ಬಹುಮುಖ ಪ್ರತಿಭಾವಂತರು. ನಾಟಕರಂಗಕ್ಕೆ ಹೊಸ ಆಯಾಮ ತಂದುಕೊಟ್ಟ ಕೀರ್ತಿಭಾಜನರು. ೧೯೫೫ರಲ್ಲಿ ನಡೆದ ರಾಯಚೂರಿನ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ೧೯೬೮ರಲ್ಲಿ ರಾಷ್ಟ್ರೀಯ ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್ ಕೊಟ್ಟು, ಗೌರವಿಸಿತ್ತು. ಇವರ ಕೃತಿ 'ಕಾಳಿದಾಸ' ೧೯೭೧ರ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಗಳಿಸಿತ್ತು. 'ನಾಟ್ಯಶಾಸ್ತ್ರ'ಕ್ಕೆ ರಾಜ್ಯ ಸಾಹಿತ್ಯ

ಅಕಾಡೆಮಿಯಿಂದ ಬಹುಮಾನ ಸಂದಿದೆ. ನಾಟಕರಂಗಕ್ಕೆ ಇವರ ಕೊಡುಗೆ ಅಪಾರ. ೧೦೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. (೫೦ ಏಕಾಂಕ; ೩೫ ದೊಡ್ಡ ನಾಟಕ; ೧೫ ಪ್ರಹಸನಗಳು) ಭರಮಪ್ಪನ ಭೂತ, ಪ್ರಕೃತಿ ಪುರುಷ; ವಿಶ್ವಾಮಿತ್ರನ ಸೃಷ್ಟಿ; ಉತ್ತರವಿಲ್ಲದ ಪ್ರಶ್ನೆ, ವಿಷ ಚಕ್ರವ್ಯೂಹ ಮುಂತಾದವು ಕಾದಂಬರಿಗಳು. ರಾಜ್ಯ ಸಾಹಿತ್ಯ ಅಕಾಡೆಮಿ ೧೯೭೬ರಲ್ಲಿ ಇವರಿಗೆ ವಿಶೇಷ ಪ್ರಶಸ್ತಿ ನೀಡಿ ಗೌರವಿಸಿತ್ತು. ಕನ್ನಡ ನಾಟ್ಯ ವಿಲಾಸ ಸಂಸ್ಥೆ; 'ಹವ್ಯಾಸ ನಾಟಕ ತಂಡ' ಇವರು ಸ್ಥಾಪಿಸಿದ್ದ ನಾಟಕ ತಂಡಗಳು. ಹಿಂದಿ, ಮರಾಠಿ, ಸಂಸ್ಕೃತ, ಇಂಗ್ಲೀಷ್‌ನಲ್ಲೂ ವಿದ್ವಾಂಸರಾಗಿದ್ದ ಇವರು ಹಲವು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಧಾರವಾಡ ಕಾಲೇಜಿನಲ್ಲಿ ೧೯೩೦-೪೯ರವರೆಗೆ ಉಪನ್ಯಾಸಕರಾಗಿದ್ದ ಇವರು ೧೯೫೪-೫೬ರವರೆಗೆ ದೆಹಲಿಯ ವಾರ್ತಾ ಮತ್ತು ಪ್ರಚಾರ ಸಚಿವಾಲಯದಲ್ಲಿ 'ನಾಟಕ ಮತ್ತು ಸಂಗೀತ' ವಿಭಾಗದ ನಿರ್ದೇಶಕರಾಗಿ, ಅನಂತರ ಎರಡೂವರೆ ವರ್ಷ ಬೆಂಗಳೂರು ಆಕಾಶವಾಣಿ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿ ೧೯೫೯ರಲ್ಲಿ ನಿವೃತ್ತರಾದರು. ರಾಯಚೂರಿನಲ್ಲಿ ನಡೆದ ೩೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಹೆಗ್ಗಳಿಕೆ ಇವರದು. (೨೫-೧೨-೧೯೫೫)

ರಾಷ್ಟ್ರಕವಿ ಡಾ. ಕೆ.ವಿ. ಪುಟ್ಟಪ್ಪ

(ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ)

ಜೀವಿತ ಕಾಲ : ೨೯-೧೨-೧೯೦೪ - ೧೦-೧೧-೧೯೯೪

ಜನ್ಮಸ್ಥಳ : ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ

ಕನ್ನಡ ನಾಡಿನ ಹೆಮ್ಮೆಯ ಈ ಕವಿ ರಾಷ್ಟ್ರಕವಿ, ರಸಋಷಿ, ಮಹಾಕವಿ ಎಂದೆಲ್ಲಾ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಕರ್ನಾಟಕದ ಪ್ರತಿಷ್ಠಿತ ಪ್ರಶಸ್ತಿಗಳಾದ 'ಪಂಪ ಪ್ರಶಸ್ತಿ', 'ಕರ್ನಾಟಕ ರತ್ನ'ಕ್ಕೆ ಭಾಜನರಾಗಿರುವುದಲ್ಲದೆ ಕೇಂದ್ರ ಸರ್ಕಾರದ 'ಪದ್ಮಭೂಷಣ', ಪದ್ಮವಿಭೂಷಣ' ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿ ಸಹ ಗಳಿಸಿದ ಹೆಗ್ಗಳಿಕೆ ಇವರದು. ಬೆಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿವೆ. ಇವರದು ಬಹುಮುಖ ಪ್ರತಿಭೆ. 'ಶ್ರೀ ರಾಮಾಯಣ ದರ್ಶನಂ' ಅಂತಹ ಮಹಾಕಾವ್ಯವನ್ನು ರಚಿಸಿರುವುದಲ್ಲದೆ ಉತ್ಕೃಷ್ಟ ಕಾದಂಬರಿಗಳೆಂದು ಹೆಸರು ಮಾಡಿರುವ 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು' ರಚಕರು. ಇವರ ಕೃತಿ ಸಂಖ್ಯೆ ಅಪಾರ ಹಾಗೂ ಅಮೂಲ್ಯ.

ಕೊಳಲು, ಪಾಂಚಜನ್ಯ, ನವಿಲು, ಕಲಾಸುಂದರಿ, ಪಕ್ಷಿಕಾಶಿ, ಪ್ರೇಮ ಕಾಶ್ಮೀರ - ಮುಂತಾದವು ಕವನ ಸಂಕಲನಗಳು. ಚಿತ್ರಾಂಗದ (ಖಂಡಕಾವ್ಯ), ರಕ್ತಾಕ್ಷಿ, ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್, ಸ್ಮಶಾನ ಕುರುಕ್ಷೇತ್ರ (ನಾಟಕಗಳು); ಮೋಡಣ್ಣನ ತಮ್ಮ, ನನ್ನ ಗೋಪಾಲ, ನನ್ನ ಮನೆ, ಮರಿ ವಿಜ್ಞಾನಿ (ಮಕ್ಕಳ ಪುಸ್ತಕಗಳು). ಸುಮಾರು ೨೦೦ಕ್ಕೂ ಹೆಚ್ಚು ಸಂಖ್ಯೆಯ ಇವರ ಭಾವಗೀತೆಗಳು ಇಪ್ಪತ್ತೆರಡು ಸಂಕಲನಗಳಲ್ಲಿ ಶ್ರೇಣಿಗೊಂಡಿವೆ.

೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಗೌರವ ಇವರದು.

ಇವರ ಇತರ ಕೃತಿಗಳು : ಶ್ರೀ ರಾಮಕೃಷ್ಣ ಪರಮಹಂಸ, ಬೊಮ್ಮನಹಳ್ಳಿ, ಕಿಂದರಜೋಗಿ, ಸ್ವಾಮಿ ವಿವೇಕಾನಂದ, ರಸೋವೈಸಃ, ವಿಭೂತಿ ಪೂಜೆ, ಕಾವ್ಯ ವಿಹಾರ, ತಪೋನಂದನ, ದ್ರೌಪದಿಯ ಶ್ರೀಮುಡಿ ಮುಂತಾದವು.

❑


ಕನ್ನಡ ತಾಯಿಗಾಗಿ ಭಿಕ್ಷೆ ಬೇಡುವ ದಾಸಯ್ಯ ನಾನು.

* * *

ಕನ್ನಡದ ಕಾವಲು ನಾಯಿ ನಾನು. ಅದಕ್ಕೆ ಕಾವುತಟ್ಟುವುದಾದರೆ ನಾನು ಬಗುಳುವುದುಂಟು; ಕಚ್ಚುವ ನಾಯಲ್ಲ.

- ಬಿ.ಎಂ.ಶ್ರೀ.

With Best Compliments from :



CHEMIXIL CORPORATION

Distributors of Aromatic Chemicals

109, 1st Floor
Shresta Bumi Complex
K.R. Road
Bangalore - 560 004

Ph. : 26671988
26607852
26602200
Fax : 23104123
Cell : 98440-33005

ಶುಭಾಶಯಗಳೊಡನೆ

ಬಿ.ಎನ್.ವಿ. ಸುಬ್ರಹ್ಮಣ್ಯಂ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ

ಸಂಘಟನೆ-ಸ್ವಾವಲಂಬನೆ-ಸಂಸಾರ

ಶ್ರೀ ಅಂಬಿಗರ ಚೌಡಯ್ಯ ಶಿಕ್ಷಣ ಸಂಸ್ಥೆ (ರಿ.)

ಅನಾಥ ಬುದ್ಧಿಮಾಂದ್ಯ ಮಕ್ಕಳ ಮತ್ತು ನಿರ್ಗತಿಕರ ವೃದ್ಧಾಶ್ರಮ

(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ನಂ. 37, ವಸಂತಪುರ ಮುಖ್ಯರಸ್ತೆ, ವಸಂತಪುರ ಗ್ರಾಮ, ಸುಬ್ರಹ್ಮಣ್ಯಪುರ ಪೋಸ್ಟ್
ಉತ್ತರಹಳ್ಳಿ ಹೋಬಳಿ, ಬೆಂಗಳೂರು - 560 061, ದೂರವಾಣಿ : 080-26669930
ಮೊಬೈಲ್ : 98452 86950

ನಾವು ಅನುಭವಿಸುವ ಸುಖ ಸೌಲಭ್ಯಗಳಲ್ಲಿ ಸ್ವಲ್ಪವಾದರೂ ಹೊಂದುವ ಭಾಗ್ಯವಿಲ್ಲದ ಸಹಸ್ರಾರು ನಿರ್ಗತಿಕ ವೃದ್ಧರು ಹಾಗೂ ಪ್ರಪಂಚದ ಸೂಕ್ಷ್ಮ ಅರಿವಿಲ್ಲದ ಬುದ್ಧಿಮಾಂದ್ಯ ಮಕ್ಕಳ ಬಗ್ಗೆ ಎಂದಾದರೂ ಚಿಂತಿಸಿದ್ದೀರಾ? ಅಲ್ಲದೇ ನಮ್ಮೆಲ್ಲರ ಮಕ್ಕಳಲ್ಲಿ ಇರುವ ಹಾಗೆ ಅನಾಥ ಬುದ್ಧಿಮಾಂದ್ಯ ಮಕ್ಕಳಲ್ಲೂ ಕಲೆ, ಕ್ರೀಡೆ, ಪ್ರತಿಭೆ, ಪ್ರೀತಿ, ವಿಶ್ವಾಸ, ಸ್ನೇಹ ಇರುವುದಿಲ್ಲವೇ? ಪ್ರೀತಿ, ಪ್ರೇಮ, ವಿಶ್ವಾಸ ಆತ್ಮೀಯತೆಯ ಬಂಧು ಭಾವನೆಗಳಿಂದ ವಂಚಿತರಾದ ಇಂತಹ ವೃದ್ಧರು ಹಾಗೂ ಬುದ್ಧಿಮಾಂದ್ಯ ಮಕ್ಕಳನ್ನು ಪ್ರೀತಿಸಿ ಕೊಂಚಮಟ್ಟಿಗಾದರೂ ನೆರವಿನ ಧಾರೆ ಹರಿಸಿದರೆ ಈ ಅನಾಥ ವೃದ್ಧರೂ, ಬುದ್ಧಿಮಾಂದ್ಯ ಮಕ್ಕಳು ತಮ್ಮ ಜೀವಿತದಲ್ಲಿ ಸ್ವಲ್ಪಮಟ್ಟಿನ ತೇಜಸ್ಸನ್ನು ಸುಖ, ಶಾಂತಿ ಕಾಣಬಹುದಲ್ಲವೇ? ಇಂತಹ ಅನಾಥರ ಏಳಿಗೆಯನ್ನು ಸಾಕಾರಗೊಳಿಸುವ ಕೆಲಸದಲ್ಲಿ ನೆರವು, ಸಹಾಯ ನೀಡುವುದು ನಮ್ಮ ಧರ್ಮವಲ್ಲವೇ? ಇದರಿಂದ ನಿಮಗೆ ಸಂತೋಷ ಎನಿಸುವುದಿಲ್ಲವೇ?

ಈ ಎಲ್ಲ ಕನಸು ಗುರಿಗಳನ್ನು ಸಾಕಾರಗೊಳಿಸಲು **ಶ್ರೀ ಅಂಬಿಗರ ಚೌಡಯ್ಯ ಶಿಕ್ಷಣ ಸಂಸ್ಥೆಯು** ಕಂಕಣಬದ್ಧವಾಗಿದೆ. 1993ರಲ್ಲಿ 7-8 ಮಕ್ಕಳಿಂದ ಪ್ರಾರಂಭವಾದ ಸಂಸ್ಥೆ ಈಗ 55 ರಿಂದ 85 ಅನಾಥ ಬುದ್ಧಿಮಾಂದ್ಯ ಮಕ್ಕಳು ಹಾಗೂ 40 ರಿಂದ 50 ಜನ ಅನಾಥ ವೃದ್ಧರ ಸೇವಾಕಾರ್ಯ ಕೈಗೊಂಡಿದ್ದು, ಅಂದರೆ ಒಟ್ಟು 135 ಅನಾಥ ಹಾಗೂ ನಿರ್ಗತಿಕ ವೃದ್ಧರು / ಬುದ್ಧಿಮಾಂದ್ಯ ಮಕ್ಕಳನ್ನು ಲಾಲಿಸಿ, ಪೋಷಿಸಿ ಅವರ ಭವಿಷ್ಯದಲ್ಲಿ ಕಿಂಚಿತ್ತಾದರೂ ಸಮಾಧಾನ ತರುವಲ್ಲಿ ACES ಸಂಸ್ಥೆಯು ಶ್ರಮಿಸುತ್ತಿದೆ. ನಮ್ಮ ಸಮಾಜದ ಉಪೇಕ್ಷೆ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾದ ಇಂತಹ ದೀನ ಬುದ್ಧಿಮಾಂದ್ಯ ಮಕ್ಕಳು / ವೃದ್ಧರ ಏಳಿಗೆಗೆ ಶ್ರಮಿಸಬೇಕಾದ್ದು ನಮ್ಮ-ನಿಮ್ಮೆಲ್ಲರ ಕರ್ತವ್ಯವೇ ಆಗಿದೆ. ಸಮಾಜದ ಎಲ್ಲರ ನೆರವು ದೊರೆತಾಗಲೇ ಈ ದುಃಖಿತರ ಮುಖದಲ್ಲಿ ಸಂತಸದ ನಗೆ ಅರಳಿಸಬಹುದು.

ದಯವಿಟ್ಟು ಈ ಸಂಸ್ಥೆಗೆ ನೀವು, ನಿಮ್ಮ ಬಳಗದವರೊಂದಿಗೆ ಬನ್ನಿ, ಇದು ನಿಮ್ಮೆಲ್ಲರ ನೆರವಿನಿಂದಲೇ ಬೆಳೆಯಬೇಕಾದ ಸಂಸ್ಥೆ, ನಿಮ್ಮ ಸೇವೆಗೆ ಸದಾ ಸ್ವಾಗತ.

ಈ ಸಂಸ್ಥೆಗೆ ನೀಡುವ ಡೊನೇಷನ್ಸ್ ಸೆಕ್ಷನ್ 80 ಜಿ ಐಜಿ ಆಕ್ಟ್ 1961 ನಂ. DIT(E) 80G/41/02-06, ಪ್ರಕಾರ ಆದಾಯ ತೆರಿಗೆ ವಿನಾಯಿತಿ ಇದೆ.

*ಗಮನಿಸಿ : **ಚೆಕ್ ಅಥವಾ ಡಿಡಿಗಳನ್ನು** ದಯವಿಟ್ಟು "ಶ್ರೀ ಅಂಬಿಗರ ಚೌಡಯ್ಯ ಶಿಕ್ಷಣ ಸಂಸ್ಥೆ (ರಿ.)" ಹೆಸರಿಗೆ ನೀಡಿ.*

ಅನಾಥ ಬುದ್ಧಿಮಾಂದ್ಯ ಮಕ್ಕಳ ಹಾಗೂ ವೃದ್ಧಾಶ್ರಮದ ಸಲುವಾಗಿ ACES ಒಂದು ಸ್ವಂತ, ಸುಸಜ್ಜಿತ, ಶಾಶ್ವತವಾದ ಕಟ್ಟಡವನ್ನು ಹೊಂದಲು ಬಯಸುತ್ತದೆ. ದಾನಿಗಳು ಈ ಪುಣ್ಯಕಾರ್ಯಕ್ಕೆ ಉದಾರ ಸಹಾಯ ಹಸ್ತ ನೀಡಬೇಕಾಗಿ ಪ್ರಾರ್ಥನೆ.

ACES ಆಶ್ರಮದ ಕಟ್ಟಡ ನಿಧಿಗೆ ಸಹಾಯ ಮಾಡಿದ ದಾನಿಗಳ ಹೆಸರುಗಳನ್ನು ನಾಮಫಲಕದಲ್ಲಿ ನಮೂದಿಸಲಾಗುವುದು.

ಸಮೃದ್ಧ ಕರ್ನಾಟಕ - ಸದೃಢ ಹೆಜ್ಜೆ

- ಕೃಷಿ - ಕೃಷಿ ವಲಯಕ್ಕೆ ಉತ್ತೇಜನ ನೀಡಲು 412 ಕೋಟಿ ರೂ.ಗಳ ಯೋಜನಾ ಅನುದಾನ 840 ಕೋಟಿ ರೂ.ಗಳಿಗೆ ಹೆಚ್ಚಳ.
- ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲಕ್ಕಾಗಿ 100 ಕೋಟಿ ರೂ.ಗಳ ಆವರ್ತನಿಧಿ.

ಗ್ರಾಮೀಣಾಭಿವೃದ್ಧಿ

- ಗ್ರಾಮೀಣ ಜನತೆಯ ಬದುಕಿಗೆ ಹೊಸ ಚೇತನ ನೀಡಲು ರೂ. 690 ಕೋಟಿಗಳ ಜಲಾನಯನ ಯೋಜನೆ. ರೂ. 670 ಕೋಟಿ ವೆಚ್ಚದಲ್ಲಿ ಕೆರೆ ನಿರ್ವಹಣಾ ಯೋಜನೆ ಮತ್ತು ರೂ. 1035-00 ಕೋಟಿ ವೆಚ್ಚದಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆ ಅನುಷ್ಠಾನ.
- ಹಿಂದುಳಿದ ವರ್ಗಗಳ ಸ್ವಯಂ ಉದ್ಯೋಗಕ್ಕಾಗಿ ರೂ. 20 ಕೋಟಿಯೊಂದಿಗೆ ಶ್ರಮಶಕ್ತಿ ಯೋಜನೆ

ಪ್ರಾಥಮಿಕ ಶಿಕ್ಷಣ

- ಅಕ್ಷರ ದಾಸೋಹ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿರುವ 7ನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೂ ವಿಸ್ತರಣೆ. ಹೆಚ್ಚುವರಿಯಾಗಿ 25 ಲಕ್ಷ ಶಾಲಾ ಮಕ್ಕಳು ಫಲಾನುಭವಿಗಳು.
- ಆರೋಗ್ಯ
  ಮುಂದಿನ 5 ವರ್ಷಗಳಲ್ಲಿ ರೂ. 765 ಕೋಟಿ ವೆಚ್ಚದಲ್ಲಿ ಆರೋಗ್ಯ ಮತ್ತು ಪೌಷ್ಠಿಕಾಂಶ ಯೋಜನೆಯ ಅನುಷ್ಠಾನ. ಸಾರ್ವಜನಿಕ ಆರೋಗ್ಯ ರಕ್ಷಣೆಗೆ ಹೆಚ್ಚಿನ ಸೌಲಭ್ಯ.
- ನೀರಾವರಿ
  ಕೃಷ್ಣಾ ಮೇಲ್ದಂಡೆ ಯೋಜನೆಯಡಿ ವಿವಿಧ ಹಂತದಲ್ಲಿರುವ ಎಲ್ಲಾ ನೀರಾವರಿ ಕಾಮಗಾರಿಗಳು ಡಿಸೆಂಬರ್ 2005ರೊಳಗೆ ಪೂರ್ಣ.
- ಸಮಾಜ ಕಲ್ಯಾಣ
  ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಣ್ಣ ರೈತರಿಗೆ ಮತ್ತಷ್ಟು ಪ್ರೋತ್ಸಾಹ ನೀಡಲು ಗಂಗಾ ಕಲ್ಯಾಣ ಕಾರ್ಯಕ್ರಮದಡಿ ರೂ. 13 ಕೋಟಿಗಳ ಹೆಚ್ಚುವರಿ ಅನುದಾನ. ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಯೋಜನಾ ಅನುದಾನ ರೂ. 435 ಕೋಟಿ ಏರಿಕೆ.

ಪ್ರಾದೇಶಿಕ ಅಸಮಾನತೆ ನಿವಾರಣೆಯತ್ತ ದಿಟ್ಟ ಹೆಜ್ಜೆ

- ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ಶ್ರೀ ನಂಜುಂಡಪ್ಪ ಸಮಿತಿ ಮಾಡಿರುವ ಶಿಫಾರಸ್ಸುಗಳು ಹಂತಹಂತವಾಗಿ ಜಾರಿ.
- ಉತ್ತರ ಕರ್ನಾಟಕದ ಅಭಿವೃದ್ಧಿ ರೂ. 7,170 ಕೋಟಿಗಳ ಬೃಹತ್ ಯೋಜನಾ ಅನುದಾನ. ಇದು ರಾಜ್ಯದ ಒಟ್ಟಾರೆ ಯೋಜನಾ ಗಾತ್ರದ ಶೇ. 54 ರಷ್ಟು.
- ಉತ್ತರ ಕರ್ನಾಟಕದ ತೀರ ಹಿಂದುಳಿದ 37 ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ.
- ಉತ್ತರ ಕರ್ನಾಟಕವೂ ಸೇರಿದಂತೆ ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಅವುಗಳಿಗೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ 371ನೇ ವಿಧಿಗೆ ತಿದ್ದುಪಡಿ ತರಲು ಕೇಂದ್ರಕ್ಕೆ ಒತ್ತಾಯ.

ರಾಷ್ಟ್ರದ ಸಂಪದಭಿವೃದ್ಧಿಯಲ್ಲಿ ನಾವೆಲ್ಲರೂ ಭಾಗಿಗಳು

ಕರ್ನಾಟಕ ವಾರ್ತೆ

ಶುಭಾಶಯಗಳೊಂದಿಗೆ,

ಕೈಪ ಮನೆತನದ

ಹಾರೋಹಳ್ಳಿ ಶ್ರೀಮತಿ ವೆಂಕಟಲಕ್ಷ್ಮಮ್ಮನವರು

ಮತ್ತು

ಮಕ್ಕಳು, ಮೊಮ್ಮಕ್ಕಳು



ಕೋರುವ ಶುಭಾಶಯಗಳು



ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ರಜತೋತ್ಸವ ಕಾರ್ಯಕ್ರಮಗಳು

10, 11 - 9 - 2004

ಎಚ್.ಕೆ ವಾಸುದೇವ ಶಾಸ್ತ್ರಿ

ಎಚ್.ಕೆ. ಅನಂತಶಾಸ್ತ್ರಿ

ಎಚ್.ಕೆ. ನಾಗರಾಜ

ಎಚ್.ಕೆ. ಕುಮಾರಸ್ವಾಮಿ

ಶುಭಾಶಯಗಳೊಂದಿಗೆ,

ಕೆ.ಪಿ.ಸಿ.ಎಲ್. : ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ

ವಿದ್ಯುತ್ ಕ್ಷೇತ್ರದ ಬಹಳಷ್ಟು ಉದ್ದಿಮೆಗಳು ಸುಧಾರಣೆಗಳ ಒತ್ತಡಗಳಿಗೆ ಪ್ರತಿಕ್ರಿಯಿಸುತ್ತಿರುವ ಕಾಲದಲ್ಲಿ, ಕೆ.ಪಿ.ಸಿ.ಎಲ್. ನಿಜಕ್ಕೂ ಮುಂಚೂಣಿಯಾಗಿ ಸ್ಪಂದಿಸಿದೆ. ಕಠಿಣ ಸುಧಾರಣೆಗಳಿಂದಾಗಿ ಈ ಕ್ಷೇತ್ರದ ಮೇಲಿರುವ ಒತ್ತಡಗಳ ನಡುವೆಯೂ ಸಹ, ಕೆ.ಪಿ.ಸಿ.ಎಲ್. ಪರಿಸ್ಥಿತಿಗೆ ಸೂಕ್ತ ನೂತನ ಉಪಕ್ರಮಗಳಿಗೆ ತಕ್ಕಂತೆ ತನ್ನ ಕಾರ್ಯಾಚರಣೆಯನ್ನು ಬದಲಿಸಿಕೊಂಡು, ಮುನ್ನುಗ್ಗಿ ಇಂದು ಇತರ ಉಪಯುಕ್ತತೆಗಳಿಗೆ ಮಾದರಿಯಾಗಿ ನಿಂತಿದೆ. ವಾಣಿಜ್ಯಾತ್ಮಕ, ಸುಗಮ ಮತ್ತು ಗುಣಮಟ್ಟ ಇಂಧನ ಸರಬರಾಜಿಗಾಗಿ ಪರಿಣಾಮಕಾರಿ ಒಪ್ಪಂದ, ದೇಶೀಯ ಮತ್ತು ರಫ್ತು ಕಲ್ಲಿದ್ದಲ ವೈಜ್ಞಾನಿಕ ಮಿಶ್ರಣ, ಹೆಚ್ಚು ಬಡ್ಡಿಯ ಸಾಲವನ್ನು ಕಡಿಮೆ ಬಡ್ಡಿ ದರದ ಸಾಲವನ್ನಾಗಿ ಪರಿವರ್ತಿಸುವಲ್ಲಿ ಆರ್ಥಿಕ ತಂತ್ರಜ್ಞಾನ ಬಳಕೆ, ಹೊಸ ಯೋಜನೆಗಳ ಅನುಷ್ಠಾನದ ಮೊದಲೇ ಪರಿಸರ ಸಂರಕ್ಷಣೆ ಕಾರ್ಯ, ಹೊಸ ಯೋಜನೆಗಳಿಗೆ ನೂತನ ರೀತಿಯಲ್ಲಿ ಬಂಡವಾಳ ಹೂಡಿಕೆ ಮತ್ತು ಹಾಲಿ ಇರುವ ಘಟಕಗಳ ಕಾರ್ಯಾಚರಣೆ ಮತ್ತು ಪಾಲನಾಕ್ರಿಯೆಗಳ ನೂತನ ಪರಿಯಿಂದಾಗಿ ಕೆ.ಪಿ.ಸಿ.ಎಲ್. ರಾಷ್ಟ್ರದ ವಿದ್ಯುತ್ ಕ್ಷೇತ್ರದಲ್ಲಿ ಮುಂಚೂಣಿ ಸಂಸ್ಥೆಯಾಗಿ ವಿಜೃಂಭಿಸಿದೆ.

1970ರಲ್ಲಿ 746 ಮೆಗಾವಾಟ್ (ಮೆ.ವಾ.) ಸಾಮರ್ಥ್ಯದೊಂದಿಗೆ ರಚಿತಗೊಂಡ ಕೆ.ಪಿ.ಸಿ.ಎಲ್. ಇಂದು ಒಟ್ಟಾರೆ 4365 ಮೆ.ವಾ. ಹೊಂದಿದ್ದು, ನಾಗಝರಿ ಘಟಕಗಳು ನವೀಕರಣ ಸೇರಿದಂತೆ ಆಲಮಟ್ಟಿ, ಬಳ್ಳಾರಿ ಶಾಖೋತ್ಪನ್ನ, ಬಿಡದಿ, ವಾರಾಹಿ ಹಂತ-2 ಮತ್ತು ರಾಯಚೂರು ಶಾಖೋತ್ಪನ್ನ (ಘಟಕ-8) ಯೋಜನೆಗಳಿಂದ ಮುಂದಿನ 5 ವರ್ಷಗಳಲ್ಲಿ ಒಟ್ಟು 2660 ಮೆ.ವಾ. ಸಾಮರ್ಥ್ಯವನ್ನು ವಿದ್ಯುತ್ ಜಾಲಕ್ಕೆ ಸೇರಿಸಿ ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ.

With Best Compliments from



Veekay Departmental Stores

No. 5, Eswaranagar, Dayananda Sagar College Main Road
Banashankari II Stage, Bangalore - 560 070

Phone : 26713373

With Best Compliments from



Best Choice Indian Boots

No. 5, Eswaranagar, Dayananda Sagar College Main Road
Banashankari II Stage, Bangalore - 560 070

With Best Compliments from



Sri Ravi Subramanyam

ಶುಭಾಶಯಗಳೊಂದಿಗೆ

ಸ್ಥಾಪನೆ : 2000 ✆ : 26525090

ಶ್ರೀನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

(ರಿ. ನಂ. ಜೆಆರ್‌ಬಿ/ಆರ್‌ಜಿಎನ್/34/5/28674/2000-2001 ದಿನಾಂಕ : 28-6-2000)

ನಂ. 897, (1ನೇ ಮಹಡಿ), 12ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು - 560 019

ಸಂಘದ ಆರ್ಥಿಕ ಪ್ರಗತಿ

ಸದಸ್ಯರ ಸಂಖ್ಯೆ :	4445
	(ರೂ. ಲಕ್ಷಗಳಲ್ಲಿ)
(1) ಷೇರು ಬಂಡವಾಳ	72.87
(2) ಠೇವಣಿಗಳು	453.97
(3) ನಿಧಿಗಳು	10.42
(4) ದುಡಿಯುವ ಬಂಡವಾಳ	527.63
(5) ಹೂಡಿಕೆಗಳು	85.50
(6) ಲಾಭ	13.00

ಸಾಲ ವಿತರಣೆ

(1) ಜಾಮೀನು ಸಾಲ	263.35
(2) ಆಸ್ತಿ ಅಡಮಾನ ಸಾಲ	150.50
(3) ಚಿನ್ನಾಭರಣ ಸಾಲ	8.83
(4) ವಾಹನ ಸಾಲ	1.09

ಆಡಳಿತ ಮಂಡಳಿ ಸದಸ್ಯರು

ಶ್ರೀ ಬಿ.ಆರ್. ನಾರಾಯಣಸ್ವಾಮಿ	ಅಧ್ಯಕ್ಷರು
ಶ್ರೀ ಎಂ. ಚಂದ್ರಶೇಖರ್	ಉಪಾಧ್ಯಕ್ಷರು
ಶ್ರೀ ಕೆ.ಆರ್. ಅನಂತಪದ್ಮನಾಭಗುಪ್ತ	ನಿರ್ದೇಶಕರು
ಶ್ರೀ ಬಿ.ಎಂ. ಗಂಗಹನುಮೇಗೌಡ	ನಿರ್ದೇಶಕರು
ಶ್ರೀ ಮೋಹನ್ ಎನ್. ಶೆಟ್ಟಿ	ನಿರ್ದೇಶಕರು
ಶ್ರೀ ಎಂ. ವೆಂಕಟಾಚಲಪತಿ	ನಿರ್ದೇಶಕರು
ಶ್ರೀ ಎಂ. ಸುಧಾಕರ್	ನಿರ್ದೇಶಕರು
ಶ್ರೀ ಆರ್. ಚಂದ್ರಶೇಖರ್	ನಿರ್ದೇಶಕರು
ಶ್ರೀ ಡಿ.ಟಿ. ಶಂಕರ್	ನಿರ್ದೇಶಕರು
ಶ್ರೀ ಬಿ.ಎಸ್. ಗೋಪಾಲಕೃಷ್ಣ	ನಿರ್ದೇಶಕರು
ಶ್ರೀಮತಿ ಬಿ. ಗಂಗಮ್ಮ	ನಿರ್ದೇಶಕರು
ಶ್ರೀಮತಿ ಎಸ್. ವಿಜಯ	ನಿರ್ದೇಶಕರು
ಶ್ರೀ ಬಾಲರಾಜು	

ಗೌರವ ಸಲಹೆಗಾರರು : ಶ್ರೀ ಡಿ. ಚನ್ನಯ್ಯ

ಕಾರ್ಯದರ್ಶಿ : ಶ್ರೀ ಶಂಭುವಯ್ಯ

"ಸಂಘದ ಗುರಿ : ಸಹಕಾರ, ಸಮೃದ್ಧಿ, ಸಹಬಾಳ್ವೆ"

